# ಹೆಬ್ಬಳ್ಳಿ ಭೂಹೋರಾಟ

## ಕೃತಜ್ಞತೆಗಳು

ಈ ಪುಸ್ತಕ ರೂಪುಗೊಳ್ಳಲು ಹಲವಾರು ಮಂದಿ ಕಾರಣರಾಗಿದ್ದಾರೆ. ಅವರಲ್ಲಿ ಕನ್ನಡ ವಿಶ್ವವಿದ್ಯಲಯದ ಕುಲಪತಿಗಳಾದ ಡಾ. ಬಿ.ಎ.ವಿವೇಕ ರೈ ಪ್ರಮುಖರು. ಅವರ ಸಹಕಾರವಿಲ್ಲದಿದ್ದರೆ ಈ ಪುಸ್ತಕ ಹೊರಬರುತ್ತಿರಲಿಲ್ಲ. ಅವರ ಸಹಕಾರಕ್ಕೆ ಕೃತಜ್ಞತೆಗಳು. ಇನ್ನು ನನ್ನ ಎಲ್ಲ ತೊಂದರೆ ಸಹಿಸಿಕೊಂಡು ಪುಸ್ತಕ ಬರೆಸಿದವರೆಂದರೆ ಪ್ರೊ. ರಹಮತ್ ತರೀಕೆರೆಯವರು. ಅವರ ತಾಳ್ಮೆ, ಪ್ರೋತ್ಸಾಹ ಯಾವತ್ತೂ ಮರೆಯೋಲ್ಲ. ನನ್ನ ತೊಂದರೆಗಳನ್ನು ಬೇರೆ ಯಾರಾಗಿದ್ದರೂ ಸಹಿಸಿಕೊಳ್ಳುತ್ತಿರಲಿಲ್ಲವೊ ಏನೋ. ತರೀಕೆರೆಯವರಿಗೆ ಕೃತಜ್ಞತೆಗಳು. ಅಧ್ಯಯನಕ್ಕೆ ಸಹಕರಿಸಿದ ಮತ್ತೊಬ್ಬರೆಂದರೆ ಈಟಿವಿಯ ಜಿ.ಎನ್. ಮೋಹನ್. ಬೇಕೆಂದಾಗಲೆಲ್ಲಾ ಅವರು ನನಗೆ ರಜೆ ಕೊಟ್ಟಿದ್ದಾರೆ. ಇವರೊಂದಿಗೆ ಕೆಲಸ ಮಾಡುವುದೇ ಒಂದು ಸಂತಸದ ವಿಷಯ. ಇವರಿಗೆ ಧನ್ಯವಾದಗಳು. ಲೋಹಿಯಾ ಅಧ್ಯಯನ ಪೀಠದ ಸಲಹಾ ಸಮಿತಿ ಸದಸ್ಯರಾದ ಕೆ. ಫಣಿರಾಜ್, ಪ್ರೊ. ಕಾಳೇಗೌಡ ನಾಗವಾರ ಅವರಿಗೆ ಧನ್ಯವಾದಗಳು.

ಈ ಪುಸ್ತಕದಲ್ಲಿನ ಪ್ರಮುಖ ವ್ಯಕ್ತಿ ನೀಲಗಂಗಯ್ಯ ಪೂಜಾರ್ ಅವರು ನನಗೆ ಯಾವತ್ತಿಗೂ ಆದರ್ಶ. ಹೆಬ್ಬಳ್ಳಿ ಭೂಹೋರಾಟದ ಕುರಿತು ಅವರು ಅಪಾರ ಮಾಹಿತಿ ನೀಡಿದ್ದಾರೆ. ಇದಕ್ಕಾಗಿ ಅವರಿಗೆ ಕೃತಜ್ಞನಾಗಿದ್ದೇನೆ. ಈ ಪುಸ್ತಕವನ್ನು ಈ ಹಿರಿಯ ಜೀವಕ್ಕೆ ಅರ್ಪಿಸುತ್ತಿದ್ದೇನೆ. ಮಾಹಿತಿ ನೀಡಿದವರು ಇನ್ನು ಹಲವರಿದ್ದಾರೆ. ಅವರುಗಳೆಂದರೆ ಶ್ರೀಯುತರಾದ ಜಿ.ಟಿ. ಪದಕಿ, ಪಾಂಡುರಂಗರಾವ್ ಹೆಬ್ಬೀಕರ್, ಜಿ.ಎಸ್. ಪಾಟೀಲ್ ಕುಲಕರ್ಣಿ, ಸುಹಾಸ್ ಹೆಬ್ಬೀಕರ್, ಶ್ರೀಶೈಲ ರೋಣದ, ವಿ.ವಿ. ಪಾಟೀಲ, ಸೂರ್ಯವಂಶಿ ಇವರೆಲ್ಲರಿಗೂ ಕೃತಜ್ಞ. ಕನ್ನಡ ವಿಶ್ವವಿದ್ಯಾಲಯದಲ್ಲಿ ನನ್ನ ಗುರುಗಳಾದ ಡಾ. ವೆಂಕಟೇಶ್ ಇಂದ್ವಾಡಿ ಅವರನ್ನು ಪ್ರೀತಿಯಿಂದ ನೆನೆಯುತ್ತೇನೆ.

ಕಚೇರಿಗಳಲ್ಲಿ ಈ ಸಂಬಂಧ ಕಡತಗಳನ್ನು ಪರಿಶೀಲಿಸುವಾಗ ಸಹಕರಿಸಿದ ಧಾರವಾಡ ಉಪಸಂಸ್ಥಾಪನಾಧಿಕಾರಿ ನೂರ್ ಮನ್ಸೂರ್ ಅವರಿಗೆ, ಜಿಲ್ಲಾ ಲೋಕಾಯುಕ್ತರಾದ ಎಚ್. ಮಂಜಪ್ಪ ಅವರಿಗೆ ನನ್ನ ಧನ್ಯವಾದಗಳು.

ಅಧ್ಯಯನದುದ್ದಕ್ಕೂ ನನ್ನೊಂದಿಗಿದ್ದ ಅರುಣ್ ಜೋಳದ ಕೂಡ್ಲಿಗಿ, ಪೀರಬಾಷಾ, ನಿಂಗಪ್ಪ ಹೊಸಳ್ಳಿ ಹಾಗೂ ಶ್ವೇತಾಗೆ ಧನ್ಯವಾದಗಳು. ನನ್ನ ಕುಟುಂಬ ವರ್ಗಕ್ಕೆ, ಈಟಿವಿ ಗೆಳೆಯರಿಗೆ ಹಾಗೂ ಪ್ರತ್ಯಕ್ಷ ಪರೋಕ್ಷವಾಗಿ ಸಹಕರಿಸಿದ ಎಲ್ಲರಿಗೂ ಕೃತಜ್ಞತೆಗಳು.

**ಡಾ. ಸತೀಶ್ ಪಾಟೀಲ**

# ಸಂಚಾಲಕರ ಮಾತು

ಕರ್ನಾಟಕದ ಸಮಾಜವಾದಕ್ಕೆ ಸಂಬಂಧಪಟ್ಟ ಅಧ್ಯಯನ ಚಟುವಟಿಕೆಗಳನ್ನು ಹಮ್ಮಿಕೊಳ್ಳಲೆಂದು ಡಾ. ರಾಮಮನೋಹರ ಲೋಹಿಯಾ ಅಧ್ಯಯನ ಪೀಠವು ಕನ್ನಡ ವಿಶ್ವವಿದ್ಯಾಲಯದಲ್ಲಿ ಸ್ಥಾಪನೆಯಾಗಿದೆ. ರಾಮಮನೋಹರ ಲೋಹಿಯಾ ಅವರು ಧೀಮಂತ ರಾಜಕಾರಣಿ ಮಾತ್ರವಲ್ಲದೆ, ೨೦ನೇ ಶತಮಾನದ ಭಾರತದ ಪ್ರಮುಖ ಚಿಂತಕರಲ್ಲಿ ಸಹ ಒಬ್ಬರು. ಅವರ ಸಂಪರ್ಕವು ಕರ್ನಾಟಕಕ್ಕೆ ೧೯೫೦ರ ದಶಕದಲ್ಲಿ ಹಲವು ಚಾರಿತ್ರಿಕ ಕಾರಣಗಳಿಂದ ಒದಗಿ ಬಂದಿತು. ಮುಂದೆ ಅದು ಒಂದು ದೊಡ್ಡ ಪ್ರಭಾವವಾಗಿ ಕರ್ನಾಟಕದ ರಾಜಕಾರಣ, ಚಳುವಳಿ, ತಾತ್ವಿಕ ಚಿಂತನೆ ಹಾಗೂ ಸಾಹಿತ್ಯವನ್ನು ವ್ಯಾಪಿಸಿತು. ಈ ಪ್ರಭಾವವು, ೨೦ನೇ ಶತಮಾನದ ಕೊನೆಯ ಅರ್ಧಭಾಗದ ಕರ್ನಾಟಕದ ರಾಜಕಾರಣ, ಚಿಂತನೆ, ಸಾಹಿತ್ಯ ಹಾಗೂ ಸಾಂಸ್ಕೃತಿಕ ಜಗತ್ತನ್ನು ಲೋಹಿಯಾ ಅವರನ್ನು ಕೈಬಿಟ್ಟು ಚರ್ಚಿಸಲು ಸಾಧ್ಯವಿಲ್ಲ ಎಂಬಂತೆ ಆವರಿಸಿಕೊಂಡಿತು. ವಿಶಾಲ ನೆಲೆಯಲ್ಲಿ ಲೋಹಿಯಾ ಪೀಠವು ಲೋಹಿಯಾವಾದಿ ಪ್ರಭಾವವನ್ನು ಒಳಗೊಂಡಂತೆ ಎಲ್ಲ ಬಗೆಯ ಸಮಾಜವಾದಿ ಚಿಂತನೆಗಳಿಗೆ ಒಂದು ವೇದಿಕೆ ಆಗಬೇಕೆಂಬುದು ವಿಶ್ವವಿದ್ಯಾಲಯದ ಉದ್ದೇಶವಾಗಿದೆ. ಈ ನಿಟ್ಟಿನಲ್ಲಿ ಅದು ಕಳೆದ ಹಲವಾರು ವರ್ಷಗಳಿಂದ ಕೆಲವು ಉಪಯುಕ್ತವಾದ ಕಮ್ಮಟಗಳನ್ನೂ ವಿಚಾರ ಸಂಕಿರಣಗಳನ್ನೂ ಹಮ್ಮಿಕೊಂಡು ಬಂದಿದೆ. ಹಲವು ಪ್ರಕಟಣೆಗಳನ್ನು ಮಾಡಿಕೊಂಡು ಬಂದಿದೆ. ಈ ಪರಂಪರೆಯನ್ನು ಮುಂದುವರೆಸಿ, ೨೦೦೫-೦೭ನೇ ಸಾಲಿನಲ್ಲಿ ಎರಡು ಬಗೆಯ ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಯಿತು. ಅವುಗಳಲ್ಲಿ ಮೊದಲನೆಯದು ಉಪನ್ಯಾಸ ಯೋಜನೆ. ಎರಡನೆಯದು ಸಂಶೋಧನ ಯೋಜನೆ. ಈ ಯೋಜನೆಗಳನ್ನು ಕೈಗೆತ್ತಿಕೊಳ್ಳುವಲ್ಲಿ, ಪೀಠಕ್ಕೆ ಎರಡು ಮುಖ್ಯ ಆಶಯಗಳಿದ್ದವು. ೧. ಈ ಯೋಜನೆಗಳು ಕರ್ನಾಟಕದ ಸಮಾಜವಾದಿ ಚಿಂತನೆ, ಚಳುವಳಿ, ಸಾಹಿತ್ಯ ಹಾಗೂ ರಾಜಕಾರಣಕ್ಕೆ ಸಂಬಂಧಿಸಿದಂತೆ ಹೆಚ್ಚು ಚರ್ಚೆಗೆ ಬಾರದ ಆದರೆ ತಾತ್ವಿಕವಾಗಿ ಮಹತ್ವದ ಸಂಗತಿಗಳ ಮೇಲೆ ಬೆಳಕು ಚೆಲ್ಲುವಂತಿರಬೇಕು. ೨. ಈ ಯೋಜನೆಗಳು ಕರ್ನಾಟಕದ ಸಮಕಾಲೀನ ರಾಜಕೀಯ ಸಾಮಾಜಿಕ ಬದುಕಿಗೆ ಲಗತ್ತನ್ನು ಪಡೆದುಕೊಂಡು ಒಂದು ಬಗೆಯ ಚಲನಶೀಲತೆಯನ್ನು ಪ್ರೇರಿಸುವಂತಿರಬೇಕು.

ಈ ಹಿನ್ನೆಲೆಯಲ್ಲಿ ಮೊದಲ ಹಂತದಲ್ಲಿ 'ಕರ್ನಾಟಕದಲ್ಲಿ ಹಿಂದುಳಿದ ಸಮುದಾಯಗಳ ಹೊಸ ರಾಜಕೀಯ ಸಮೀಕರಣಗಳು' ಎಂಬ ವಿಷಯ ಕುರಿತು ದಿನಾಂಕ. ೧೯.೧೦.೨೦೦೬ ರಂದು, ವಿಶ್ವವಿದ್ಯಾಲಯದ ಆವರಣದಲ್ಲಿ ಈ ಉಪನ್ಯಾಸ ಕಾರ್ಯಕ್ರಮವನ್ನು ಏರ್ಪಡಿಸಲಾಯಿತು. ಲೋಹಿಯಾ ಚಿಂತನೆಗಳನ್ನು ಅನುವಾದ ಮಾಡಿಸಿ ಹಾಗೂ ಸಂಪಾದಿಸಿ ಕೊಟ್ಟಿರುವ, ಲೋಹಿಯಾ ಸಮಾಜವಾದದ ಹಿನ್ನೆಲೆಯಲ್ಲಿ ಕರ್ನಾಟಕದ ಸಾಹಿತ್ಯ ರಾಜಕಾರಣ ಸಮಾಜಗಳನ್ನು ಸೂಕ್ಷ್ಮವಾಗಿ ಸೈದ್ಧಾಂತಿಕ ಪ್ರಬುದ್ಧತೆಯಲ್ಲಿ ವಿಶ್ಲೇಷಿಸುವ ಡಾ. ನಟರಾಜ ಹುಳಿಯಾರ್ ಅವರು ಈ ಉಪನ್ಯಾಸ ನಡೆಸಿಕೊಟ್ಟರು. ಎರಡನೆಯ ಹಂತದಲ್ಲಿ ಮೂರು ಸಂಶೋಧನ ಯೋಜನೆಗಳನ್ನು ಹಂಪಿ ಪರಿಸರದ ಪ್ರತಿಭಾವಂತರೂ ಹೊಸ ತಲೆಮಾರಿನ ಲೇಖಕರೂ ಆದ ಮೂವರು ಯುವಕರಿಗೆ ನೀಡಲಾಯಿತು. ಅವರೆಂದರೆ ೧. ಸಮಾಜವಾದಿ ಚಳುವಳಿಗಾರರ ಸಂದರ್ದಶನ ಸಂಪುಟ – ಬಿ.ಪೀರ್ ಬಾಶಾ, ೨. ಸೊಂಡೂರು ಭೂಹೋರಾಟ- ಅರುಣ್‌ಕುಮಾರ ಜೋಳದಕೂಡ್ಲಿಗಿ. ೩. ಹೆಬ್ಬಳ್ಳಿ ಭೂಹೋರಾಟ – ಡಾ. ಸತೀಶ್ ಪಾಟೀಲ. ಈ ಮೂರೂ ಯೋಜನೆಗಳು ಈಗ ಪೂರ್ಣಗೊಂಡು ಪುಸ್ತಕ ರೂಪದಲ್ಲಿ ಪ್ರಕಟವಾಗುತ್ತಿವೆ.

'ಹೆಬ್ಬಳ್ಳಿ ಭೂಹೋರಾಟ' ಎಂಬ ಪ್ರಸ್ತುತ ಕೃತಿಯನ್ನು ರಚಿಸಿಕೊಟ್ಟಿರುವ ಡಾ. ಸತೀಶ್ ಪಾಟೀಲ ಅವರು ಕನ್ನಡ ವಿಶ್ವವಿದ್ಯಾಲಯದಲ್ಲಿ ಪಿಎಚ್‌ಡಿ ವಿದ್ಯಾರ್ಥಿಯಾಗಿ ಅಧ್ಯಯನ ಮಾಡಿದವರು. ಶ್ರೀಯುತರು ಈ ಕೃತಿಯ ರಚನೆಗಾಗಿ ಧಾರವಾಡ ಜಿಲ್ಲೆಯ ಹೆಬ್ಬಳ್ಳಿಗೆ ಹೋಗಿ ಅಲ್ಲಿನ ಹೋರಾಟದಲ್ಲಿ ಪಾಲುಗೊಂಡ ಹಾಗೂ ಫಲಾನುಭವಿಗಳಾದ ರೈತರ ಸಂಬಂಧಿಕರ ಜತೆ ಮಾತುಕತೆ ನಡೆಸಿದ್ದಾರೆ. ಹೆಬ್ಬಳ್ಳಿ ಜಹಗೀರುದಾರ ಕುಟುಂಬದ ಮುಖ್ಯಸ್ಥರ ಜತೆ ಮಾತಾಡಿದ್ದಾರೆ. ಹೆಬ್ಬಳ್ಳಿ ಭೂಹೋರಾಟದ ಮುಖ್ಯ ನಾಯಕರೂ ಲೋಹಿಯಾವಾದಿ ಹೋರಾಟಗಾರರೂ ಆದ ಶ್ರೀ ನೀಲಗಂಗಯ್ಯ ಪೂಜಾರ ಅವರ ಜತೆ ಸಂದರ್ಶನ ಮಾಡಿದ್ದಾರೆ. ಈ ಹೋರಾಟಕ್ಕೆ ಸಂಬಂಧಪಟ್ಟ ದಾಖಲೆಗಳಿಗಾಗಿ ಗ್ರಂಥಾಲಯದಲ್ಲೂ ಪತ್ರಿಕಾ ಕಛೇರಿಗಳಲ್ಲೂ ಹುಡುಕಾಟ ಮಾಡಿದ್ದಾರೆ. ಇತರೆ ಭೂಹೋರಾಟ ಕುರಿತ ಕೃತಿಗಳನ್ನು ಅಧ್ಯಯನ ಮಾಡಿ

ಅದರ ತಿಳುವಳಿಕೆಯನ್ನು ಇಲ್ಲಿ ಬಳಸಿದ್ದಾರೆ. ಅರ್ಧಶತಮಾನದ ಬಳಿಕ ಚಳುವಳಿಯ ಸ್ಮೃತಿಗಳು ಮರೆವಿಗೆ ಸಲ್ಲುತ್ತಿರುವ ಸನ್ನಿವೇಶದಲ್ಲಿ ಹೋಗಿ, ಈಗ ಹೇಗೆ ಹೆಬ್ಬಳ್ಳಿಯು ಬೇರೆಬೇರೆ ರೂಪುಗಳಲ್ಲಿ ಬದಲಾಗಿದೆ ಎಂಬುದನ್ನು ಸೂಕ್ಷ್ಮವಾಗಿ ವಿಶ್ಲೇಷಣೆ ಮಾಡಿದ್ದಾರೆ. ಹೀಗೆ ಶ್ರಮಪಟ್ಟು ಅಜ್ಞಾತವಾಗಿರುವ ಈ ಭೂಹೋರಾಟದ ಬಗ್ಗೆ ಕೃತಿ ರಚಿಸಿಕೊಟ್ಟಿರುವ ಡಾ. ಸತೀಶ್ ಪಾಟೀಲರಿಗೆ ಲೋಹಿಯಾ ಪೀಠದ ಪರವಾಗಿ ಧನ್ಯವಾದಗಳನ್ನು ಹೇಳುತ್ತೇನೆ.

ಈ ಕೃತಿಯ ವಿಶೇಷತೆಗಳೆಂದರೆ ೧. ಕರ್ನಾಟಕದ ಚರಿತ್ರೆಯಲ್ಲಿ ಇದು ಅಷ್ಟು ಚರ್ಚೆಗೆ ಬಾರದ ಒಂದು ಅಧ್ಯಾಯವಾಗಿದೆ. ಅನೇಕ ಸಲ ದೊಡ್ಡ ಪ್ರಮಾಣದಲ್ಲಿ ಪ್ರಚಾರ ಪಡೆಯುವ ಹೋರಾಟಗಳ ಹಾಗೆಯೇ ಆಯಾ ಪ್ರದೇಶಗಳಲ್ಲಿ ಸ್ವಯಂ ಸ್ಫೂರ್ತಿಯಿಂದ ಹುಟ್ಟುವ ಈ ಪುಟ್ಟ ಚಳುವಳಿಗಳು ಸಾವಿರಾರು ಜನರಿಗೆ ಹೊಸ ಬದುಕನ್ನು ಕೊಟ್ಟಿರುತ್ತವೆ. ಅಂತಹ ಚಳುವಳಿಗಳಲ್ಲಿ ಹೆಬ್ಬಳ್ಳಿ ಭೂಹೋರಾಟವೂ ಒಂದು. ಕಾಗೋಡು ಸತ್ಯಾಗ್ರಹದಲ್ಲಿ ನೇರವಾಗಿ ಲೋಹಿಯಾ ಅವರ ಪ್ರವೇಶವಿದ್ದರೆ ಇದರಲ್ಲಿ ಹಾಗೆ ಯಾವುದೇ ರಾಷ್ಟ್ರಮಟ್ಟದ ನಾಯಕರ ಪ್ರವೇಶವೂ ಇರಲಿಲ್ಲ. ೨. ಕರ್ನಾಟಕದ ನೆಲದಲ್ಲಿ ನಡೆದ ಈ ಹೋರಾಟಕ್ಕೆ ಪ್ರೇರಣೆ ಒದಗಿದ್ದು ಮಹಾರಾಷ್ಟ್ರದ ಒಬ್ಬ ವ್ಯಕ್ತಿಯಿಂದ. ಅವರೆಂದರೆ ನಾಸಿಕ್ ತ್ರ್ಯಂಬಕೇಶ್ವರ ಭಾಗದ ಹೀರೆ ಅವರು. ನಾಸಿಕ್ ತ್ರ್ಯಂಬಕೇಶ್ವರದ ಗುಡಿಯ ಕ್ಷೌರಿಕರಾದ ಹೀರೆಯವರು, ಅಲ್ಲಿನ ದೊಡ್ಡ ಭೂಸ್ವಾಮಿ ಅವರ ವಿರುದ್ಧ ಚುನಾವಣೆಗೆ ನಿಂತು, ಗೆದ್ದು, ರಾಜ್ಯದ ಮಂತ್ರಿಯಾಗಿ ಒಂದು ಕಾನೂನಿನ ಮೂಲಕ ಮಹಾರಾಷ್ಟ್ರದ ಜಹಗೀರು ಭೂಮಿಯನ್ನು ಸರ್ಕಾರವೇ ವಶಪಡಿಸಿಕೊಂಡು, ಭೂರಹಿತರಿಗೆ ಹಂಚುವ ಕೆಲಸ ಮಾಡಿದವರು. ಅವರ ಪ್ರೇರಣೆಯಿಂದ ವಕೀಲರೂ ಮುಂಬೈ ವಿಧಾನಸಭೆ ಸದಸ್ಯರೂ ಆಗಿದ್ದ ಲೋಹಿಯಾವಾದಿ ಚಿಂತಕ ಶ್ರೀ ನೀಲಗಂಗಯ್ಯ ಪೂಜಾರ ಅವರು ಈ ಭೂಹೋರಾಟವನ್ನು ಕೈಗೆತ್ತಿಕೊಂಡರು ಮಾತ್ರವಲ್ಲ ಈ ಹೋರಾಟದಿಂದ ಭೂರಹಿತರಿಗೆ ಭೂಮಿ ಸಿಗುವಂತೆ ಮಾಡಿದರು. ೩. ಮುಂದೆ ಈ ಹೋರಾಟವು ಹುಬ್ಬಳ್ಳಿ ಧಾರವಾಡಗಳಲ್ಲಿ ನಿವೇಶನ ಹೋರಾಟಗಳಿಗೂ ಕಾರಣವಾಯಿತು. ಹುಬ್ಬಳ್ಳಿಯಲ್ಲಿ ಲೋಹಿಯಾನಗರವು ರೂಪುಗೊಂಡಿತು. ೪. ಆದರೆ ಹೆಬ್ಬಳ್ಳಿ ಭೂಹೋರಾಟವು ಸೊಂಡೂರು ಅಥವಾ ಕಾಗೋಡುಗಳ ಹಾಗೆ ಆಳುವ ಸರ್ಕಾರದ ವಿರುದ್ಧದ ನೆಲೆಯನ್ನು ಪಡೆದುಕೊಳ್ಳದೆ, ಪ್ರಭುತ್ವದ ಮಣಿಯುವಿಕೆ ಅಥವಾ ಸಹಕಾರದಿಂದ ಕೊನೆಗೊಂಡಿತು. ೫. ವಿಶೇಷವೆಂದರೆ ಯಾವ ಹೆಬ್ಬಳ್ಳಿಯ ಜಹಗೀರು ಮನೆತನವು ಹಿಡಿದುಕೊಂಡಿದ್ದ ದೊಡ್ಡ ಭೂಮಾಲಿಕತ್ವದ ವಿರುದ್ಧ ಭೂಮಿಯಿಲ್ಲದ ರೈತರು ಹೋರಾಡಿ ಭೂಮಿ ಪಡೆದರೋ ಅದೇ ಕುಟುಂಬಕ್ಕೆ ಸೇರಿದ ನಟರೂ ಆದ ಸುರೇಶ್ ಹೆಬ್ಬಳ್ಳೀಕರ ಅವರು ಮುಂದೆ ಪರಿಸರ ಹೋರಾಟಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಹೀಗೆ ಹಲವು ವಿಶಿಷ್ಟ ಸಂಗತಿಗಳನ್ನು ಒಳಗೊಂಡಿರುವ ಈ ಕೃತಿಯು ಕರ್ನಾಟಕದ ಚರಿತ್ರೆ, ರಾಜಕಾರಣ ಹಾಗೂ ಚಳುವಳಿಗಳ ಅಧ್ಯಯನದಲ್ಲಿ ಮಹತ್ವದ ಆಕರಗ್ರಂಥವಾಗಿ ಬಳಕೆಯಾಗುವುದು ಎಂಬ ನಂಬಿಕೆ ಪೀಠಕ್ಕಿದೆ.

ಲೋಹಿಯಾ ಪೀಠದ ಯೋಜನೆಗಳ ಹಿಂದೆ ಆಡಳಿತಾತ್ಮಕವಾಗಿ ಮಾತ್ರವಲ್ಲದೆ ಸೈದ್ಧಾಂತಿಕವಾಗಿ ಕೂಡ ಬೆಂಬಲವಾಗಿ ನಿಂತವರು, ಮಾನ್ಯ ಕುಲಪತಿಯವರಾದ ಡಾ. ಬಿ.ಎ. ವಿವೇಕರೈ ಅವರು. ತಮ್ಮ ಸಮಾಜವಾದಿ ಒಲವಿನ ಕಾರಣ, ಅವರು ಪೀಠದ ಯೋಜನೆಗಳನ್ನು ರೂಪಿಸಲು ಬೇಕಾದ ಎಲ್ಲ ಮಾರ್ಗದರ್ಶನವನ್ನು ನೀಡಿದರು. ಅವರ ವಿಶ್ವಾಸವನ್ನು ಹಾಗೂ ಬೌದ್ಧಿಕ ನೆರವನ್ನು ಕೃತಜ್ಞತೆಯಿಂದ ನೆನೆಯುತ್ತೇನೆ. ಪ್ರಸ್ತುತ ಸಂದರ್ಶನ ಸಂಪುಟವು ಹೀಗೆ ಉಪಯುಕ್ತವಾಗಿ ರೂಪುಗೊಳ್ಳಲು ಕಾರಣಕರ್ತರಾದವರು ಪೀಠದ ಸಲಹಾ ಸಮಿತಿ ಸದಸ್ಯರಾದ ಡಾ. ಕಾಳೇಗೌಡ ನಾಗವಾರ ಹಾಗೂ ಪ್ರೊ. ಕೆ. ಫಣಿರಾಜ ಅವರು. ಇವರು ಲೇಖಕರಾದ ಸತೀಶ್ ಪಾಟೀಲರ ಜತೆ ಮಾಡಿದ ಚರ್ಚೆಯು ಪುಸ್ತಕವನ್ನು ಉಪಯುಕ್ತವಾಗಿ ರೂಪಿಸಲು ನೆರವಾಯಿತು. ಈ ಇಬ್ಬರು ಚಿಂತಕರ ನೆರವನ್ನು ಇಲ್ಲಿ ನೆನೆಯುತ್ತೇನೆ. ಈ ಪುಸ್ತಕದ ಅಕ್ಷರಜೋಡಣೆ ಮಾಡಿದವರು ಶ್ರೀ ಸಾವಳಗಿ ಶಿವಲಿಂಗೇಶ್ವರ ಗ್ರಾಫಿಕ್ಸ್‌ನ ಶ್ರೀಮತಿ ಬಿ. ರಶ್ಮಿ ಕೃಪಾಶಂಕರ್ ಅವರು. ಇದರ ವಿನ್ಯಾಸವನ್ನು ಮಾಡಿದವರು ಸಂಜ್ಞಾನಮೂರ್ತಿ ಅವರು. ಮುಖಪುಟವನ್ನು ರಚಿಸಿದವರು ಕೆ.ಕೆ. ಮಕಾಳಿ ಅವರು. ಈ ಪುಸ್ತಕವನ್ನು ಪ್ರೀತಿಯಿಂದಲೂ ವಿಶ್ವಾಸದಿಂದಲೂ ಪ್ರಸಾರಾಂಗದ ನಿರ್ದೇಶಕರಾದ ಪ್ರೊ. ಮಲ್ಲೇಶ್ವರಂ ಜಿ. ವೆಂಕಟೇಶ ಅವರು ಪ್ರಕಟಿಸುತ್ತಿರುವರು. ಇವರೆಲ್ಲರನ್ನು ಕೃತಜ್ಞತೆಯಿಂದ ನೆನೆಯುತ್ತೇನೆ. ಈ ಪುಸ್ತಕವನ್ನು ಪ್ರೀತಿಯಿಂದ ಬರಮಾಡಿಕೊಳ್ಳಬೇಕು ಎಂದು ಓದುಗರಲ್ಲಿ ವಿನಂತಿಸುತ್ತೇನೆ.

**ರಹಮತ್ ತರೀಕೆರೆ**

# ಬಯಲನು ತುಂಬುವ ಆಲಯದ ಬೆಳಕಿನ ಬೀಜಗಳು

ಕನ್ನಡ ವಿಶ್ವವಿದ್ಯಾಲಯ ಕನ್ನಡ ಸಂಸ್ಕೃತಿಯ ಬಹುತ್ವದ ನೆಲೆಗಳನ್ನು ಹುಡುಕುವ, ಗಟ್ಟಿಗೊಳಿಸುವ, ಹರಡುವ ಕಾಯಕವನ್ನು ನೋಂಪಿಯಂತೆ ನಡೆಸಿಕೊಂಡು ಬಂದಿದೆ. ಕನ್ನಡ ಸಂಸ್ಕೃತಿಯನ್ನು ಮತ್ತೆ ಮತ್ತೆ ನಿರ್ವಚನ ಮಾಡಿಕೊಳ್ಳುವ ಪ್ರಕ್ರಿಯೆಯಲ್ಲಿ ಕನ್ನಡ ವಿಶ್ವ ವಿದ್ಯಾಲಯವು ಒಂದು ಆಡುಂಬೊಲನವಾಗಿ ಕಾರ್ಯ ನಿರ್ವಹಿಸುತ್ತಿದೆ. ನಮಗೆ ಗೊತ್ತಿರುವ ಸಂಸ್ಕೃತಿಯ ಅರ್ಥಗಳ ಆಚೆಗೆ ಅನೂಹ್ಯ ಲೋಕಗಳ ಕಡೆಗೆ ತನ್ನನ್ನು ಮತ್ತು ಕನ್ನಡಿಗರನ್ನು ಒಯ್ಯುವ ಪಯಣದ ದಾರಿಗಳನ್ನು ರೂಪಿಸುವ ಮಹತ್ವದ ಸಾಹಸದ ಹೆಜ್ಜೆಗಳು ಮೂಡಿಬಂದಿವೆ. ಇದು ನಿರಂತರ ನಡೆಯಬೇಕಾದ ಬಹುದಾರಿಗಳ ಮಹಾಯಾನ.

ಇಪ್ಪತ್ತೊಂದನೆಯ ಶತಮಾನದ ಆರಂಭದಲ್ಲಿ ಜಾಗತೀಕರಣದ ಈ ಸಂಕ್ರಮಣ ಸ್ಥಿತಿಯಂತೆ ಕನ್ನಡ ವಿಶ್ವವಿದ್ಯಾಲಯದ ರಚನೆ ಮತ್ತು ಕಾರ್ಯಗಳು ಸವಾಲಿನವು ಮತ್ತು ಜವಾಬ್ದಾರಿಯವೂ ಆಗಿವೆ. ‘ಕನ್ನಡ’ ಎನ್ನುವ ಪರಿಕಲ್ಪನೆಯನ್ನು ಭಾಷೆ, ಸಾಹಿತ್ಯ, ಬದುಕು ಮತ್ತು ಅದರ ಆಧುನಿಕ ಸನ್ನಿವೇಶಗಳಲ್ಲಿ ಅರ್ಥೈಸುವ ಮತ್ತೆ ಕಟ್ಟುವ ಕೆಲಸವನ್ನು ಕನ್ನಡ ವಿಶ್ವವಿದ್ಯಾಲಯ ಒಂದು ಕಾಯಕದಂತೆ ಕೈಗೆತ್ತಿಕೊಂಡಿದೆ. ಕನ್ನಡ ಮತ್ತು ಅಭಿವೃದ್ಧಿ ಎನ್ನುವ ಎರಡು ಪರಿಕಲ್ಪನೆಗಳು ಎದುರುಬದುರಾಗುವ ಆತಂಕ ಒಂದು ಕಡೆಯಾದರೆ, ಅವು ಒಂದನ್ನೊಂದು ಪ್ರಭಾವಿಸಿ ನೆರವಾಗುವ ಆವರಣವನ್ನು ನಿರ್ಮಾಣ ಮಾಡುವುದು ಇನ್ನೊಂದೆಡೆ ಇರುತ್ತದೆ. ಇಂತಹ ಸಂದರ್ಭದಲ್ಲಿ ಕನ್ನಡ ವಿಶ್ವವಿದ್ಯಾಲಯವು ಈ ಸಂಬಂಧಿಯಾದ ಹೊಸ ಆಲೋಚನೆಗಳ ಸಂವಾದ ಮತ್ತು ಅದರ ಆನ್ವಯಿಕ ಸಾಧನೆಗಳಲ್ಲಿ ತನ್ನನ್ನು ತೊಡಗಿಸಿಕೊಳ್ಳಲು ಬಯಸಿದೆ.

ಕನ್ನಡವು ಕಾಗದರಹಿತ ಮಾಧ್ಯಮದಲ್ಲಿ ಕಾಣಿಸಿಕೊಳ್ಳುತ್ತಿರುವಾಗಲೂ ಪುಸ್ತಕ ರೂಪದಲ್ಲಿ ಕನ್ನಡ ಕೃತಿಗಳ ಪ್ರಕಟಣೆ ಸಮಾನಾಂತರವಾಗಿ ಕ್ರಿಯಾಶೀಲವಾಗಿ ನಡೆಯುವುದು ಬಹಳ ಮುಖ್ಯವಾದದ್ದು. ತಾಂತ್ರಿಕ-ಮೌಖಿಕ ಮಾಧ್ಯಮದಲ್ಲಿ ಕನ್ನಡವು ಬಳಕೆಯಾಗುತ್ತಿರುವಾಗಲೇ ಕಾಗದದಲ್ಲಿ ಕನ್ನಡ ಅಕ್ಷರಗಳು ಮುದ್ರಣಗೊಂಡು ಕಣ್ಣಿಗೆ, ಕಿವಿಗೆ ಮತ್ತು ಮನಸ್ಸಿಗೆ ಕನ್ನಡವನ್ನು ಸಂವಹನಗೊಳಿಸುವ ಪ್ರಕ್ರಿಯೆ ನಿರಂತರವಾಗಿ ನಡೆಯಬೇಕಿದೆ. ಇಲ್ಲಿ ಪ್ರಕಟಗೊಳ್ಳುವ ಮಾಧ್ಯಮದೊಂದಿಗೆ ಅಭಿವ್ಯಕ್ತಗೊಳ್ಳುವ ಚಿಂತನಾ ಶರೀರವೂ ಮುಖ್ಯವಾದದ್ದು. ಭಾಷೆ, ಸಾಹಿತ್ಯ, ಕಲೆಗಳು, ವಿಜ್ಞಾನ, ತಂತ್ರಜ್ಞಾನ, ಸಮಾಜವಿಜ್ಞಾನ ಎನ್ನುವ ಬೌದ್ಧಿಕ ಗಡಿ ರೇಖೆಗಳನ್ನು ಕಳಚಿಕೊಂಡು ಕನ್ನಡ ಜ್ಞಾನವು ಕನ್ನಡ ವಿಶ್ವವಿದ್ಯಾಲಯದಲ್ಲಿ ರೂಪುಗೊಳ್ಳುವ ಮತ್ತು ಪ್ರಕಟಗೊಳ್ಳುವ ಪ್ರಕ್ರಿಯೆ ನಡೆಯುತ್ತಿದೆ.

ಕನ್ನಡ ವಿಶ್ವವಿದ್ಯಾಲಯದ ಡಾ. ರಾಮಮನೋಹರ ಲೋಹಿಯಾ ಅಧ್ಯಯನ ಪೀಠದ ಮಹತ್ವದ ಯೋಜನೆಯಾದ ಹೆಬ್ಬಳ್ಳಿ ಭೂಹೋರಾಟವು ಅಪೂರ್ವ ಮಾಹಿತಿ ಮತ್ತು ಚಿಂತನೆಗಳ ಶರೀರವಾದ ಪುಸ್ತಕ ರೂಪದಲ್ಲಿ ಪ್ರಕಟವಾಗುತ್ತಿರುವುದು ತುಂಬಾ ಧನ್ಯತೆಯ ಸಂಗತಿ. ಕರ್ನಾಟಕದ ಸಮಾಜವಾದಿ ಚಿಂತನೆಗೆ ನೆಲೆಬೆಲೆಗಳನ್ನು ತಂದುಕೊಟ್ಟ ಡಾ. ರಾಮಮನೋಹರ ಲೋಹಿಯಾ ಅವರ ಸಮಾಜವಾದಿ ಚಿಂತನೆಯ ಪ್ರಭಾವ ಅನೇಕ ಕ್ಷೇತ್ರಗಳಲ್ಲಿ ಆಳವಾಗಿ ಬೇರೂರಿದೆ. ಕನ್ನಡ ಸಾಹಿತ್ಯಕ್ಕೆ ಸಾಮಾಜಿಕ ಹೋರಾಟದ ಶಕ್ತಿ ಆಯಾಮವನ್ನು ದೊರಕಿಸಿಕೊಟ್ಟಿದ್ದು ಲೋಹಿಯಾ ಚಿಂತನೆ, ಹಣ, ಅಧಿಕಾರ ಮತ್ತು ಭೋಗ ಇವು ಕರ್ನಾಟಕದ ಆಧುನಿಕ ಸಮಾಜದ ಪ್ರಭುತ್ವಾತ್ಮಕ ಧೋರಣೆಯಾಗಿರುವ ಇಂದಿನ ಸಂದರ್ಭದಲ್ಲಿ ಭೂಗತವಾಗಿರುವ ಲೋಹಿಯಾ ಚಿಂತನೆಯ ಹೋರಾಟದ ನೆನಪುಗಳನ್ನು ಉತ್ಖನನ ಮಾಡಿ ಮತ್ತೆ ಕಟ್ಟುವ ಸಾಹಸವನ್ನು ನಮ್ಮ ಲೋಹಿಯಾ ಪೀಠ ಕೈಗೆತ್ತಿಕೊಂಡಿದೆ. **ಹೆಬ್ಬಳ್ಳಿ ಭೂಹೋರಾಟ** ಎನ್ನುವ ಈ ಪುಸ್ತಿಕೆ ಅಂಥ ಸಾಹಸಮಯ ಉತ್ಖನನದ ಫಲ. ಲೋಹಿಯಾ ಅಧ್ಯಯನ ಪೀಠದ ಸಂಚಾಲಕರಾದ ಡಾ. ರಹಮತ್ ತರೀಕೆರೆ ಅವರು ತಮ್ಮ ಸಮಾಜವಾದಿ ಚಿಂತನೆ ಮತ್ತು ಕಾರ್ಯಕ್ಷಮತೆಯ ಫಲವಾಗಿ ಈ ಯೋಜನೆಯ ಕನಸನ್ನು ನನಸಾಗಿಸಿದ್ದಾರೆ. ಇಲ್ಲಿ ತುಂಬಾ ಮಹತ್ವದ ಹೋರಾಟವೊಂದರ ಸಮಗ್ರ ಚಿತ್ರಣ ಮೌಖಿಕ ಪರಂಪರೆಯಿಂದ ಲಿಖಿತ ಪರಂಪರೆಗೆ ರೂಪಾಂತರಗೊಂಡಿದೆ. ದಾಖಲಾಗದ ಅನೇಕ ಸಂಗತಿಗಳು ಈ ಯೋಜನೆಯ ಫಲವಾಗಿ ಮೊದಲಬಾರಿಗೆ ಬೆಳಕು ಕಾಣುತ್ತಿವೆ. ಇದು ತುಂಬಾ ಜವಾಬ್ದಾರಿಯ ಹಾಗೂ

ಅಪಾಯಕಾರಿಯಾದ ಕೆಲಸವೂ ಹೌದು. ಸತ್ಯದ ಕಠೋರ ಸಂಗತಿಗಳು ದಾಖಲೆಗೆ ಒಳಾಗಾಗಲು ಹಿಂಜರಿಯುತ್ತವೆ. ಮಾಧ್ಯಮ ಕ್ಷೇತ್ರದ ಭರವಸೆಯ ತರುಣ ಡಾ. ಸತೀಶ್ ಪಾಟೀಲ ಅವರ **ಹೆಬ್ಬಳ್ಳಿ ಭೂಹೋರಾಟ** ಪುಸ್ತಿಕೆಯು ಲೋಹಿಯಾ ಚಿಂತನೆಯು ಉಂಟು ಮಾಡಿದ ಕ್ರಾಂತಿಯ ಒಂದು ವಿಶಿಷ್ಟ ದಾಖಲೆ. ಧಾರವಾಡದ ಬಳಿಯ ಹೆಬ್ಬಳ್ಳಿ ಗ್ರಾಮವು ಭೂಹೋರಾಟದಲ್ಲಿ ಪಾಲ್ಗೊಂಡ ಅನೇಕ ಅಪೂರ್ವ ಮಾಹಿತಿಗಳನ್ನು ಡಾ. ಸತೀಶ್ ಪಾಟೀಲ ಅವರು ಅನೇಕ ಹಿರಿಯ ಹೋರಾಟಗಾರರನ್ನು ಸಂದರ್ಶಿಸಿ ಮೌಖಿಕ ಪರಂಪರೆಯಿಂದ ಲಿಖಿತ ಪರಂಪರೆಗೆ ದಾಖಲಿಸಿ ಈ ಕೃತಿ ರಚಿಸಿದ್ದಾರೆ. ತುಂಬಾ ಸ್ಥಳೀಯವಾಗಿ ನಡೆದ ಈ ಹೋರಾಟವು ಕರ್ನಾಟಕದ ಗಮನವನ್ನು ವಿಶೇಷವಾಗಿ ಸೆಳೆಯದ ಕಾರಣ ಈ ಕುರಿತು ಮೊಟ್ಟ ಮೊದಲಬಾರಿಗೆ ಒಂದು ಅಪೂರ್ವ ಮಾಹಿತಿಯಾಗಿ ಪ್ರಕಟವಾಗುತ್ತಿದೆ. ಪ್ರೀತಿ ಮತ್ತು ಪರಿಶ್ರಮದಿಂದ ಸಂದರ್ಶನ ಸಂವಾದದ ಮೂಲಕ ಭೂಗತವಾದ ಭೂ ಚಳುವಳಿಯ ಅಪೂರ್ವ ಮಾಹಿತಿಯ ಶರೀರವಾಗಿ ರೂಪುಗೊಳ್ಳಲು ಕಾರಣರಾದ ಡಾ. ಸತೀಶ್ ಪಾಟೀಲ ಅವರನ್ನು ವಿಶೇಷವಾಗಿ ಅಭಿನಂದಿಸುತ್ತೇನೆ.

ಈ ಯೋಜನೆಯ ಮಾರ್ಗದರ್ಶಕರಾಗಿ ಹೆಜ್ಜೆ ಹೆಜ್ಜೆಗೂ ಸಲಹೆ ಸೂಚನೆಗಳನ್ನು ಕೊಟ್ಟು ತುಂಬಾ ಅಪೂರ್ವವಾದ ಇಂತಹ ಪುಸ್ತಿಕೆಯೊಂದು ನಿರ್ಮಾಣವಾಗಲು ಕಾರಣಕರ್ತರಾದ ಲೋಹಿಯಾ ಪೀಠದ ಸಂಚಾಲಕರಾದ ಡಾ. ರಹಮತ್ ತರೀಕೆರೆ ಅವರ ಪ್ರಯತ್ನ, ಸಾಧನೆ ಮತ್ತು ಪರಿಶ್ರಮಕ್ಕಾಗಿ ವಿಶೇಷ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಲೋಹಿಯಾ ಪೀಠದ ಸಲಹಾ ಸಮಿತಿ ಸದಸ್ಯರಾದ ಡಾ. ಕಾಳೇಗೌಡ ನಾಗವಾರ ಮತ್ತು ಕೆ. ಫಣಿರಾಜ್ ಅವರು ಈ ಯೋಜನೆಯ ರೂಪುರೇಷೆಗೆ ಸಲಹೆ ಸಹಕಾರವನ್ನು ಕೊಟ್ಟಿದ್ದಾರೆ. ಅವರನ್ನು ಪ್ರೀತಿಯಿಂದ ನೆನೆಯುತ್ತೇನೆ. ಪ್ರಾದೇಶಿಕವಾಗಿ ಲೋಹಿಯಾ ಚಿಂತನೆಯೊಂದು ಸಾಕಾರಗೊಂಡು ರೂಪು ತಾಳಿದ ಸಂಕಥನವೊಂದರ ಅಪೂರ್ವ ದಾಖಲೆಯಾದ ಹೆಬ್ಬಳ್ಳಿ ಭೂಹೋರಾಟ ಪುಸ್ತಿಕೆಯು ಜಾಗತೀಕರಣದಿಂದ ದಿಕ್ಕು ತಪ್ಪಿರುವ ಆಧುನಿಕ ಕರ್ನಾಟಕಕ್ಕೆ ಮಾರ್ಗದರ್ಶಿಯಾಗಲಿ ಎಂದು ಹಾರೈಸುತ್ತೇನೆ.

ಈ ಗ್ರಂಥವನ್ನು ಅಚ್ಚುಕಟ್ಟಾಗಿ ಹೊರತರುತ್ತಿರುವ ಪ್ರಸಾರಾಂಗದ ನಿರ್ದೇಶಕರಾದ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ ಮತ್ತು ಸಹಾಯಕ ನಿರ್ದೇಶಕಾರದ ಶ್ರೀ ಸುಜ್ಞಾನಮೂರ್ತಿ ಅವರಿಗೆ ಆಭಾರಿಯಾಗಿದ್ದೇನೆ.

**ಬಿ.ಎ. ವಿವೇಕ ರೈ**

ಕುಲಪತಿ

# ಹೆಬ್ಬಳ್ಳಿ ಭೂಹೋರಾಟ: ಛಾಯಾಚಿತ್ರಗಳು















# ಮತ್ತೆ ಕೆಲವು ಸಂಗತಿಗಳು

ಹೆಬ್ಬಳ್ಳಿ ಭೂರಹಿತ ರೈತ ಕೂಲಿಕಾರರ ಹೋರಾಟ ಮುಕ್ತಾಯವಾಗಿ ೫ ದಶಕಗಳು ಸಂದಿವೆ. ಸದ್ಯಕ್ಕೆ ಹೆಬ್ಬಳ್ಳಿಯಲ್ಲಿ ಹೋರಾಟದಲ್ಲಿ ಪಾಲ್ಗೊಂಡ ಒಬ್ಬ ರೈತನೂ ಬದುಕಿಲ್ಲ. (ಈಗೇನಿದ್ದರೂ ಹೋರಾಟದಲ್ಲಿ ಪಾಲ್ಗೊಂಡವರ ಮಕ್ಕಳು ಹಿರಿಯರಿಂದ ಕೇಳಿದ ಬಗ್ಗೆಯೇ ಹೇಳುತ್ತಾರೆ.) ಅಚ್ಚರಿಯೆಂದರೆ ಈಗಿನ ಹೆಬ್ಬಳ್ಳಿ ಗ್ರಾಮಸ್ಥರಿಗೆ ನೀಲಗಂಗಯ್ಯ ಅಂದರೆ ಯಾರು ಎಂಬುದು ಗೊತ್ತಿಲ್ಲ. ಅವರೊಬ್ಬರು ಬದುಕಿದ್ದಾರೆ ಎನ್ನುವುದೂ ತಿಳಿದಿಲ್ಲ. ಹೆಬ್ಬಳ್ಳಿ ಹೋರಾಟದ ಮಿತಿಗಳೇನೇ ಇರಲಿ ಅದು ಗ್ರಾಮದ ರೈತರಿಗೆ, ಕೂಲಿಕಾರ್ಮಿಕರಿಗೆ ಭೂಮಿ ಹಂಚುವಲ್ಲಿ ಪರಿಣಾಮಕಾರಿಯಾದ ಪತ್ರ ನಿರ್ವಹಿಸಿತ್ತು. ಅದಕ್ಕೆ ಮುಂದಾಳುವಾಗಿದ್ದ ವ್ಯಕ್ತಿಯೊಬ್ಬನನ್ನು ತಲತಲಾಂತರದವರೆಗೂ ನೆನಪಿಟ್ಟುಕೊಳ್ಳದಿದ್ದರೂ, ಕನಿಷ್ಟ ಆ ವ್ಯಕ್ತಿ ಬದುಕಿರುವಾಗಲೇ ಗ್ರಾಮಸ್ಥರು ಮರೆಯುವುದು ವಿಚಿತ್ರವಾಗಿ ತೋರುತ್ತದೆ. ಹೇಗೆ ಹೋರಾಟ ಮುಕ್ತಾಯಗೊಂಡ ನಂತರದಲ್ಲಿ ಕೆಲವೊಮ್ಮೆ ಮಾತ್ರ ನೀಲಗಂಗಯ್ಯ ಪೂಜಾರ ಹೆಬ್ಬಳ್ಳಿಗೆ ಹೋಗಿದ್ದು ಬಿಟ್ಟರೆ, ಕಳೆದ ೩೦-೪೦ ವರ್ಷಗಳಲ್ಲಿ ಅವರು ಮತ್ತೆ ಆ ಗ್ರಾಮಕ್ಕೆ ಭೇಟಿಕೊಟ್ಟಿಲ್ಲ. ೧೯೫೦ರ ದಶಕದ ಅಂತ್ಯದಲ್ಲಿ ಹೆಬ್ಬಳ್ಳಿ ಗ್ರಾಮದ ಜನಜೀವನದ ಭಾಗಬಾಗಿದ್ದ ವ್ಯಕ್ತಿಯೊಬ್ಬರು ಈಗ ಗ್ರಾಮದಲ್ಲಿ ಯಾರೊಬ್ಬರಿಗೂ ನೆನಪೇ ಇಲ್ಲದೆ ಬದುಕುತ್ತಿದ್ದಾರೆ. ಈ ಬಗ್ಗೆ ಗ್ರಾಮಸ್ಥರಿಗಾಗಲಿ ನೀಲಗಂಗಯ್ಯ ಪೂಜಾರರಿಗಾಗಲಿ ಯಾವುದೇ ಬೇಸರವಿಲ್ಲ. ಈ ಬಗ್ಗೆ ನೀಲಗಂಗಯ್ಯನವರನ್ನು ಕೇಳಿದಾಗ ಅವರು ನಕ್ಕು, ಸುಮ್ಮನಾದರು. ಹೋರಾಟದ ಮುಖಂಡರನ್ನು ಹೆಬ್ಬಳ್ಳಿ ಮರೆತಿರಬಹುದು; ಆದರೆ ನೀಲಗಂಗಯ್ಯ ಪೂಜಾರರು ಹೋರಾಟವನ್ನು ಮರೆಯಲಿಲ್ಲ. ತಮ್ಮ ಜೀವನದುದ್ದಕ್ಕೂ ಅವರು ಹೋರಾಟಗಳನ್ನು ಮಾಡುತ್ತಲೇ ಇರುವರು.

ಹೆಬ್ಬಳ್ಳಿ ಹೋರಾಟದ ನಂತರ ಮಮ್ಮಿಗಟ್ಟಿ, ಗರಗ ಗ್ರಾಮಗಳಲ್ಲಿ ಅವರು ರೈತ ಸಂಘಟನೆ ಮಾಡಿದರು. ಮಮ್ಮಿಗಟ್ಟಿ ದೇಸಾಯಿಗಳು ೫೦೦ ಎಕರೆ ಭೂಮಿಯನ್ನು ಗೇಣಿದಾರರಿಗೆ ಉಳಲಿಕ್ಕೆ ಬಿಟ್ಟಿದ್ದರು. ಇವರು ಆ ಗೇಣಿದಾರರನ್ನು ಸಂಘಟಿಸಿ ಹೋರಾಟ ಕೈಗೊಂಡರು. ಈ ಹೋರಾಟದೊಳಗೂ ಯಶಸ್ಸುಕಂಡ ನಿಲಗಂಗಯ್ಯ ಪೂಜಾರ್ ಅವರು. ಪರಿಶಿಷ್ಠ ಜಾತಿ ಪಂಗಡಗಳಿಗೆ ಈ ಭೂಮಿಯನ್ನು ಹಂಚಿಕೆ ಮಾಡುವಲ್ಲಿ ಸಫಲರಾದರು. ೧೯೭೦ರ ದಶಕದಲ್ಲಿ ಬರಗಾಲ ಬಂದು ಆಹಾರ ಧಾನ್ಯಗಳ ಕೊರತೆಯುಂಟಾದಾಗ ಹುಬ್ಬಳ್ಳಿಯ ಸೆಂಟ್ರಲ್ ಗೋಡೌನ್ ಅನ್ನು ಲೂಟಿ ಮಾಡಿ ಬಡವರಿಗೆ ಆಹಾರ ಧಾನ್ಯ ಹಂಚುವ ಕುರಿತು ಆಲೋಚಿಸಿದರು. ಈ ಸಂಬಂಧವಾಗಿ ಕಮ್ಯುನಿಸ್ಟ್ ಕಾರ್ಯಕರ್ತರನ್ನೂ ವಿಶ್ವಾಸಕ್ಕೆ ತೆಗೆದುಕೊಂಡರು. ಕಮ್ಯುನಿಸ್ಟ್ ಮುಖಂಡರಾಗಿದ್ದ ಎ.ಜೆ.ಮುಧೋಳ್ ಅವರೊಂದಿಗೆ ಸೇರಿ ಗೋಡೌನ್ ಮೇಲೆ ದಾಳಿ ಮಾಡುವ ಸಿದ್ಧತೆ ಇರುವಾಗ ಪೋಲೀಸರಿಂದ ಬಂಧನವಾಗಿ ೧ ವಾರ ಜೈಲುವಾಸ ಅನುಭವಿಸಿದರು.

೧೯೭೭ರ ಸುಮಾರಿನಲ್ಲಿ ಹುಬ್ಬಳ್ಳಿಯಲ್ಲಿ ಪೂಜಾರರು ನಿವೇಶನರಹಿತರ ಸಂಘಟನೆ ಮಾಡಿದರು. ಸುಮಾರು ೧೦ ಸಾವಿರ ಜನರಿಗಾದರೂ ನಿವೇಶನ ಒದಗಿಸಬೇಕೆಂಬ ಗುರಿಯೊಂದಿಗೆ ಹುಬ್ಬಳ್ಳಿ ಮುನ್ಸಿಪಾಲ್ ಕಾರ್ಪೋರೇಷನ್ ಜಾಗ ವಶಪಡಿಸಿಕೊಂಡು ಗುಡಿಸಲುಗಳನ್ನು ಕಟ್ಟಿಕೊಳ್ಳಲಿಕ್ಕೆ ಪೋಲಿಸರ ನೆರವಿನೊಂದಿಗೆ ಗುಡಿಸಲುಗಳಿಗೆ ಬೆಂಕಿ ಇಟ್ಟರು. ಅಲ್ಲದೆ ನೀಲಗಂಗಯ್ಯ ಪೂಜಾರ್ ಅವರೊಂದಿಗೆ ೩೦ ಜನರನ್ನು ಬಂಧಿಸಿದರು. ಆಗ ಜೈಲಿನಲ್ಲಿಯೇ ಪೂಜಾರ್ ಅವರು ಉಪವಾಸ ಸತ್ಯಾಗ್ರಹ ಆರಂಭಿಸಿದರು. ಸತತ ನಾಲ್ಕು ದಿವಸಗಳ ನಂತರ ಅವರನ್ನು ಆಸ್ಪತ್ರೆಗೆ ದಾಖಲಿಸಲಾಯಿತು. ಗುಂಡುರಾವ್ ಸರಕಾರ ಇವರ ಹೋರಾಟಕ್ಕೆ ಮಣಿದು ಸುಮಾರು ೭ ಸಾವಿರ ನಿವೇಶನಗಳನ್ನು ಕೊಟ್ಟಿತು. ಹುಬ್ಬಳ್ಳಿಯಲ್ಲಿ ಈ ಮನೆಗಳ ಕಾಲೋನಿಯನ್ನು ಆನಂದ ನಗರ ಎಂದು ಕರೆಯಲಾಗುತ್ತದೆ. ಮುಂದೆ ಇದೇ ಹುಬ್ಬಳ್ಳಿಯಲ್ಲಿ ನಿವೇಶನರಹಿತರಾಗಿ ಉಳಿದ ಜನರಿಗಾಗಿ ಮತ್ತೊಂದು ಹೋರಾಟವನ್ನು ನೀಲಗಂಗಯ್ಯನವರು ಮಾಡಿದರು. ಈ ಹೋರಾಟವೂ ಮೂರು ವರ್ಷಗಳ ಕಾಲ ನಡೆಯಿತು. ಕೊನೆಗೆ ಬಂಗಾರಪ್ಪ ಮುಖ್ಯಮಂತ್ರಿಯಾದ ಸಂದರ್ಭದಲ್ಲಿ ೩ ಸಾವಿರ ಜನರಿಗೆ ನಿವೇಶನಗಳನ್ನು ನಿರ್ಮಿಸಿಕೊಡಲಾಯಿತು. ಇಲ್ಲಿ ನಿರ್ಮಾಣವಾದ ಬಡಾವಣೆಯನ್ನು ಈಗಲೂ ಡಾ. ರಾಮಮನೋಹರ ಲೋಹಿಯಾ ನಗರ ಎಂತಲೇ ಕರಯಲಾಗುತ್ತದೆ.

ಈಗ್ಗೆ ಕೆಲವು ವರ್ಷಗಳಿಂದ ಧಾರವಾಡದಲ್ಲಿ ಪೂಜಾರರು ನಿವೇಶನ ರಹಿತರ ಆಂದೋಲನವನ್ನು ಆರಂಭಿಸಿದ್ದಾರೆ. ಈ ಹೋರಾಟದಲ್ಲಿ ಅಲ್ಪ ಯಶಸ್ಸನ್ನು ಪಡೆದಿದ್ದಾರೆ. ಈ ಹೋರಾಟದ ಫಲವಾಗಿ ೨೦೦೫ರಲ್ಲಿ ಧಾರವಾಡದ ಹೊರಭಾಗದಲ್ಲಿ ನಿವೇಶನರಹಿತರಿಗಾಗಿ ಸರ್ಕಾರ ಭೂಮಿ ಮಂಜೂರು ಮಾಡಿದೆ. ಅಲ್ಲಿ ಮನೆ ಕಟ್ಟಲಿಕ್ಕಾಗಿ ಪ್ಲಾಟ್‌ಗಳನ್ನು ತಯಾರಿಸಲಾಗುತ್ತಿದೆ. ಅಲ್ಲದೆ ನಿವೇಶನರಹಿತರಿಂದ ಅರ್ಜಿಗಳನ್ನೂ ಸರಕಾರದವರು ಕರೆದಿದ್ದಾರೆ. ಈ ಸಂಬಂಧವಾಗಿ ಪ್ರತಿ ಆದಿತ್ಯವಾರ ಸಾಯಂಕಾಲ ನಿವೇಶನರಹಿತರ ಸಭೆ ಕರಯಲಾಗುತ್ತದೆ. ನೀಲಗಂಗಯ್ಯ ಪೂಜಾರ್ ಅವರ ಅಧ್ಯಕ್ಷತೆಯಲ್ಲಿ ಈ ಸಭೆ ಜರುಗುತ್ತದೆ. ಅದು ಇಂದಿಗೂ ನಡೆಯುತ್ತದೆ. ತಮ್ಮ ವೃದ್ಧಾಪದಲ್ಲಿಯೂ ಕೂಡ ನೀಲಗಂಗಯ್ಯ ಪೂಜಾರ್ ಈ ಸಭೆಗೆ ತಪ್ಪದೇ ಹಾಜರಾಗಿ ನಿವೇಶನರಹಿತರೊಂದಿಗೆ ಮಾತುಕತೆ ನಡೆಸುತ್ತಾರೆ. ಇದಕ್ಕಾಗಿ ಯಾರೂ ಕೂಡ ಹಣ ಖರ್ಚು ಮಾಡುತ್ತಿಲ್ಲ. ಎಲ್ಲರೂ ತಮ್ಮ ಸ್ವತಃ ಖರ್ಚಿನಲ್ಲಿ ಸಭೆಗೆ ಹಾಜರಾಗುತ್ತಾರೆ.

ಈ ಮಧ್ಯೆ ೧೯೭೮ರಲ್ಲಿ ರಾಜಕೀಯದಿಂದ ನೀಲಗಂಗಯ್ಯ ಪೂಜಾರ್ ನಿವೃತ್ತರಾಗಿದ್ದರು. ಜನತಾಪಾರ್ಟಿಯಲ್ಲಿ ಜಯಪ್ರಕಾಶ ನಾರಾಯಣ ಮತ್ತು ಹಲವು ಸಮಾಜವಾದಿ ಗೆಳೆಯರಿದ್ದಾರೆಂದು ಅವರೊಂದಿಗೆ ಇದ್ದರು. ಯಾವಾಗ ಜನತಾ ಪಾರ್ಟಿ ಒಡೆದು ಜನತಾದಳ ಆಯಿತೋ, ಆಗ ಬೇಸತ್ತು ರಾಜಕೀಯ ಪಕ್ಷಗಳೊಂದಿಗಿನ ಒಡನಾಟವನ್ನು ಕಡಿದುಕೊಂಡರು. ಹಾಗೆ ನೋಡಿದರೆ ನೀಲಗಂಗಯ್ಯನವರು ಸಮಾಜವಾದಿ ಪಾರ್ಟಿಯಲ್ಲಿದ್ದಾಗಲೂ ಪಕ್ಷದ ಸಭೆಗಳಿಗೆ ಹಾಜರಾಗುತ್ತಿದದ್ದು ಕಡಿಮೆ.

ತಮ್ಮೆಲ್ಲ ಹೋರಾಟಗಳನ್ನು ಅವರು ಪಕ್ಷದ ಸಿದ್ಧಾಂತದ ಸಂಘಟನೆಯ ಆಧಾರದ ಮೇಲೆ ಕಟ್ಟಿಕೊಂಡಿರಲಿಲ್ಲ. ವೈಯಕ್ತಿಕ ಆಸಕ್ತಿಯಿಂದ ಹೋರಾಟ ಕೈಗೊಳ್ಳುತ್ತಿದ್ದರು. ಈಗಲೂ ಸಮಾಜವಾದಿ ಮುಖಂಡರೆನಿಸಿಕೊಂಡ ಅನೇಕರಿಗೆ ಅವರು ಮಾಡಿದ ಹೋರಾಟಗಳ ಬಗ್ಗೆ ಹೆಚ್ಚು ತಿಳಿದಿಲ್ಲ.

ಪೂಜಾರರು ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ಜಾರ್ಜ್ ಫರ್ನಾಂಡಿಸ್ ಕಳುಹಿಸಿ ಕೊಡುತ್ತಿದ್ದ ಕಾರ್ಯಕರ್ತರನ್ನು ಪೋಲಿಸರಿಗೆ ತಿಳಿಯದಂತೆ ಕಾಪಾಡುತ್ತಿದ್ದರು. ತುರ್ತು ಪರಿಸ್ಥಿತಿಯನ್ನು ವಿರೋಧಿಸಿದ ಯಾರನ್ನಾದರೂ ಜೈಲಿನಲ್ಲಿಟ್ಟರೆ ಅವರ್ ಪರ ವಕಾಲತ್ ವಹಿಸಿ ನ್ಯಾಯಾಲಯದಲ್ಲಿ ಹೋರಾಡುತ್ತಿದ್ದರು. ಈ ಮಧ್ಯೆ ನೀಲಗಂಗಯ್ಯ ಪೂಜಾರ್ ೧೯೭೨ ಮತ್ತು ೧೯೭೮ರಲ್ಲಿ ಚುನಾವಣೆಗೆ ನಿಂತರು. ೧೯೭೨ರಲ್ಲಿ ಸಮಾಜವಾದಿ ಪಕ್ಷ ಜನಸಂಘದೊಂದಿಗೆ ಸೇರಿದ್ದನ್ನು ವಿರೋಧಿಸಿ ಕಲಘಟಗಿ ಕ್ಷೇತ್ರದಿಂದ ಚುನಾವಣೆಗೆ ನಿಂತರು. ಪ್ರತಿಸ್ಪರ್ಧಿಯಾಗಿ ಕಾಂಗ್ರೆಸ್‌ನ ಹಸಬೀ ಮತ್ತು ಪಕ್ಷೇತರರಾಗಿ ಬಿ.ಎ. ದೇಸಾಯಿ ಎನ್ನುವವರು ಇದ್ದರು. ಈ ಚುನಾವಣೆಯಲ್ಲಿ ಹಣ ಖರ್ಚು ಮಾಡಲಾಗದ ನೀಲಗಂಗಯ್ಯ ಪುಜಾರ್ ಅವರು ಮೂರನೇ ಸ್ಥಾನಕ್ಕೆ ತೃಪ್ತಿಪಟ್ಟುಕೊಳ್ಳುವಂತಾಯಿತು. ನಂತರ ೧೯೭೮ರಲ್ಲಿ ಜನತಾ ಪಾರ್ಟಿಯಿಂದ ಚುನಾವಣೆಗೆ ಸ್ಪರ್ಧಿಸಿದರು. ಈ ಸ್ಪರ್ಧೆಯಲ್ಲಿಯೂ ಅವರು ಸೋತರು. ನಂತರದ ದಿನಗಳಲ್ಲಿಯೇ ಅವರು ಚುನಾವಣಾ ರಾಜಕಾರಣ ಹಾಗೂ ಪಕ್ಷ ರಾಜಕಾರಣದಿಂದ ನಿವೃತ್ತಿ ಹೊಂದಿದರು.

ಪೂಜಾರರು ಈಗ ಧಾರವಾಡದ ವಿನಾಯಕನಗರದಲ್ಲಿರುವ ತಮ್ಮ ಮಗನ ಮನೆಯಲ್ಲಿ ಜೀವನ ನಡೆಸುತ್ತಿದ್ದಾರೆ. ಭೇಟಿಯಾದಗಲೆಲ್ಲಾ ತೀರಿಹೋದ ತಮ್ಮ ಹೆಂಡತಿಯನ್ನು ನೆನಪಿಸಿಕೊಂಡು ಮಾತನಾಡುತ್ತಾರೆ. ಕೌಟುಂಬಿಕ ಜೀವನದಲ್ಲಿ ಅವರಿಗೆ ಬೇಸರ ಉಂಟಾದಂತಿದೆ. ಪ್ರಸ್ತುತ ಬದುಕಿನ ಬಗ್ಗೆ ಕೇಳಿದಾಗಲೆಲ್ಲಾ ಅವರು ಮೌನವಾಗುತ್ತಾರೆ. ಸಮಾಜದಲ್ಲಿ ಸಾವಿರಾರು ಜನರ ಬೆಂಬಲವಿರುವ ಪೂಜಾರ್ ಅವರು ಒಬ್ಬಂಟಿ ಎಂದು ಭಾಸವಾಗುತ್ತದೆ.

ಇನ್ನು ಹೋರಾಟದ ಸಂದರ್ಭದಲ್ಲಿದ್ದ ಇನ್ನೊಬ್ಬ ಪ್ರಮುಖ ಮುಖಂಡರಾದವರೆಂದರೆ ಜಿ.ಟಿ. ಪದಕಿ. ಶ್ರೀಯುತರು ಹೆಬ್ಬಳ್ಳಿ ಭೂ ಹೋರಾಟದ ನಂತರ ವಕೀಲ ವೃತ್ತಿಯನ್ನು ಸಮರ್ಥವಾಗಿ ಮುಂದುವರಿಸಿದರು. ಧಾರವಾಡ ಬಾರ್ ಅಸೋಸಿಯೇಷನ್ ಅಧ್ಯಕ್ಷರಾಗಿಯೂ ಅವರು ಸೇವೆ ಸಲ್ಲಿಸಿದರು. ಧಾರವಾಡಕ್ಕೆ ಹೈಕೋರ್ಟ್ ಸ್ಥಾಪನೆಯ ಅಗತ್ಯತೆಯನ್ನು ಯಶವಂತಸಿಂಗ್ ಆಯೋಗದ ಎದುರು ಸಮರ್ಥವಾಗಿ ಪ್ರತಿಪಾದಿಸಿದ ಮೊದಲಿಗರು ಇವರಾಗಿದ್ದರು. ಹುಬ್ಬಳ್ಳಿ ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿಯೂ ಕಾರ್ಯನಿರ್ವಹಿಸಿದರು.

ಮೂರು ಬಾರಿ ಧಾರವಾಡ ವಿಧಾನಸಭಾ ಕ್ಷೇತ್ರದಿಂದ ಚುನಾವಣೆಗೆ ಸ್ಪರ್ಧಿಸಿ ಸೋತರು. ಸಮಾಜವಾದಿ ಪಕ್ಷ ಬಿಟ್ಟು ಜನತಾದಳ ಸೇರಿದರು. ಜನತಾದಳದ ಜಿಲ್ಲಾ ಅಧ್ಯಕ್ಷರಾದರು. ಬದುಕಿರುವ ಕೊನೆ ದಿನಗಳಲ್ಲಿ ಹೆಬ್ಬಳ್ಳಿ ಮತ್ತು ಗರಗ ಕ್ಷೇತ್ರೀಯ ಸೇವಾ ಸಂಘದ ಅಧ್ಯಕ್ಷರಾಗಿದ್ದರು. ಇವರ ವಕೀಲ ವೃತ್ತಿಯ ಸೇವೆ ಗಮನಿಸಿ ೨೦೦೬ ಅಕ್ಟೋಬರ್ ೧ ರಂದು ರಾಜ್ಯ ಉಚ್ಚನ್ಯಾಯಾಲಯದಲ್ಲಿ ಮುಖ್ಯ ನ್ಯಾಯಮೂರ್ತಿಗಳಿಂದ ಸನ್ಮಾನ ಏರ್ಪಡಿಸಲಾಗಿತ್ತು. ೨೦೦೬ನೇ ನವೆಂಬರ್ ೨೭ರಂದು ತಮ್ಮ ೮೦ನೇ ವಯಸ್ಸಿನಲ್ಲಿ ಜಿ.ಟಿ. ಪದಕಿ ವಕೀಲರು ನಿಧನರಾದರು.

೧೯೫೮ರ ನಂತರದಲ್ಲಿ ಹೆಬ್ಬಳ್ಳಿಯ ಜಾಗೀರದಾರರಲ್ಲಿ ಇನ್ನೂ ಉಳಿದಿದ್ದ ಸಾವಿರಾರು ಎಕರೆ ಭೂಮಿಯನ್ನು ದೇವರಾಜ ಅರಸು ಅವರ ಕಾಲದಲ್ಲಿ ಸರ್ಕಾರ ಪೂರ್ತಿ ವಶಪಡಿಸಿಕೊಂಡಿತು. ಈ ಸಂದರ್ಭದಲ್ಲಿಯೂ ಸರ್ಕಾರದ ಮೇಲೆ ಪ್ರಭಾವ ಬೀರಲು ಈ ಮನೆತನದ ಕೆಲವರು ಪ್ರಯತ್ನಿಸಿದರು. ಆದರೆ ಸಾಧ್ಯವಾಗಲಿಲ್ಲ. ವೆಂಕಟೇಶ್ವರ ದೇವಸ್ಥಾನ ಹಾಗೂ ಪಾಂಡುರಂಗ ದೇವಾಲಯಗಳಿಗೆ ನೀಡಲಾಗಿದ್ದ ಇನಾಂ ಭೂಮಿಯನ್ನು ಸರ್ಕಾರ ವಶಪಡಿಸಿಕೊಂಡಿತು. ೧೯೭೪ರ ನಂತರದಲ್ಲಿ ಜಾಗೀರುದಾರರು ಆರ್ಥಿಕವಾಗಿ ಬಲಹೀನರಾದರು. ವಿದ್ಯಾಭ್ಯಾಸ ಮಾಡಿಕೊಂಡ ಕುಟುಂಬದ ಕೆಲವರು ಚೆನ್ನಾಗಿಯೇ ಬದುಕುತ್ತಿದ್ದಾರೆ. ೧೯೫೨ರಲ್ಲಿ ಭೂಮಿ ಕಳೆದುಕೊಂಡಾಗ ಇದ್ದ ಪ್ರಮುಖ ಜಾಗೀರದಾರರಾದ ನರಸಿಂಗರಾವ್ ಅವರ ಮಗ ಲಕ್ಷ್ಮಣರಾವ್ ಅವರ ಪುತ್ರರಲ್ಲಿ ಒಬ್ಬ ಪ್ರತಾಪ್ ಹೆಬ್ಬಿಕರು ಅಮೇರಿಕಾದಲ್ಲಿ ಉದ್ಯೋಗ ಮಾಡುತ್ತಿದ್ದಾನೆ. ಇನ್ನೊಬ್ಬ ಪುತ್ರ ಎನ್.ಎಲ್. ಹೆಬ್ಬಿಕರ್ ಬೆಂಗಳೂರಿನಲ್ಲಿ ರಿಸರ್ವ್ ಬ್ಯಾಂಕ್ ಉದ್ಯೋಗಿಯಾಗಿದ್ದಾರೆ.

ಇನ್ನೊಬ್ಬ ಜಾಗೀರದಾರರಾದ ಗಣಪತಿರಾಯರಿಗೆ ಅಶೋಕ ಮತ್ತು ಸುಹಾಸ್ ಎಂಬ ಇಬ್ಬರು ಮಕ್ಕಳಾದರು. ಸುಹಾಸ್ ಹೆಬ್ಬಿಕರ್ ಅವರು ರಾಜಕೀಯ ಜೀವನ ನಡೆಸುತ್ತಿದ್ದಾರೆ. ತಾಲ್ಲೂಕು ಪಂಚಾಯಿತಿ ಅಧ್ಯಕ್ಷರಾಗಿ, ಜಿಲ್ಲಾ ಪಂಚಾಯಿತ್ ಸದಸ್ಯರಾಗಿಯೂ ಸೇವೆ ಸಲ್ಲಿಸಿದ್ದಾರೆ. ಈಗ ಹೆಬ್ಬಳ್ಳಿಯಲ್ಲಿ ಅವರು ರಾಜಕೀಯವಾಗಿ ಪ್ರಮುಖ ಮುಖಂಡರು.

ಶ್ರೀನಿವಾಸರಾಯ ಎನ್ನುವ ಜಾಗೀರದಾರರಿಗೆ ನಾಲ್ಕು ಮಕ್ಕಳಾದರು. ಇವರಲ್ಲಿ ಸುರೇಂದ್ರ ಮತ್ತು ವಿಜಯೇಂದ್ರ ಅತ್ಯಂತ ಸಾಮಾನ್ಯ ಜೀವನ ನಡೆಸುತ್ತಿದ್ದಾರೆ. ಉಳಿದಂತೆ ಬಾಗರಾಜ್ ಮತ್ತು ಮುರುಳಿ ಇಂಜಿನಿಯರ್ ಆಗಿ ಸರ್ಕಾರಿ ನೌಕರಿ ಮಾಡುತ್ತಿದ್ದಾರೆ.

ಪ್ರಹ್ಲಾದರಾವ್ ಮತ್ತು ಶೇಷಗಿರಿರಾವ್ ಜಾಗೀರದಾರರು ತಮ್ಮ ಹೆಸರಿಗಿದ್ದ ದೊಡ್ಡ ವಾಡೆಯನ್ನು ಗೊಂದಾವಲೆ ಮಠಕ್ಕೆ ಬಿಟ್ಟು ಕೊಟ್ಟರು. ಹಾಗೆ ಕೊಡುವ ಮುಂಚೆ ವಾಡೆಯ ಕಿಟಕಿ ಬಾಗಿಲುಗಳ ಸಮೇತ ಕಿತ್ತು ಮಾರಿಕೊಂಡರೆಂದು ಸ್ಥಳೀಯರು ಹೇಳುತ್ತಾರೆ. ಈಗ ವಾಡೆಯಿಂದ ಸ್ಥಳದಲ್ಲಿ ಗೊಂದಾವಲೆ ಮಠವು ನಿರ್ಮಾಣವಾಗಿದೆ.

ಕೃಷ್ಣರಾವ್ ಅವರ ಮಗನಾದ ಪಾಂಡುರಂಗರಾವ್ ಅವರು ಹೆಬ್ಬಳ್ಳಿಯ ಉಪ್ಪಿನಮೆಳೆ ವಾಡೆಯಲ್ಲಿ ವಾಸಿಸುತ್ತಿದ್ದಾರೆ. ಇವರ ಪಾಲಿಗೆ ೫೨ ಎಕರೆ ಭೂಮಿ ಉಳಿದಿದೆ. ಈ ಸದ್ಯದಲ್ಲಿ ಹೆಬ್ಬಳ್ಳಿ ಜಾಗೀರ್ ಮನೆತನದ ಬಗ್ಗೆ ಹೆಚ್ಚು ಮಾಹಿತಿ ಹೊಂದಿರುವ ಹಿರಿಯರೆಂದರೆ ಇವರೇ. ತಮ್ಮ ಪುತ್ರನೊಂದಿಗೆ ಹೆಬ್ಬಳ್ಳಿಯಲ್ಲಿಯೇ ಬದುಕುತ್ತಿದ್ದಾರೆ.

ಇನ್ನು ಹೆಬ್ಬಳ್ಳಿ ಭೂ ಹೋರಾಟದ ಬಗ್ಗೆ ತಿಳುವಳಿಕೆ ಇರುವವರು ಬಹಳ ಕಡಿಮೆ. ಅದರಲ್ಲೂ ಇತ್ತೀಚಿನ ಯುವಕರನ್ನು ಈ ಹೋರಾಟದ ಬಗ್ಗೆ ಕೇಳಿದರೆ ಏನೆಂದರೆ ಏನೂ ಗೊತ್ತಿಲ್ಲ. ಈ ಬಗ್ಗೆ ಹಲವಾರು ಯುವಕರ ಪ್ರತಿಕ್ರಿಯೆ ಕೇಳಿದಾಗ ಅಚ್ಚರಿಯಾಗುತ್ತದೆ. ಇಲ್ಲಿನ ಅದೆಷ್ಟೋ ಹಿರಿಯರಿಗೇ ನೀಲಗಂಗಯ್ಯ ಪೂಜಾರ್ ಹಾಗೂ ಪದಕಿ ವಕೀಲರ ಬಗ್ಗೆ ತಿಳಿದಿಲ್ಲದಿರುವಾಗ ಯುವಕರ ಬಗ್ಗೆ ಏನು ತಾನೇ ಆಕ್ಷೇಪಿಸಬಹುದು? ಮಾಹಿತಿ ಸಿಗುತ್ತದೆ ಎಂದು ನಿರೀಕ್ಷಿಸಲಾಗದು. ಆದರೆ ಹೋರಾಟದ ನಂತರದ ದಿನಗಳಲ್ಲಿ ಅದು ಪಡೆಯುವ ರೂಪಾಂತರ ಎಂತಹದ್ದು ಎಂದು ತಿಳಿಯಲು ಇವರ ಅನಿಸಿಕೆ ಸಹಾಯಕವಾಗುತ್ತದೆ. ಊರಿನಲ್ಲಿ ಸೋಮಾರಿಗಳಂತೆ ತಿರುಗುವ ಯುವಕರನ್ನು ಉದ್ದೇಶಿಸಿ ಇಲ್ಲೊಂದು ಮಾತು ರೂಢಿಯಲ್ಲಿದೆ. 'ಪುಗ್ಸಟ್ಟೆ ಜಾಗೀರ್ದಾರ ಭೂಮಿ ಬಂದಿದೆ ಅದಕ್ಕೆ ಹಾಗೆ ಮಾಡ್ತಾನ ಇಲ್ಲವ ದುಡುದು ಗಳ್ಸಿದ್ರೆ ಗೊತ್ತಾಗ್ತಿತ್ತು, ರಾಯರ್

ಭೂಮಿ ಆಟಾಡ್ಸತೈತಿ' ಈ ಮಾತು ಊರೊಳಗೆ ಹಲವಾರು ಬಾರಿ ಕಿವಿಗೆ ಬಿದ್ದಿದೆ. ಸದ್ಯದ ವರ್ತನೆಗೆ ಚರಿತ್ರೆಯ ಪ್ರಸಂಗ ಕಾರಣವಾಗಿಸುವುದು ಕಂಡುಬರುತ್ತಿದೆ.

೫೦ರ ದಶಕದ ಭೂ ಹೋರಾಟದ ನಂತರ ಈ ಭಾಗದಲ್ಲಿ ಇದುವರೆಗೂ ರೈತ ಪ್ರತಿಭಟನೆಗಳಾಗಲಿ ಹೋರಾಟಗಳಾಗಲಿ ನಡೆದಿಲ್ಲ. ಹಾಗಂತ ಇಲ್ಲಿನ ರೈತರಿಗೆ ಸಂಕಷ್ಟಗಳೇ ಇಲ್ಲ ಎಂದರ್ಥವಲ್ಲ. ಆದರೆ ಹೋರಾಟದ, ಪ್ರತಿಭಟನೆಯ ಕಾವು ಕಳೆದು ಹೋಗಿದೆ. ಇವರನ್ನು ಪ್ರತಿಭಟನೆಗೆ ಉದ್ದೀಪಿಸುವ ನಾಯಕತ್ವವೂ ಈಗಿಲ್ಲ. ಈ ಭಾಗದ ಸದ್ಯದ ರೈತ ನಾಯಕರೆಂದರೆ ಜಿ.ಎಸ್.ಪಾಟೀಲ್ ಕುಲಕರ್ಣಿ ಎಂಬ ಬಿ.ಜೆ.ಪಿ. ಮುಖಂಡರು. ಇವರು ಇಲ್ಲಿನ ರೈತರು ಬೆಳೆನಷ್ಟವಾದಾಗ ವಿಮೆ ಪಾಲಿಸಿ ಮಾಡಿಸಿ ನೆರವಿಗೆ ಬಂದಿದ್ದಾರೆ. ಇವರಿಂದಾಗಿ ಹೆಬ್ಬಳ್ಳಿ ಸುತ್ತಲಿನ ಗ್ರಾಮಗಳು ವಿಮಾ ಗ್ರಾಮಗಳೆಂದು ನಮೂದಿಸಲ್ಪಟ್ಟಿವೆ. ಕರ್ನಾಟಕದಲ್ಲಿಯೇ ಅತಿ ಹೆಚ್ಚು ಹಣವನ್ನು ಬೆಳೆವಿಮೆಯಿಂದ ಇಲ್ಲಿನ ಗ್ರಾಮಗಳು ಪಡೆಯುತ್ತವೆ. ಹೀಗಾಗಿ ಸದ್ಯ ಜಿ.ಎಸ್. ಪಾಟೀಲ್ ಕುಲಕರ್ಣಿ ಇಲ್ಲಿನ ಪ್ರಮುಖ ರೈತ ಮುಖಂಡರಾಗಿ ರೂಪುಗೊಂಡಿದ್ದಾರೆ. ಒಂದೊಮ್ಮೆ ನೀಲಗಂಗಯ್ಯನವರು ಹೆಬ್ಬಳ್ಳಿಗೆ ಬಂದರೆ, ಅವರನ್ನು ಗುರುತು ಹಿಡಿಯುವವರು ಇಲ್ಲ; ಇದೊಂದು ಚರಿತ್ರೆಯ ವ್ಯಂಗ್ಯವೋ ಕಾಲಗತಿಯ ಪರಿಣಾಮವೊ ತಿಳಿಯದಾಗಿದೆ.

## ಅಭ್ಯಾಸಸೂಚಿ


**ಅ. ಕೃತಿಗಳು**

ಅನಂತ ನಾರಾಯಣ ಎಸ್., ತೆಲಂಗಾಣ ರೈತ ಹೋರಾಟ, ನವಕರ್ನಾಟಕ ಪಬ್ಲಿಕೇಷನ್, ಬೆಂಗಳೂರು, ೧೯೮೬

ಕಮಲೇಶ್ ಕೆ.ಆರ್.(ಸಂ), ಕರ್ನಾಟಕ ರಾಜಕೀಯ ಚಿಂತನೆ, ಎಸ್. ನಿಜಲಿಂಗಪ್ಪ ಸಂಸ್ಮರಣ

ಗ್ರಂಥ ಪ್ರಕಾಶನ, ಎಸ್.ನಿಜಲಿಂಗಪ್ಪ ರಾಷ್ಟ್ರೀಯ ಪ್ರತಿಷ್ಠಾನ, ಬೆಂಗಳೂರು, ೨೦೦೩

ಕಾಳೇಗೌಡ ನಾಗವಾರ, ನಟರಾಜ ಹುಳಿಯಾರ್(ಸಂ), ಸ್ವಾತಂತ್ರ್ಯದ ಅಂತರ್ಜಲ (ಸಂಪುಟ ೧), ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೧೯೯೬

ಕೀರ್ತಿನಾಥ ಜಿ.ಎಸ್., ಶಿವಮೊಗ್ಗ ಜಿಲ್ಲೆಯಲ್ಲಿ ಸಮಾಜವಾದಿ ಚಳಿವಳಿಗಳು, ಎಂ.ಫಿಲ್. ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ (ಅಪ್ರಕಟಿತ)

ಗೋದಾವರಿ ಪರುಳೇಕರ್ (ಅನು : ಸರಸ್ವತಿ ರಿಸಬುಡ್), ಮಾನವ ಎಚ್ಚೆತ್ತಾಗ, ಅಧ್ಯಯನ, ಶಿರಸಿ, ೨೦೦೦

ಗೋಪಾಲರಾವ್ ಎಚ್.ಎಸ್., ಕರ್ನಾಟಕ ಏಕೀಕರಣದ ಕತೆ, ನವಕರ್ನಾಟಕ ಪ್ರಕಾಶನ, ಬೆಂಗಳೂರು

ಚನ್ನಬಸವ ಗೌಡ ಕೆ., ನಾನೊಬ್ಬ ಸಾರ್ವಜನಿಕ (ಆತ್ಮಕತೆ), ಪ್ರಕಟಣೆ ಕನ್ನಡ ಸಾಹಿತ್ಯ ಪರಿಷತ್ ಘಟಕ, ಹಗರಿಬೊಮ್ಮನಹಳ್ಳಿ, ೧೯೯೪

ಚಂದ್ರ ಪೂಜಾರಿ, ಸ್ವದೇಶಿ ಒಂದು ವಿಶ್ಲೇಷಣೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ೧೯೯೯

ತಂಬಡ ವಿಜಯ ಪೂಣಚ್ಚ, ರೈತ ಚಳಿವಳಿಗಳು,ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ೧೯೯೯

ತಂಬಡ ವಿಜಯ ಪೂಣಚ್ಚ (ಪ್ರ : ಸಂ), ಚರಿತ್ರೆ ವಿಶ್ವಕೋಶ, ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ೨೦೦೧

ದಿವಾಕರ ರಂ.ರಾ., ಕರ್ನಾಟಕ ಏಕೀಕರಣ ಕತೆ, ಪ್ರಕಾಶನ, ಲೋಕ ಶಿಕ್ಷಣ ಟ್ರಸ್ಟ್, ಹುಬ್ಬಳ್ಳಿ, ೧೯೯೨

ನಂಜುಂಡಸ್ವಾಮಿ ಎಂ.ಡಿ., ರೈತ ಹೋರಾಟ ಏಕೆ?, ಕರ್ನಾಟಕ ರಾಜ್ಯ ರೈತ ಸಂಘ, ೧೯೮೨

ನಟರಾಜ ಹುಳಿಯಾರ್,ಚಿಂತಾಮಣಿ ಕೊಡ್ಲೆಕೆರೆ (ಸಂ), ಮಾನವ ಕುಲದ ಏಕತೆ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೨೦೦೦

ನಟರಾಜ ಹುಳಿಯಾರ್, ರಾಮಕೃಷ್ಣ ಎಸ್.ಆ. (ಸಂ), ಕಣ್ಣೆದುರಿನ ಪ್ರಶ್ನೆಗಳು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೨೦೦೦

ನಾಗರಾಜ ಎಂ.ಜಿ., ಕರ್ನಾಟಕದ ರೈತ ಚಳಿವಳಿ-ಸತ್ಯಾಗ್ರಹಗಳು,(ಸಹಸ್ರಮಾನ ಸಂಪುಟ.೨) ಸರ್ಕಾರಿ ಮುದ್ರಾಣಲಯ, ಬೆಂಗಳೂರು, ೨೦೦೬

ನಾಗೇಶ್ ಎಚ್.ವಿ, ಎ.ಇ. ಪುನೀತ ಭಾರತದಲ್ಲಿ ರೈತ ಹೋರಾಟಗಳು, ಚಂದ್ರನಾಥ ಪ್ರಕಾಶನ್, ಹುಬ್ಬಳ್ಳಿ, ೧೯೮೪

ನಾರಾಯಣ ಸ್ವಾಮಿ ಜ.ಹೊ. (ಅನು), ಭಾರತದ ರೈತಮತ್ತು ಇತರ ಲೇಖನಗಳು, (ಡಾ. ರಮಮನೋಹರ ಲೋಹಿಯಾ) ನೆಲಮನೆ ಪ್ರಕಾಶನ, ಶ್ರೀರಂಗಪಟ್ಟಣ, ೨೦೦೦

ಫಕೀರ್ ಮಹಮದ್ ಕಟ್ಪಾಡಿ, ಕಯ್ಯೂರಿನ ರೈತ ವೀರರು, ನವಕರ್ನಾಟಕ ಪಬ್ಲಿಕೇಷನ್, ಬೆಂಗಳೂರು, ೧೯೯೨

ಪ್ರಭಾಕರ ಎ.ಎಸ್., ಬುಡಕಟ್ಟು ಬದುಕಿನ ಸ್ಥಿತ್ಯಂತರಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ೨೦೦೦

ಬಸವರಾಜ, ಶಿವಮೊಗ್ಗ ರೈತ ಚಳಿವಳಿ, ಸಮುದಾಯ ಪ್ರಕಾಶನ, ಬೆಂಗಳೂರು, ೧೯೮೧

ಬೋರಲಿಂಗಯ್ಯ ಹಿ.ಚಿ., ಎನ್. ಹುಚ್ಚಪ್ಪ ಮಾಸ್ತರ್ (ಸಂ), ಕಾಗೋಡು ಚಳಿವಳಿ ಸುವರ್ಣ ಸಂಪುಟ, ಮಲೆನಾಡು ಜನಪದ ಲೋಕ್, ಸಾಗರ, ೨೦೦೨

ಮಾಧವ ಐತಾಳ (ಅನು) ಬತ್ತದ ಚಿಲುಮೆ (ಮೂಲ : ವಂದನಾಶಿವ), ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ೨೦೦೬

ಯಜಮಾನ್ ಶಾಂತರುದ್ರಪ್ಪ, ಸೊಂಡೂರು ಹೋರಾಟ ಏಕೆ? ಸಮಾಜವಾದಿ ಪಕ್ಷ, ಬೆಂಗಳೂರು, ೧೯೭೩

ಯಡೂರು ಮಹಾಬಲ, ನಮ್ಮ ಚಳುವಳಿಯ ಬಗೆಗಿನ ಹಲವು ಪ್ರಶ್ನೆಗಳು, ಸಮತಾ ಪ್ರಕಾಶನ,ಹುಬ್ಬಳ್ಳಿ

ರಹಮತ್ ತರೀಕೆರೆ, ಲೋಕ ವಿರೋಧಿಗಳ ಜತೆಯಲ್ಲಿ (ಸಂದರ್ಶನಗಳು), ಪ್ರಕಟಣೆ, ಕನ್ನಡ ಸಂಘ, ಕ್ರೈಸ್ಟ್ ಕಾಲೇಜ್, ಬೆಂಗಳೂರು, ೨೦೦೬

ರಾಜಶೇಖರ್ ಜಿ., ಕಾಗೋಡು ಸತ್ಯಾಗ್ರಹ, ಅಕ್ಷರ ಪ್ರಕಾಶನ, ಹೆಗ್ಗೋಡು, ೧೯೮೦

ರಾಮಲಿಂಗಪ್ಪ ಟಿ. ಬೇಗೂರು (ಅನು), ಎಡ್ವರ್ಡ್ ಸೈದ್, ಅಧ್ಯಯನ ಮಂಡಲ, ಬೆಂಗಳೂರು, ೨೦೦೩

ಲಿಂಗಣ್ಣ ಸತ್ಯಂಪೇಟೆ, ಗ್ರಾಮಸಮರ, ಪ್ರಕೃತಿ ಪ್ರಕಾಶನ, ಶಾಪುರ, ೧೯೮೭

ವಿಷ್ಣು ನಾಯಕ, ದುಡಿಯುವ ಕೈಗಳ ಹೋರಾಟದ ಕತೆ, ಪ್ರಕಟಣೆ, ದಿನಕರ ದೇಸಾಯಿ ಸ್ಮಾರಕ ಪ್ರತಿಷ್ಠಾನ, ಅಂಕೋಲ, ೨೦೦೪

ವ್ವಿಷ್ಣು ನಾಯಕ, ಹದ್ದು ಪಾರಿನ ಹಿಂದೆ ಮುಂದೆ, ರಾಘವೇಂದ್ರ ಪ್ರಕಾಶನ, ಅಂಕೋಲ, ೧೯೮೭

ವಿಷ್ಣುಮೂರ್ತಿ ಎಚ್.ಸಿ., ಗೋಪಾಲಗೌಡ ಶಾಂತವೇರಿ, ಅನನ್ಯ ಪ್ರಕಾಶನ, ಧಾರವಾಡ, ೧೯೯೯

ಶರದ್ ಜೋಷಿ, ರೈತ ಸಂಘಟನೆಯ ವಿಚಾರ ಮತ್ತು ಕಾರ್ಯ ಪದ್ಧತಿ, ಪ್ರಕಟಣೆ, ಅಧ್ಯಯನ, ಶಿರಸಿ, ೨೦೦೦

ಶಿವಾನಂದ ಗುಬ್ಬಣ್ಣನವರ ನರಗುಂದ ನವಲಗುಂದ ರೈತ ಹೋರಾಟ, ಅಕ್ಷಯ ಪ್ರಕಾಶನ, ಧಾರವಾಡ, ೧೯೯೫

ಸಂಗಮೇಶ ಕೋಟಿ (ಸಂ), ಕುರುಕ್ಷೇತ್ರ (ಬಾಬುರೆಡ್ಡಿ ತುಂಗಳ್ ಅಭಿನಂದನ ಗ್ರಂಥ), ಪ್ರಕಟಣೆ, ಬಾಬುರೆಡ್ಡಿ ತುಂಗಳ ಅಭಿನಂದನಾ ಸಮಿತಿ, ಜಮಖಂಡಿ, ೨೦೦೬

ಸಿದ್ದಯ್ಯ ಪುರಾಣಿಕ, ಗ್ರಾಮ ಸ್ವರಾಜ್ಯ, ಸಹ್ಯಾದ್ರಿ ಪ್ರಕಾಶನ, ಮೈಸೂರು, ೧೯೮೨

ಹನುಮಂತ, ಬಾಪು ಹೆದ್ದೂರು ಶೆಟ್ಟಿ (ಸಂ), ಭಾರತೀಯ ಸಮಾಜವಾದದ ಹೆಜ್ಜೆ ಗುರುತುಗಳು, ಜನ ಪ್ರಕಾಶನ, ಬೆಂಗಳೂರು, ೧೯೭೯

ಹನುಮಂತ,ಸೊಂಡೂರು ಹೋರಾಟ, ಜನ ಪ್ರಕಾಶನ, ಬೆಂಗಳೂರು, ೧೯೮೦

ಹನುಮಂತ (ಸಂ), ಸಮಾಜವಾದ ಜನ ಪ್ರಕಾಶನ, ಬೆಂಗಳೂರು, ೧೯೮೦

ಹಸನ್ ನಯೀಂ ಸುರಕೋಡ (ಅನು),ಲೋಹಿಯಾ, ಲೋಹಿಯಾ ಪ್ರಕಾಶನ, ಬಳ್ಳಾರಿ, ೨೦೦೦

**ಆ. ಪತ್ರಿಕೆಗಳು**

**ದಿನಪತ್ರಿಕೆಗಳು**

ಕನ್ನಡಪ್ರಭ, ಬೆಂಗಳೂರು
ದೇಶವಾಣಿ, ಗದಗ
ಪ್ರಜಾವಾಣಿ, ಬೆಂಗಳೂರು
ವಿಶ್ವವಾಣಿ, ಹುಬ್ಬಳ್ಳಿ
ಸಂಯುಕ್ತ ಕರ್ನಾಟಕ, ಹುಬ್ಬಳ್ಳಿ

**ವಾರಪತ್ರಿಕೆ / ಮಾಸಿಕ**

ಜನ ಪ್ರಗತಿ,ಸಂ: ಕೆ.ದೀಕ್ಷಿತ್, ಹುಬ್ಬಳ್ಳಿ (೧೯೬೫)

ಪ್ರಜಾಮತ / ಪ್ರಜಾಮಿತ್ರ -ಸಂ:ಬಿ.ಎನ್.ಗುಪ್ತ, ಹುಬ್ಬಳ್ಳಿ (೧೯೭೦)

ಪ್ರಪಂಚ, ಸಂ:ಪಾಟೀಲ ಪುಟ್ಟಪ್ಪ, ಹುಬ್ಬಳ್ಳಿ (೧೯೬೦)

ರೈತ ಪತ್ರಿಕೆ, ಸಂ:ಕೋ.ಚನ್ನಬಸಪ್ಪ, ಬೆಂಗಳೂರು (೧೯೬೦)

ವಿಕ್ರಮ, ಸಂ:ಜಿ.ಎಸ್.ಮಲ್ಯ, ಬೆಂಗಳೂರು (೧೯೭೦)

ಸಂಗ್ರಾಮ, ಬೆಂಗಳೂರು (೧೯೬೫)

ಸ್ವತಂತ್ರ, ಸಂ:ಎಸ್.ಎಮ್.ಕೊಟ್ರಯ್ಯ, ಹೊಸಪೇಟೆ (೧೯೭೦)

## ೧. ಹೆಬ್ಬಳ್ಳಿ ಗ್ರಾಮ : ಚರಿತ್ರೆ ಮತ್ತು ಈಗ

ಧಾರವಾಡ ತಾಲೂಕಿನ ಹೆಬ್ಬಳ್ಳಿ ಗ್ರಾಮವು ಧಾರವಾಡ ನಗರದಿಂದ ನವಲಗುಂದ ಮಾರ್ಗವಾಗಿ ೧೨ ಕಿ.ಮೀ. ದೂರದಲ್ಲಿದೆ. ಈ ಗ್ರಾಮ ಪ್ರಾಚೀನ ಶಾಸನಗಳಲ್ಲಿ 'ಅನಾದ್ ಬಣಂಜುಪಟ್ಟಣ', 'ಹೆರ್ಬ್ಬಳ್ಳಿ', 'ಹೆಬ್ಬಳ್ಳಿ' ಎಂದೇ ಉಲ್ಲೇಖಿತಗೊಂಡಿದೆ. ಹಿಂದೆ ಇದು ಬೆಳ್ವೊಲ – ೩೦೦ಕ್ಕೆ ಸೇರಿತ್ತೆಂದು ಹೇಳಲಾಗಿದೆ. ಮುಂಬೈ ಇಲಾಖೆಯ ಗೆಜೆಟಿಯರ್ ನಲ್ಲಿ ಹೆಬ್ಬಳ್ಳಿ ಗ್ರಾಮವನ್ನು ಪೇಶ್ವೇ ನಾನಾ ಸಾಹೇಬನು ಮೊದಲು ನರಗುಂದದ ಒಡೆಯನಾಗಿದ್ದ ಸರದಾರನಿಗೆ ೧೭೪೮ರಲ್ಲಿ ಜಹಗೀರು ಹಾಕಿಕೊಟ್ಟನು. ಅದು ಅವನ ವಂಶದವರಿಗೆ ಈಗಲೂ ನಡೆಯುತ್ತಿದೆ. ಎಂದು ದಾಖಲಿಸಿದೆ. ೧೯೫೨ರ ತನಕ ಈ ಜಾಗೀರದಾರ ವಂಶದವರೇ ಇಡೀ ಹೆಬ್ಬಳ್ಳಿಯ ಭೂಮಿಯ ಒಡೆತನ ಹೊಂದಿದ್ದರು; ನಂತರದಲ್ಲಿ ಈ ಭೂಮಿಯನ್ನು ಸರ್ಕಾರ ವಶಪಡಿಸಿಕೊಂಡು ಉಳುವ ರೈತರಿಗೆ ಹಾಗೂ ಭೂರಹಿತ ರೈತ ಕೂಲಿಕಾರ್ಮಿಕರಿಗೆ ಹಂಚಿತು.

೨೦೦೪-೦೫ರ ಜನಗಣತಿಯ ಪ್ರಕಾರ ಹೆಬ್ಬಳ್ಳಿಯಲ್ಲಿರುವ ಒಟ್ಟು ಜನಸಂಖ್ಯೆ ೧೧,೯೨೪. ಇವರಲ್ಲಿ ೫೮೨೭ ಸ್ತ್ರೀಯರು ಹಾಗೂ ೬೦೬೭ ಪುರುಷರು ಇದ್ದಾರೆ. ಪರಿಶಿಷ್ಟ ಜಾತಿಯವರು ೫೮೬ ಜನರಿದ್ದಾರೆ. ಪರಿಶಿಷ್ಟ ಪಂಗಡದವರು ೯೭ ಜನರಿದ್ದಾರೆ. ಮುಸ್ಲಿಂ ಸಮುದಾಯದವರು ೧೨೪೫ ಮಂದಿ ಇದ್ದರೆ, ಇತರೆ ಸಾಮಾನ್ಯವರ್ಗದವರಾದ ಲಿಂಗಾಯತ, ಬ್ರಾಹ್ಮಣ ಮುಂತಾದವರು ೮೭೫೦ ಜನರಿದ್ದಾರೆ. ಈ ಗ್ರಾಮದಲ್ಲಿ ೧ ಸಾವಿರಕ್ಕಿಂತ ಹೆಚ್ಚು ಜನ ಅನಕ್ಷರಸ್ತರಿದ್ದಾರೆ.

ಗ್ರಾಮದಲ್ಲಿ ನೆಹರೂ ಸಂಯುಕ್ತ ಪದವಿಪೂರ್ವ ಮಹಾವಿದ್ಯಾಲಯವಿದೆ. ಇದಲ್ಲದೆ, ಮೂರು ಕನ್ನಡ ಮಾಧ್ಯಮದ ಪ್ರಾಥಮಿಕ ಶಾಲೆಗಳು ಹಾಗೂ ಒಂದು ಇಂಗ್ಲೀಷ್ ಮಾಧ್ಯಮ ಶಾಲೆಯೂ ಇದೆ. ಒಂದು ಉರ್ದು ಮಾಧ್ಯಮ ಪ್ರಾಥಮಿಕ ಶಾಲೆಯೂ ಇದೆ. ಇಲ್ಲಿರುವ ಶಾಲಾ ಕಟ್ಟಡಗಳಾಗಲಿ, ಆಟದ ಮೈದಾನಗಳಾಗಲಿ ಸುಸಜ್ಜಿತವಾಗಿಲ್ಲ. ನಾನು ನೋಡಿದ ಕನ್ನಡ ಮಾಧ್ಯಮ ಪ್ರಾಥಮಿಕ ಶಾಲೆಯಲ್ಲಿ ೧೫ ರಿಂದ ೨೦ ಮಕ್ಕಳಿದ್ದರು. ಅಲ್ಲಿ (ಫೆಬ್ರವರಿ ೨೦೦೭) ಉಪಾಧ್ಯಾಯರು ಇರಲಿಲ್ಲ. ಈ ಬಗ್ಗೆ ವಿಚಾರಿಸಿದರೆ, ಶಾಲೆಯ ಚಿಕ್ಕ ಮಕ್ಕಳು 'ಮೇಷ್ಟ್ರು ಈಗ ಬರ್ತಾರ, ಮನಿಗಿ ಹೋಗ್ಯಾರ' ಎಂದು ಹೇಳಿದರು.

ಇನ್ನು ಕೃಷಿಗೆ ಸಂಬಂಧಿಸಿದಂತೆ ಒಟ್ಟು ಗ್ರಾಮದ ಭೌಗೋಳಿಕ ಕ್ಷೇತ್ರ ೧೩,೫೧೮ ಎಕರೆ ಇದೆ. ಗ್ರಾಮದಲ್ಲಿನ ಕೃಷಿ ಹೆಚ್ಚಾಗಿ ಮಳೆಯನ್ನೇ ಅವಲಂಬಿಸಿದ್ದು, ೨೦೦೪-೦೫ರಲ್ಲಿ ೯೬೦.೮ ಮಿ.ಮೀ ಮಳೆಯಾಗಿದೆ. ಹಾಗೆ ನೋಡಿದರೆ ಧಾರವಾಡ ಜಿಲ್ಲೆಯ ಸರಾಸರಿ ಮಳೆಯ ಪ್ರಮಾಣ ೮೯.೭ ಮಿ.ಮೀ(೧೯೯೨) ಇದ್ದು, ಹೆಬ್ಬಳ್ಳಿಯಲ್ಲಿ ಸ್ವಲ್ಪ ಪ್ರಮಾಣದಲ್ಲಿ ಮಳೆ ಹೆಚ್ಚಾಗಿದೆ. ಇನ್ನುಳಿದಂತೆ ಧಾರವಾಡ ನಗರದ ಜನತೆ ಬಳಸಿ ಬಿಟ್ಟ ಕೊಳಚೆ ನೀರೆಲ್ಲ ಹೊಳೆಯಾಗಿ ಹೆಬ್ಬಳ್ಳಿ ಗ್ರಾಮದ ಹೊರಭಾಗದಲ್ಲಿ ಹರಿಯುತ್ತದೆ. ಇದು ಇಲ್ಲಿನ ೧೫೦ ಎಕರೆ ಭೂಮಿಗೆ ನೀರಾವರಿ ಒದಗಿಸುತ್ತದೆ. ಈ ನೀರಿನಲ್ಲಿ ವಿಷದ ಪ್ರಮಾಣ ಹೆಚ್ಚುತ್ತಿದ್ದು ಅದು, ಭೂಮಿಯ ಸತ್ವವನ್ನು ನಿಧಾನವಾಗಿ ಹಾಳುಗೆಡುವುತ್ತಿದೆ. ಇಲ್ಲಿನ ಒಟ್ಟು ಕೃಷಿ ಭೂಮಿಯಲ್ಲಿ ೬೬ ಬೋರ್‌ವೆಲ್‌ಗಳಿವೆ. ವಿವಿಧ ಕೃಷಿಕರು ಕೊರೆಸಿರುವ ಈ ಬೋರ್‌ವೆಲ್‌ಗಳಲ್ಲಿ ಸರಾಸರಿ ೪೦೦ ಅಡಿ

ಆಳದಲ್ಲಿ ನೀರು ಸಿಗುತ್ತದೆ. ಇತ್ತೀಚಿನ ದಿನಗಳಲ್ಲಿ ಅಂತರ್ಜಲ ಕಡಿಮೆಯಾಗುತ್ತಿರುವ ಹಿನ್ನೆಲೆಯಲ್ಲಿ ನೂರಾರು ಬೋರ್‌ವೆಲ್‌ಗಳನ್ನು ಕೊರೆಸಿದ್ದರೂ ನೀರು ಅತ್ಯಲ್ಪ ಪ್ರಮಾಣದಲ್ಲಿ ದೊರಕುತ್ತಿದೆ. ಒಟ್ಟಾರೆ ಹೆಬ್ಬಳ್ಳಿ ಗ್ರಾಮದ ಕೃಷಿ ಭೂಮಿಗೆ ಬರುವ ನೀರೇ ಹೆಬ್ಬಳ್ಳಿಗೆ ಖಾಯಂ ನೀರಾವರಿ ಸೌಲಭ್ಯವುಳ್ಳ ವ್ಯವಸ್ಥೆಯಾಗಿದೆ.

ಹೆಬ್ಬಳ್ಳಿಯ ಸುತ್ತಮುತ್ತಲೂ ಕಪ್ಪು ಮಣ್ಣಿನ ಭೂಮಿ ಇದ್ದು, ಹತ್ತಿಯನ್ನು ಹೆಚ್ಚಾಗಿ ಬೆಳೆಯಲಾಗುತ್ತಿದೆ. ಅಲ್ಲದೆ ದ್ವಿದಳ ಧಾನ್ಯಗಳಾದ ಕಡಲೆ, ಹೆಸರು, ಮತ್ತು ಗೋಧಿ ಬೆಳೆಯಲಾಗುತ್ತದೆ. ಇಲ್ಲಿನ ಪ್ರತಿ ಎಕರೆಗೆ ಮಾರುಕಟ್ಟೆಯಲ್ಲಿ ಒಂದು ಲಕ್ಷ ರೂಪಾಯಿ ಮೌಲ್ಯವಿದೆ. ಇತ್ತೀಚಿನ ರೈತರು ಕೃಷಿಗೆ ಆಧುನಿಕ ತಾಂತ್ರಿಕತೆಯನ್ನು ಬಳಸಿಕೊಳ್ಳುತ್ತಿದ್ದಾರೆ. ಗ್ರಾಮದಲ್ಲಿ ೧೧ ಟ್ರ್ಯಾಕ್ಟರ್‌ಗಳಿದ್ದು, ಸಾಮಾನ್ಯವಾಗಿ ಸ್ಥಳೀಯ ಕೃಷಿಕರು ಹೊಲ ಸಾಗುವಳಿ ಮಾಡಲು ಇವುಗಳನ್ನೇ ಬಾಡಿಗೆ ಪಡೆಯುತ್ತಾರೆ. ಆಧುನಿಕ ಟ್ರ್ಯಾಕ್ಟರ್ ಮತ್ತು ಮಿಷನ್‌ಗಳ ಬಳಕೆಯಿಂದಾಗಿ ಕೃಷಿಕಾರ್ಯಗಳು ಕ್ಷಿಪ್ರವಾಗಿ ಸಾಗುತ್ತಿವೆ. ಈ ಆಧುನಿಕ ಸೌಲಭ್ಯಗಳ ಕುರಿತು ಕೆಲವರಿಗೆ ಅಸಮಾಧಾನವೂ ಇದೆ. ಒಮ್ಮೆ ಹೆಬ್ಬಳ್ಳಿಯ ಕೆಲವರನ್ನು ಮಾತಿಗೆಳೆದಾಗ ಅವರಲ್ಲೊಬ್ಬ 'ಈಗಿನ ಕಾಲ್ದಾಗ ಎಲ್ಲ ಮಿಷನ್‌ಗಳೇ ಮಾಡ್ತವೆ, ನಾವ್ ಮಾಡದೇನೈತಿ' ಎಂದು ಹೇಳಿದ. ಈ ಮಾತಿನಲ್ಲಿ ಆತನನ್ನು ನಿರುದ್ಯೋಗಿಯನ್ನಾಗಿಸಿದ ಆಧುನಿಕ ತಾಂತ್ರಿಕತೆಯ ಬಗ್ಗೆ ಒಂದು ರೀತಿಯ ಅಸಮಾಧಾನ ಇದ್ದಂತಿತ್ತು. ಆಧುನಿಕತೆಯಿಂದಾಗಿ ಕೆಲಸವಿಲ್ಲದೆ ಇಲ್ಲಿನ ಬಸ್‌ನಿಲ್ದಾಣದಲ್ಲಿ, ದೇವಸ್ಥಾನಗಳ ಕಟ್ಟೆಯ ಮೇಲೆ ಯಾವಾಗಲೂ ಹಲವು ಜನ ಕೂತು ಮಾತನಾಡುವುದು ಕಾಣಬಹುದಾಗಿದೆ. ಗ್ರಾಮದಲ್ಲೊಂದು 'ಕರ್ನಾಟಕ ನೇಕಾರರ ಸೊಸೈಟಿ' ಇದ್ದು, ಸ್ಥಳೀಯ ನೇಕಾರರು ತಾವು ನೇಯ್ದ ಬಟ್ಟೆಗಳನ್ನು ಸೊಸೈಟಿಯ ಮೂಲಕ ಮಾರಾಟ ಮಾಡುತ್ತಾರೆ.

ಇಲ್ಲಿನ ಗ್ರಾಮದಲ್ಲಿ ಕುಡಿವ ನೀರಿನ ಸೌಲಭ್ಯ ಉತ್ತಮ ಎನ್ನಬಹುದಾದ ಸ್ಥಿತಿಯಲ್ಲಿದ್ದು, ನಾಲ್ಕು ನೀರಿನ ಟ್ಯಾಂಕುಗಳನ್ನು ಕಟ್ಟಿಸಲಾಗಿದೆ. ಈ ನಾಲ್ಕು ಟ್ಯಾಂಕ್‌ಗಳಿಂದ ನಾಲ್ಕೂವರೆ ಲಕ್ಷ ಲೀಟರ್ ನೀರನ್ನು ಸಂಗ್ರಹಿಸಬಹುದಾಗಿದೆ. ಗ್ರಾಮದಲ್ಲಿ ಒಟ್ಟಾರೆ ೩೩ ನೀರಿನ ಕೈಪಂಪುಗಳಿದ್ದು, ಇವುಗಳಲ್ಲಿ ೧೫ ಕೈಪಂಪುಗಳು ಕೆಟ್ಟು ಹಲವು ವರ್ಷಗಳೇ ಆಗಿವೆ. ಇವು ಸದ್ಯಕ್ಕೆ ದುರಸ್ತಿ ಆಗುವಂತೆ ಕಾಣುತ್ತಿಲ್ಲ. ಕಾರಣ ಕೇಳಿದರೆ ಗ್ರಾಮ ಪಂಚಾಯಿತಿಯಲ್ಲಿ ಹಣವಿಲ್ಲ ಎನ್ನುವ ಉತ್ತರ ಬಂತು. ಆದರೆ ಗ್ರಾಮದ ಕೃಷಿ ಭೂಮಿ, ಕುಡಿವ ನೀರು, ವ್ಯಾಪಾರಿ ಮಳಿಗೆ ಮುಂತಾದವುಗಳಿಂದ ಪ್ರತಿವರ್ಷ ೪೦ ರಿಂದ ೫೦ ಸಾವಿರದವರೆಗೆ ಗ್ರಾಮಪಂಚಾಯಿತಿಗೆ ಆದಾಯ ಬರುತ್ತದೆ. ಇದನ್ನೆಲ್ಲಾ ಪ್ರಶ್ನಿಸುವಂತೆಯೇ ಇಲ್ಲ. ಪ್ರಶ್ನಿಸಿದರೆ ಖಚಿತ ಉತ್ತರ ದೊರಕುವ ಭರವಸೆ ನನಗೂ ಇಲ್ಲದ್ದರಿಂದ ನಾನೂ ಸುಮ್ಮನಾದೆ.

ಗ್ರಾಮದಲ್ಲಿ ಪ್ರಮುಖವಾಗಿ ಹೆಸರಿಸಬಹುದಾದವರು ಎಂದರೆ ಜಾಗೀರ್‌ದಾರ್ ಮನೆತನ ಹಾಗೂ ನಾಡಿಗೇರ್ ಮನೆತನ. ಮೂಲತಃ ಜಾಗೀರದಾರರ ನಾಲ್ಕು ಮನೆಗಳಿವೆ. ಅದರಲ್ಲಿ ಈ ಮನೆತನಕ್ಕೆ ಸೇರಿದ ಉಪ್ಪಿನಮಳಿ ವಾಡೆಯಲ್ಲಿರುವ ಪಾಂಡುರಂಗರಾವ್ ಹೆಬ್ಳೀಕರ್ ಹಾಗೂ ಬಸ್ ನಿಲ್ದಾಣದ ಹತ್ತಿರವಿರುವ ಸುಹಾಸ್ ಹೆಬ್ಳೀಕರ ಅವರು ವಾಸಿಸುತ್ತಾರೆ. ಸುಮಾರು ೫೦ ವರ್ಷಗಳ ಹಿಂದೆ ಜಾಗೀರದಾರರಾಗಿದ್ದ ನಾಡಿಗೇರ ಮನೆತನದವರು ಹೆಬ್ಬಳ್ಳಿ ಗ್ರಾಮದ ಗೌಡರಾಗಿದ್ದರು. ಸಾವಿರಾರು ಎಕರೆ ಕೃಷಿ ಭೂಮಿಯ ಒಡೆಯರಾಗಿದ್ದರು. ಇವರು ಈಗ ಭೂಸುಧಾರಣೆ ಕಾಯ್ದೆ ಅನ್ವಯ ತಮ್ಮ ಹೆಚ್ಚುವರಿ ಭೂಮಿಯನ್ನೆಲ್ಲಾ ಕಳೆದುಕೊಂಡಿದ್ದು, ಸಾಮಾನ್ಯರಂತೆ ಬದುಕುತ್ತಿದ್ದಾರೆ. ಬ್ರಾಹ್ಮಣ ಜನಾಂಗದ ನಾಡಿಗೇರ ಮನೆತನದ ವೆಂಕನಗೌಡ ನಾಡಿಗೇರ ಎಂಬುವವರು ೧೯೮೪ರ ಸುಮಾರಿಗೆ ಮಹಾರಾಷ್ಟ್ರದ ಸತಾರ ಜಿಲ್ಲೆಯ ಗೊಂದಾವಲೇಕರ ಮಹಾರಜರನ್ನು ಹೆಬ್ಬಳ್ಳಿಗೆ ಕರೆತಂದರು. ಇವರ ನೇತೃತ್ವದಲ್ಲಿ ಇಲ್ಲಿ ಚೈತನ್ಯಾಶ್ರಮ ಆರಂಭವಾಯಿತು. ಈಗಲೂ ನಾಡಿಗೇರ ಮನೆತನದವರೇ ಈ ಆಶ್ರಮದ ಉಸ್ತುವಾರಿ ನೋಡಿಕೊಳ್ಳುತ್ತಿದ್ದಾರೆ. ಇದಲ್ಲದೆ ಹಿಂದಿನ ಕಾಲದಿಂದಲೂ ಹೆಬ್ಬಳ್ಳಿಯಲ್ಲಿ ಶ್ರೀ ವೆಂಕಟೇಶ್ವರ ದೇವಸ್ಥಾನ, ಪಾಂಡುರಂಗ ದೇವಸ್ಥಾನ, ಚಿದಂಬರೇಶ್ವರ ದೇವಸ್ಥಾನ, ಶ್ರೀ ಚಿಂತಾಮಣಿ ಮಹಾಗಣಪತಿ ಮಂದಿರ, ಶ್ರೀ ರಾಮ ತ್ರ್ಯಂಬಕೇಶ್ವರ ದೇವಸ್ಥಾನ ಇದೆ. ಇವುಗಳೊಂದಿಗೆ ವೀರಣ್ಣ, ಹನುಮಂತ, ಮೈಲಾರ, ಮಲ್ಲಯ್ಯ, ಬಸವಣ್ಣ, ದ್ಯಾಮವ್ವ, ದುರ್ಗವ್ವ, ಶಂಕರಮ್ಮ, ಲೋಕೂರು ದ್ಯಾಮವ್ವ, ಚೆಂಗಲವ್ವನ ಗುಡಿಗಳಿವೆ. ಹಿಂದೆ ಗ್ರಾಮದ ಬಳಿ ಒಂದು ಕೆರೆ ಇತ್ತೆಂದು ಹೇಳಲಾಗುತ್ತದೆ. ಆದರೆ ಈಗ ಅದು ಇಲ್ಲ. ಕೆರೆ ಇತ್ತೆಂದು ಹೇಳಲಾಗುವ ಸ್ಥಳದಲ್ಲಿ ಚಂದ್ರಪರಮೇಶ್ವರಿ ಗುಡಿ ಇದ್ದು, ಇದು ಶಿಥಿಲ

ಅವಸ್ಥೆಯಲ್ಲಿದೆ. ಮಸೀದಿ ಹಾಗೂ ಮೆಹಬೂಬು ಸುಬಾನಿಯ ದರ್ಗಾ ಕೂಡ ಇದ್ದು, ಇಲ್ಲಿ ಉರುಸ್ ನಡೆಯುತ್ತದೆ. ಚೈತನ್ಯಾಶ್ರಮವು ಚೈತನ್ಯ ಪ್ರಕಾಶನ ಎನ್ನುವ ಪ್ರಕಟನಾ ಸಂಸ್ಥೆಯನ್ನು ಸ್ಥಾಪಿಸಿಕೊಂಡಿದ್ದು, ಕೆಲವು ಪುಸ್ತಕಗಳನ್ನು ಪ್ರಕಟಿಸಿದೆ. ಅಲ್ಲದೆ ಈ ಆಶ್ರಮದಲ್ಲಿ ನಿರಂತರವಾಗಿ ಭಜನಾ ಕಾರ್ಯಕ್ರಮ, ಗೊಂದಾವಲೇಕರ ಮಹಾರಾಜರ ಜಯಂತಿ, ಪುಣ್ಯತಿಥಿ, ಶ್ರೀರಾಮನವಮಿ, ಶ್ರೀಕೃಷ್ಣಾಷ್ಟಮಿ ಮುಂತಾದ ಕಾರ್ಯಕ್ರಮಗಳನ್ನು ಆಚರಿಸಿಕೊಳ್ಳುತ್ತಾ ಬರಲಾಗಿದೆ. ಉಳಿದ ಹಲವು ಧಾರ್ಮಿಕ ಕೇಂದ್ರಗಳು ಹೆಚ್ಚಾಗಿ ಕಾಡು ಹರಟೆಗೆ ಇಲ್ಲವೆ ಮಲಗುವ ಜಾಗಗಳಾಗಿ ಮಾರ್ಪಟ್ಟಿವೆ.

—-

**(ಸಂಖ್ಯಾಗೊಂದಲ / ಚುಕ್ಕಿ ಚಿಹ್ನೆಯ ಗೊಂದಲ ಇರುವುದರಿಂದ ಈ ಅಧ್ಯಾಯದ ಕೆಲವು ಅಡಿಟಿಪ್ಪಣಿಗಳನ್ನು ನಮೂದಿಸಿಲ್ಲ)**

## ೨. ಹೆಬ್ಬಳ್ಳಿಯ ಜಾಗೀರದಾರ ಮನೆತನ

ಹೆಬ್ಬಳ್ಳಿಯ ಜಾಗೀರದಾರ ಮನೆತನಕ್ಕೆ ೨೫೦ ವರ್ಷಗಳ ಇತಿಹಾಸವಿದೆ. ದಿನಗಳಲ್ಲಿ ವಿವಿಧ ಸಾಮ್ರಾಜ್ಯಗಳ ಅಡಿಯಲ್ಲಿ ಇವರು ಕಾರ್ಯನಿರ್ವಹಿಸಿದ್ದಾರೆ. ಪೇಶ್ವೆಗಳು, ನವಾಬರು, ಬ್ರಿಟೀಷರು, ಜಾಗೀರದಾರ ಮನೆತನದ ಏಳು-ಬೀಳುಗಳಿಗೆ ಕಾರಣರಾಗಿದ್ದಾರೆ. ಈ ವಿವಿಧ ಪ್ರಭುತ್ವಗಳು ಹಾಗೂ ಅವುಗಳ ಅಧಿಕಾರ ಕೇಂದ್ರಗಳು, ಹೆಬ್ಬಳ್ಳಿ ಜಾಗೀರದಾರರನ್ನೇನು ಆರ್ಥಿಕವಾಗಿ ದುರ್ಬಲರನ್ನಾಗಿಸಿಲ್ಲ. ಹಾಗೆ ನೋಡಿದರೆ ಜಾಗೀರದಾರ ಮನೆತನವನ್ನು ಸಂಪೂರ್ಣವಾಗಿ ದುರ್ಬಲರನ್ನಾಗಿಸಿದ್ದು, ೧೯೫೨ರಲ್ಲಿ ಬಾಂಬೆ ಸರ್ಕಾರ ಕೈಗೊಂಡ ಭೂ ಸುಧಾರಣಾ ಕ್ರಮಗಳು. ಈ ಸಂದರ್ಭದಲ್ಲಿ ಬಾಂಬೆ ಸರ್ಕಾರವು ಹೆಬ್ಬಳ್ಳಿ ಜಾಗೀರದಾರರಿಗೆ ಸೇರಿದ್ದೆನ್ನಲಾದ ಸುಮಾರು ೧೩ ಸಾವಿರ ಎಕರೆ ಭೂಮಿ ಪ್ರದೇಶವನ್ನು ತನ್ನ ವಶಕ್ಕೆ ತೆಗೆದುಕೊಂಡಿತು.

ಹೆಬ್ಬಳ್ಳಿಯಲ್ಲಿ ಈಗಿರುವ ಉಪ್ಪಿನಮಳಿ ವಾಡೆ ಗಮನಿಸಿದರೆ, ಜಾಗೀರದಾರ ಮನೆತನದ ಹಿಂದಿನ ವೈಭವ ಅರಿವಿಗೆ ಬರುತ್ತದೆ. ಸುಮಾರು ಎರಡೂವರೆ ಎಕರೆ ವಿಸ್ತೀರ್ಣವಿರುವ ವಾಡೆಸುತ್ತಲೂ ಮಣ್ಣಿನ ಗೋಡೆಯನ್ನು ಕಟ್ಟಿದ್ದಾರೆ. ದೊಡ್ಡ ಪ್ರವೇಶದ್ವಾರದ ಮೂಲಕ ಒಳಗಡೆ ಹೋದರೆ ಬಹುದೊಡ್ಡ ಮನೆ ಇದೆ. ಸಾಮಾನ್ಯವಾಗಿ ಆ ಮನೆಯ ವಿಸ್ತೀರ್ಣವೇ ಅರ್ಧ ಎಕರೆ ಇದೆ. ಮನೆಯ ಎಡಭಾಗದಲ್ಲಿ ವಿಸ್ತಾರವಾದ ಬಯಲಿದೆ. ಇಲ್ಲಿ ೧೫-೨೦ ಕುದುರೆಗಳನ್ನು ಸಾಕುತ್ತಿದ್ದುದಾಗಿ ಈಗಿರುವ ಜಾಗೀರದಾರ ಮನೆತನದ ಪಾಂಡುರಂಗರಾವ್ ಹೆಬ್ಳೀಕರ್ ತಿಳಿಸಿದರು. ಮನೆಯ ಮುಂಭಾಗದಲ್ಲಿ ಬಾವಿ ಇದ್ದು, ಸುತ್ತಲೂ ಕಟ್ಟೆಯನ್ನು ಕಟ್ಟಿದ್ದಾರೆ. ಮನೆಯೊಳಗೆ ಪ್ರವೇಶಿಸುತ್ತಿದ್ದಂತೆ ತೂಗು ಮಂಚವೊಂದು ಇದೆ. ಇದನ್ನು ಬಿಟ್ಟರೆ ಮನೆಯ ಗೋಡೆಗಳಿಗೆ ಯಾವುದೇ ಹಳೆಯ ವೈಭವ ಕಂಡುಬರುವುದಿಲ್ಲ. ನನಗೆ ಪಾಂಡುರಂಗರಾವ್ ಹೆಬ್ಳಿಕರ್ ಇದರ ಮೇಲೆ ಕೂತು ವಿವರಣೆ ನೀಡಿದರು. ಎದುರುಗಡೆ ಚಿಕ್ಕದೊಂದು ಬಾಗಿಲಿನ ಮೆಟ್ಟಿಲ ಮೇಲೆ ಕೂತು ಅವರು ಹೇಳಿದ್ದನ್ನೆಲ್ಲಾ ನಾನು ಟಿಪ್ಪಣಿ ಮಾಡಿಕೊಳ್ಳುತ್ತಿದ್ದೆ. ಮನೆಯಲ್ಲಿದ್ದ ಇಬ್ಬರು ಹೆಂಗಸರು ಹೊರಗಡೆ ಬಾರದೆ ಬಾಗಿಲ ಹಿಂದೆ ನಿಂತು ನಮ್ಮ ಮಾತು ಕೇಳಿಸಿಕೊಳ್ಳುತ್ತಿದ್ದುದು ಕಂಡುಬಂತು. ನನಗೊಮ್ಮೆ ಟೀ ಕೊಡಲು ಬಂದ ವೃದ್ಧ ಹೆಂಗಸನ್ನು 'ತಮ್ಮ ಮಡದಿ' ಎಂದು ಪಾಂಡುರಂಗರಾವ್ ಹೆಬ್ಳೀಕರ್ ಪರಿಚಯಿಸಿದರು. ಟೀ ಕುಡಿದ ನಂತರದಲ್ಲಿ 'ಕಪ್ ತೊಳೆದಿಡಬೇಕು' ಎಂದು ಸೂಚಿಸುವಂತೆ ಈ ವೃದ್ದರು ಒಂದು ಪ್ಲಾಸ್ಟಿಕ್ ತಂಬಿಗೆ ತುಂಬಾ ನೀರು ತಂದಿಟ್ಟರು. ನಾನು ಅಂಗಳಕ್ಕೆ ಬಂದು ಕಪ್ ತೊಳೆದು ಮನೆಯೊಳಗಡೆಯ ಮೂಲೆಯಲ್ಲಿಟ್ಟೆ. ಹಾಗೆ ನೋಡಿದರೆ ತಮ್ಮ ಪಾಲಿನ ಭೂಮಿಯನ್ನೆಲ್ಲಾ ಕಳೆದುಕೊಂಡು ೪೮ ಎಕರೆ ಭೂಮಿಯಲ್ಲಿ (ಈತ ಮತ್ತೆ ೪ ಎಕರೆ ಜಮೀನು ಖರೀದಿಸಿದ್ದಾರೆ) ಬದುಕುವುದನ್ನು ಹೆಬ್ಬಳ್ಳಿಯ ಜಾಗೀರುದಾರ ಮನೆತನದವರು ರೂಢಿಸಿಕೊಂಡಿದ್ದಾರೆ. ಆದರೆ ಮನೆತನದ ಪೂರ್ವಜರ ಜಾಗೀರದಾರರ ಗತ್ತನ್ನಾಗಲಿ ನಡುವಳಿಕೆಗಳನ್ನಾಗಲಿ ಇನ್ನೂ ಕಳೆದುಕೊಂಡಿಲ್ಲ ಎನಿಸಿತು.

ಹೆಬ್ಬಳ್ಳಿ ಜಾಗೀರದಾರ ಮನೆತನದ ಮೂಲ ಪ್ರಮುಖ ವ್ಯಕ್ತಿಯೆಂದರೆ ಅಪ್ಪಾಜಿರಾವ್ ಸೂರೋ. ಇವರು ಮಹಾರಾಷ್ಟ್ರದ ಫಂಡರಾಪುರ ಬಳಿಯ ಕರ್ಕಂಭೋಸ್ ಎನ್ನುವ ಗ್ರಾಮದವರು. ಅಪ್ಪಾಜಿರಾವ್ ಸೂರೋ ಅವರ ತಂದೆ-ತಾಯಿ ಅಲ್ಪಕಾಲದಲ್ಲಿಯೇ

ದುರ್ಮರಣಕ್ಕೀಡಾದರು. ಆಗಿನ್ನೂ ಚಿಕ್ಕವರಿದ್ದ ಅಪ್ಪಾಗಿರಾವ್ ಸೂರೋ ಮಾವ ರಾಮಚಂದ್ರರಾವ್ ಅವರೊಂದಿಗೆ ಬೆಳೆದರು. ರಾಮಚಂದ್ರರಾವ್ ಶಿವಾಜಿಯೊಂದಿಗೆ ರಾಯಘಡದಲ್ಲಿದ್ದರು. ಶಿವಾಜಿಯ ಸೇವೆಯಲ್ಲಿದ್ದ ಇವರಿಗೆ ೫೦೦ ಕುದುರೆಗಳ ಸರದಾರರು ಎನ್ನುವ ಬಿರುದು ಇತ್ತು. ಶಿವಾಜಿಯ ಪುತ್ರ ರಾಜರಾಮ್ ಆಡಳಿತದ ಸಂದರ್ಭದಲ್ಲಿ ಅಪ್ಪಾಜಿರಾವ್ ಸೂರೋ ಅವರನ್ನು ನರಗುಂದ-ರಾಮದುರ್ಗಗಳ ಜಾಗೀರದಾರರನ್ನಾಗಿ ನೇಮಿಸಲಾಯಿತು. ಅಪ್ಪಾಜಿರಾವ್ ಸೂರೋ ನರಗುಂದಕ್ಕೆ ಬಂದು ನೆಲೆಸಿದರು. ಇವರಿಗೆ ಮಂತ್ರಿಯಾಗಿ ವೆಂಕಟರಾವ್ ಧಾವೆ (ಇವರು ಭೂದಾನ ಚಳುವಳಿಯ ನೇತಾರರಾದ ವಿನೋಭಾಭಾವೆ ಬಂಧುಗಳು) ಜೊತೆಗಿದ್ದರು. ಅಪ್ಪಾಜಿರಾವ್ ಸೂರೋ ಅವರಿಗೆ ಬಹುದಿನಗಳ ನಂತರ ಬಲವಂತರಾವ್ ಎಂಬ ಪುತ್ರ ಜನಿಸಿದನು. ಬಲವಂತರಾವ್‌ನಿಗೆ ಅಧ್ಯಾತ್ಮದೆಡೆಗೆ ಒಲವು ಇದ್ದಿದ್ದರಿಂದ, ಮಂತ್ರಿ ವೆಂಕಟರಾವ್ ಭಾವೆ ಆಡಳಿತದಲ್ಲಿ ಪ್ರಧಾನ ಪಾತ್ರವಹಿಸಿದ್ದರು. ಒಮ್ಮೆ ಬಲವಂತರಾವ್ ತಿರುಪತಿಗೆ ತೆರಳಿದ ಸಂದರ್ಭದಲ್ಲಿ ನರಗುಂದದ ಪಟ್ಟವನ್ನು ಮಂತ್ರಿ ವೆಂಕಟರಾವ್, ತನ್ನ ಪುತ್ರ ರಾಮರಾವ್ ಭಾವೆಗೆ ವಹಿಸಿದ. ಇದರಿಂದ ಅಪ್ಪಾಜಿರಾವ್ ಸೂರೋ ಪುತ್ರ ಬಲವಂತರಾವನಿಗೂ ಹಾಗೂ ಮಂತ್ರಿ ವೆಂಕಟರಾವ್ ಭಾವೆ ಪುತ್ರ ರಾಮರಾವ್ ಭಾವೆಗೂ ಮಧ್ಯೆ ಭಿನ್ನಾಭಿಪ್ರಾಯ ಉಂಟಾಯಿತು. ಈ ಕಲಹದ ಇತ್ಯರ್ಥಕ್ಕಾಗಿ ಪೇಶ್ವೆ ಬಳಿ ದೂರನ್ನು ಒಯ್ಯಲಾಯಿತು.

ಈ ಮಧ್ಯೆ ಸವಣೂರಿನ ನವಾಬ ಮಜೀದಖಾನ (೧೭೨೪-೪೯) ಹೈದರಾಬಾದ್‌ನ ನಿಜಾಂ ಉಲ್ ಮುಲ್ಕನೊಂದಿಗೆ ಯುದ್ಧ ಮಾಡಿದನು. ಈ ಯುದ್ಧದಲ್ಲಿ ಪೇಶ್ವೆಗಳ ಅಪ್ಪಣೆ ಮೇರೆಗೆ ನರಗುಂದದ ಬಲವಂತರಾವ್ ಹಾಗೂ ರಾಮ್‌ರಾವ್ ಭಾವೆ ಸವಣೂರಿನ ನವಾಬನಿಗೆ ಸಹಾಯ ಮಾಡಿದರು. ಈ ಯುದ್ಧದಲ್ಲಿ ಸವಣೂರಿನ ನವಾಬನು ಗೆದ್ದನು. ಅಲ್ಲದೆ ಸಹಾಯ ಹಸ್ತ ಚಾಚಿದ್ದಕ್ಕಾಗಿ ಹೆಬ್ಬಳ್ಳಿ ಗ್ರಾಮದ ಭೂಮಿಯ ಜಾಗೀರದಾರ ಪಟ್ಟವನ್ನು ಬಲವಂತರಾವ್ ಉಡುಗೊರೆಯಾಗಿ ಕೊಟ್ಟನು. ಯಾವಾಗ ನರಗುಂದದಲ್ಲಿ ಬಲವಂತರಾವನಿಗೂ ಹಾಗೂ ರಾಮರಾವ್ ಭಾವೆಗೂ ಭಿನ್ನಾಭಿಪ್ರಾಯ ಉಂಟಾಯಿತೋ, ಆಗ ಪೇಶ್ವೆಗಳು ಮತ್ತು ಸವಣೂರಿನ ನವಾಬರು ಹೆಬ್ಬಳ್ಳಿ ಗ್ರಾಮದಲ್ಲಿ ಬಂದಿರಲು ಬಲವಂತರಾವನಿಗೆ ಸೂಚಿಸಿದರು. ಈ ಹಿನ್ನಲೆಯಲ್ಲಿ ಹೆಬ್ಬಳ್ಳಿ ಗ್ರಾಮದ ಜಾಗೀರದಾರರಾಗಿ ಬಲವಂತರಾವ್ ಅವರು ೧೭೫೪ರಲ್ಲಿ ಇಲ್ಲಿಗೆ ಬಂದು ನೆಲೆಸಿದರು.

ಬಲವಂತರಾವ್ ಅವರಿಗೆ ಶೂರರಾವ್ ಹಾಗೂ ರಾಮಚಂದ್ರರಾವ್ ಎಂಬ ಇಬ್ಬರು ಮಕ್ಕಳು. ಈ ಇಬ್ಬರಲ್ಲಿ ಆಸ್ತಿ ಭಾಗ ಮಾಡುವ ಸಂಬಂಧವಾಗಿ ಕಲಹ(೧೭೯೦) ಉಂಟಾಯಿತು. ಆಗ ಮುರುಗೋಡದ ಚಿದಂಬರ ದೀಕ್ಷಿತ ಎಂಬ ಸಂತರ ನೇತೃತ್ವದಲ್ಲಿ ಇಬ್ಬರಿಗೂ ಆಸ್ತಿ ಭಾಗ ಮಾಡಿ ರಾಜಿ ಮಾಡಲಾಯಿತು. ಈ ಸಂದರ್ಭದಲ್ಲಿಯೇ ಚಿದಂಬರ ದೀಕ್ಷಿತರ ಮಂದಿರವನ್ನು ಹೆಬ್ಬಳ್ಳಿಯಲ್ಲಿ ಸ್ಥಾಪಿಸಲಾಯಿತು.

ಮುಂದೆ ಪೇಶ್ವೆಗಳ ಪತನಾನಂತರ (೧೮೧೮) ಬ್ರಿಟೀಷರಿಗೆ ಹೆಬ್ಬಳ್ಳಿ ಜಾಗೀರದಾರರು ನಿಷ್ಠೆ ತೋರಿದರು. ಇದರಿಂದಾಗಿ ಬ್ರಿಟೀಷರು ಇವರ ಜಾಗೀರದಾರತನವನ್ನು ಮಾನ್ಯ ಮಾಡಿದರು. ಅಲ್ಲದೆ ಹೆಬ್ಬಳ್ಳಿ ಸಮೀಪವಿರುವ ತಲವಾಯಿ ಮತ್ತು ಕುರುಡಾಪುರ ಗ್ರಾಮಗಳ ಭೂಮಿಯನ್ನು ಇವರ ಅಧೀನಕ್ಕೆ ಒಪ್ಪಿಸಿದರು.

ಉತ್ತರ ಭಾರತದಲ್ಲಿ ೧೮೫೭ರ ಸಂದರ್ಭದಲ್ಲಿ ನಡೆದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ ಅಥವಾ ಬ್ರಿಟಿಷರ ದೃಷ್ಟಿಯಲ್ಲಿ ಸಿಪಾಯಿದಂಗೆ ಅನಿಸಿಕೊಂಡ ವಿದ್ಯಾಮಾನ ಪ್ರಭಾವದಿಂದಾಗಿ ದಕ್ಷಿಣದಲ್ಲಿಯೂ ಬ್ರಿಟೀಷರ ವಿರುದ್ಧ ದಂಗೆಗಳಾದವು. ಅವುಗಳಲ್ಲಿ ಮುಂಡರಗಿ ಭೀಮರಾಯನ ದಂಗೆಯೂ (೧೮೫೮) ಒಂದು. ಮುಂಡರಗಿಯ ಭೀಮ್‌ರಾವ್ ನಾಡಿಗೇರ ನರಗುಂದದ ಜಾಗೀರದಾರರೊಂದಿಗೆ ಸೇರಿ ಬ್ರಿಟೀಷರ ವಿರುದ್ಧ ಬಂಡಾಯವೆದ್ದನು. ಈ ಬಂಡಾಯದಲ್ಲಿ ಭಾಗಿಯಾಗಿದ್ದ ನರಗುಂದದ ಜಾಗೀರದಾರರು ಹಾಗೂ ಹೆಬ್ಬಳ್ಳಿಯ ಜಾಗೀರದಾರರು ನಿಕಟವರ್ತಿಗಳು. ಅಲ್ಲದೆ ಹೆಬ್ಬಳ್ಳಿ ಗ್ರಾಮದ ಗೌಡರಾದ ನಾಡಿಗೇರ ಮನೆತನ ಮತ್ತು ಮುಂಡರಗಿಯ ಭೀಮರಾವ್ ನಾಡಿಗೇರ ನಿಕಟ ಬಂಧುಗಳಾಗಿದ್ದರು. ಈ ಹಿನ್ನಲೆಯಲ್ಲಿ ಬ್ರಿಟೀಷರ ವಿರುದ್ಧದ ಈ ಬಂಡಾಯಕ್ಕೆ ಹೆಬ್ಬಳ್ಳಿ ಜಾಗೀರದಾರರು ಸಹಾಯ ಮಾಡಿದರು. ಈ ದಂಗೆಯಲ್ಲಿ ಹೆಬ್ಬಳ್ಳಿ ಜಾಗೀರದಾರರಾಗಿದ್ದ ವಿಠಲರಾವ್ ಮಡಿದರು.

ಹೆಬ್ಬಳ್ಳಿ ಜಾಗೀರದಾರ ಮನೆತನದಲ್ಲಿ ಬ್ರಿಟೀಷರ ವಿರುದ್ಧ ಹೋರಾಡಿದ ಏಕೈಕ ವ್ಯಕ್ತಿಯೆಂದರೆ ಈ ವಿಠಲ್‌ರಾವ್. ಮುಂದಿನ ದಿನಗಳಲ್ಲಿ ಈ ಮನೆತನದ ಯಾರೊಬ್ಬರೂ ಬ್ರಿಟೀಷರ ವಿರುದ್ಧ ಹೋಗಲಿಲ್ಲ. ಬ್ರಿಟೀಷರು ಅಂತಹದ್ದೊಂದು ಬಿಗಿ ಹಿಡಿತವನ್ನು ಈ ಜಾಗೀರದಾರರ ಮೇಲೆ ಹೊಂದಿದ್ದರು. ಮುಂಡರಗಿ ಭೀಮರಾಯನ ಬಂಡಾಯದ ನಂತರ ಆತನಿಗೆ ಸಹಾಯ ಮಾಡಿದವರ ಬಗ್ಗೆ ಬ್ರಿಟೀಷರು ಆಕ್ರೋಶಗೊಂಡಿದ್ದರು. ಈ ಹಿನ್ನೆಲೆಯಲ್ಲಿ ಹೆಬ್ಬಳ್ಳಿಯ ಭೂಮಿಯನ್ನು ಸರಂಜಾಮ್ ಭೂಮಿಯನ್ನಾಗಿ ಮಾರ್ಪಡಿಸಿದರು. ಈ ಮಾರ್ಪಾಡಿನಿಂದ ಜಾಗೀರದಾರ ಮನೆತನದ ಮೇಲೆ ಹಲವು ಪರಿಣಾಮ ಬೀರಿತು. ಇದರಿಂದಾಗಿ ೧. ಹೆಬ್ಬಳ್ಳಿ ಭೂಮಿಯ ಒಡೆತನ ಬ್ರಿಟೀಷರದ್ದಾಯಿತು. ೨. ಈ ಒಡೆತನದ ಉಸ್ತುವಾರಿಯನ್ನು ಮಾತ್ರ ಹೆಬ್ಬಳ್ಳಿ ಜಾಗೀರದಾರರು ನೋಡಿಕೊಳ್ಳಬೇಕು. ೩. ಈ ಭೂಮಿಯನ್ನು ಮನೆತನದ ಸದಸ್ಯರಲ್ಲಿ ಭಾಗ ಮಾಡುವಂತಿಲ್ಲ. ೪. ಭೂಮಿಯ ಉಸ್ತುವಾರಿ ಕುಟುಂಬದ ಹಿರಿಯ ಮಗನಿಗೆ ವಹಿಸಿಕೊಡಲಾಯಿತು. ೫. ಬ್ರಿಟೀಷರು ಬಯಸಿದಲ್ಲಿ ಈ ಒಡೆತನವನ್ನು ಬೇರೊಬ್ಬರಿಗೆ ವಹಿಸಿಕೊಡಬಹುದಾಗಿತ್ತು. ೬. ಇದರಿಂದಾಗಿ ಹೆಬ್ಬಳ್ಳಿ ಜಾಗೀರದಾರ ಮನೆತನದವರು ಏನಿದ್ದರೂ ಬರೀ ಕಂದಾಯ ವಸೂಲಿ ಮಾಡುವ ಅಧಿಕಾರವನ್ನು ಮಾತ್ರ ಹೊಂದಿರುವವರಾದರು.

ಈ ಮಾರ್ಪಾಡಿನಿಂದ ಸ್ಥಳೀಯ ರೈತರ ಮೇಲೆ ಗಂಭೀರ ಪರಿಣಾಮ ಉಂಟಾಯಿತು. ಜಾಗೀರದಾರರು ಈಗ ರೈತರ ಮೇಲೆ ಹೆಚ್ಚು ಹೆಚ್ಚು ಕಂದಾಯವನ್ನು ನಿಗದಿಪಡಿಸಿದರು; ವಸೂಲಿ ಮಾಡುವಾಗಲೂ ಹೆಚ್ಚು ನಿರ್ದಯ ಆಗತೊಡಗಿದರು. ಏಕೆಂದರೆ ಬ್ರಿಟೀಷರು ಯಾವ ಸಂದರ್ಭದಲ್ಲಾದರೂ ಅವರ ಜಾಗೀರದಾರ ಅಧಿಕಾರವನ್ನು ಕಿತ್ತುಕೊಂಡು ಬೇರೊಬ್ಬರಿಗೆ ವರ್ಗಾಯಿಸಬಹುದಾಗಿತ್ತು. ಹೀಗಾಗಿ ಇರುವಷ್ಟು ದಿನ ಹೆಚ್ಚು ಕಂದಾಯ ವಸೂಲಿ ಮಾಡುವ ಮೂಲಕ ಶ್ರೀಮಂತರಾಗತೊಡಗಿದರು. ಇದೇ ವೇಳೆಯಲ್ಲಿ ಧಾರವಾಡ ಜಿಲ್ಲೆಯಲ್ಲಿ ಹತ್ತಿ ಬೆಳೆಯಲ್ಲಿ ಗಣನೀಯ ಹೆಚ್ಚಳ ಉಂಟಾಯಿತು. ಧಾರವಾಡ ಜಿಲ್ಲಾ ಗೆಜೆಟಿಯರ್ ಪ್ರಕಾರ 'ಜಿಲ್ಲೆಯಲ್ಲಿ ಅಮೆರಿಕನ್ ಹತ್ತಿ ಬೆಳೆ ೧೮೪೨ರಲ್ಲಿ ಕೇವಲ ೨ ಎಕರೆ ಇದ್ದದ್ದು, ೧೮೭೭ರಲ್ಲಿ ೨.೪೬ ಲಕ್ಷ ಎಕರೆ ಆಯಿತು. ಇದರಲ್ಲಿ ಹೆಬ್ಬಳ್ಳಿ ಗ್ರಾಮದ ಕೃಷಿಕರ ಪಾಲೂ ಇದೆ. ಏಕೆಂದರೆ ಹತ್ತಿ ನೂಲುವ ನೇಕಾರರು ಹೆಬ್ಬಳ್ಳಿಯಲ್ಲಿ ಬಹುಸಂಖ್ಯಾತರಿದ್ದಾರೆ. ೧೯೪೫ರಲ್ಲಿಯೇ ಅವರು ನೇಕಾರರ ಸಂಘ ಸ್ಥಾಪಿಸಿಕೊಂಡಿದ್ದಾರೆ. ಅಲ್ಲದೆ ನೇಕಾರರ ಸೊಸೈಟಿ ಮೂಲಕ ಹತ್ತಿ ನೂಲುವ ಕಾಯಕವನ್ನು ಮುಂದುವರೆಸಿಕೊಂಡು ಬಂದಿದ್ದಾರೆ.

೧೮೬೦ರಲ್ಲಿ ಹೆಬ್ಬಳ್ಳಿ ಗ್ರಾಮದಲ್ಲಿ ಜಾಗೀರದಾರ ಮನೆತನದವರು ಇನ್ನೆರಡು ವಾಡೆಗಳನ್ನು ನಿರ್ಮಿಸಿದರು. ಈಗ ಒಂದು ವಾಡೆ ಇದ್ದು ಇದರಲ್ಲಿ ಸುಹಾಸ್ ಹೆಬ್ಳಿಕರ್ ಎನ್ನುವವರು ವಾಸಿಸುತ್ತಿದ್ದಾರೆ. ಇನ್ನೊಂದು ವಾಡೆ ಸಂಪೂರ್ಣ ನಾಶವಾಗಿದ್ದು ಆ ಸ್ಥಳವನ್ನು ಚಿದಂಬರ ದೀಕ್ಷಿತ ಮಂದಿರಕ್ಕೆ ವಹಿಸಿಕೊಡಲಾಗಿದೆ.

ಭೂಮಿಯ ಒಡೆತನಕ್ಕೆ ಸಂಬಂಧಿಸಿದಂತೆ ಅಧಿಕಾರದಲ್ಲಾದ ಬದಲಾವಣೆಯ ಕುರಿತು ಜಾಗೀರದಾರ ಮನೆತನದ ಪಾಂಡುರಂಗರಾವ್ ಹೆಬ್ಳಿಕರ್ ಅವರೊಂದಿಗೆ ಮಾತನಾಡುತ್ತಲೇ 'ನಿಮ್ಮ ಮನೆತನದಲ್ಲಿ ಮತ್ಯಾರಾದರೂ ಬ್ರಿಟೀಷರ ವಿರುದ್ಧ ಹೋರಾಟ ಮಾಡಿದ್ದಾರೆಯೇ?' ಎಂದು ಕೇಳಿದೆ. ಇದಕ್ಕೆ ಅವರು ಕೊಟ್ಟ ಉತ್ತರವು ಒಟ್ಟು ಜಾಗೀರದಾರ ಮನೆತನಗಳ ಬದುಕುತ್ತಿದ್ದ ರೀತಿಗೆ ಕೈಗನ್ನಡಿಯಾಗಿತ್ತು. 'ಭಾರತ ಸ್ವಾತಂತ್ರ್ಯವಾಗುವವರೆಗೂ ನಮ್ಮ ಮನೆತನದಲ್ಲಿ ಬ್ರಿಟೀಷರ ವಿರುದ್ಧ ಚಕಾರವನ್ನೆತ್ತಿಲ್ಲ, ಬ್ರಿಟೀಷರ ವಿರುದ್ಧ ನಾವು ಹೋದರೆ ಇರುವ ಅಧಿಕಾರವನ್ನು ಕಸಿದುಕೊಂಡಾರು ಎನ್ನುವ ಭಯ ಮನೆತನದ ಹಿರಿಯರಿಗಿತ್ತು' ಎಂದು ಪಾಂಡುರಂಗರಾವ್ ಹೆಬ್ಳೀಕರ್ ಹೇಳಿದರು. ಈ ಭಯ ಬರೀ ಹೆಬ್ಬಳ್ಳಿ ಜಾಗೀರದಾರರ ಮನೆತನದವರದು ಮಾತ್ರವಾಗಿರಲಿಲ್ಲ. ಕರ್ನಾಟಕದ ಅದೆಷ್ಟೋ ಭೂಮಾಲಿಕರ ಹಾಗೂ ಜಾಗೀರದಾರರ ಭಯವಾಗಿತ್ತು. ಹಾಗೆ ನೋಡಿದರೆ ಬ್ರಿಟೀಷರ ವಿರುದ್ಧ ಹೋರಾಡಿದ ಆರಂಭದ ಹೋರಾಟಗಾರರಲ್ಲಿ ತುಂಡರಸರು ಹಾಗೂ ಭೂಮಾಲಿಕರದ್ದೇ ಪ್ರಮುಖ ಪಾತ್ರ. ಇವರೆಲ್ಲ ತಮ್ಮ ಅಧಿಕಾರವನ್ನೋ, ಭೂಮಿಯ ಮೇಲಿನ ಸ್ವಾಮ್ಯವನ್ನೋ ಬ್ರಿಟೀಷರು ಕಸಿದುಕೊಂಡದ್ದಕ್ಕಾಗಿ ಅದರ ವಿರುದ್ಧ ತಿರುಗಿ ಬಿದ್ದಿದ್ದರು. ಕೊಡಗಿನ ಸ್ವಾಮಿ ಅಪರಂಪಾರ ಪುಟ್ಟಬಸಪ್ಪ, ಕಿತ್ತೂರಿನ ರಾಣಿ ಚೆನ್ನಮ್ಮ, ಸುರಪುರದ ವೆಂಕಟಪ್ಪನಾಯಕ, ನರಗುಂದದ ಬಾಬಾಸಾಹೇಬ ಮುಂತಾದವರ ದಂಗೆಗೆ ಮುಖ್ಯ ಕಾರಣಗಳಲ್ಲಿ ಇದೂ ಒಂದಾಗಿತ್ತು.

ಮುಂಡರಗಿಯ ಭೀಮರಾಯನ ಜೊತೆ ಸೇರಿದ್ದ ಹೆಬ್ಬಳ್ಳಿಯ ವಿಠಲರಾವ್‌ರಿಗೆ ಚಿದಂಬರ ರಾವ್ ಎನ್ನುವ ಮಗನಿದ್ದ. ಈತ ೧೯೨೦ರಲ್ಲಿ ನಿಧನ ಹೊಂದಿದರು. ಇವರಿಗೆ ಇಬ್ಬರು ಮಕ್ಕಳು. ಒಬ್ಬರು ವಿಠಲರಾವ್ ಮತ್ತೊಬ್ಬರು ಮಾಧವರಾವ್ ಎಂದು. ಮಾಧವರಾವ್ ಅವರಿಗೆ ಮಕ್ಕಳಿರಲಿಲ್ಲ. ವಿಠಲರಾವ್ ಅವರಿಗೆ ಕೃಷ್ಣರಾವ್ ಎಂಬ ಮಗನಿದ್ದ. ೧೯೪೪ರಲ್ಲಿ ಹೆಬ್ಬಳ್ಳಿಯ ಜಾಗೀರದಾರ ಮನೆತನ ಮೂಲದಿಂದ ಹಲವು ಕವಲುಗಳಾಗಿತ್ತು. ಬ್ರಿಟೀಷರು ಜಾಗೀರದಾರ ಭೂಮಿಯನ್ನು ಸ್ವಂತ ಆಸ್ತಿಯಂತೆ ಹಂಚಿಕೊಳ್ಳುವಂತಿಲ್ಲ ಎಂದು ೧೮೫೮ರಲ್ಲಿ ತೀರ್ಮಾನಿಸಿದರು. ಆದರೆ ಅಷ್ಟರೊಳಗಾಗಿ ಸುಮಾರು ೧೩ ಸಾವಿರ ಎಕರೆ ಜಾಗೀರ್ದಾರ ಕುಟುಂಬಗಳ ಹಲವರಲ್ಲಿ ಹಂಚಿಕೆಯಾಗಿತ್ತು. ಹಾಗೆ ಹಂಚಿಕೆ ಮಾಡಿಕೊಂಡು ಬದುಕುತ್ತಿದ್ದವರಲ್ಲಿ ಕೆಲವರು ಧಾರವಾಡ, ಬೆಳಗಾವಿ, ಪುಣೆ, ಬೆಂಗಳೂರುಗಳಲ್ಲಿ ವಾಸಮಾಡುತ್ತಿದ್ದರು. ಇವರ ಆಸ್ತಿಯನ್ನು ಈ ಮನೆತನದ ಬಂಧುಗಳು ನೋಡಿಕೊಳ್ಳುತ್ತಿದ್ದರು.

೧೮೫೨ರಲ್ಲಿ ಬಾಂಬೆ ಸರ್ಕಾರವು ಸುಮಾರು ೧೩ ಸಾವಿರ ಎಕರೆ ಹೆಬ್ಬಳ್ಳಿ ಜಾಗೀರ ಭೂಮಿ ವಶಪಡಿಸಿಕೊಳ್ಳುವ ಸಂದರ್ಭದಲ್ಲಿ, ಮನೆತನದ ಹಲವರ ಹೆಸರಿನಲ್ಲಿ ಭೂಮಿ ಹಂಚಿಕೆಯಾಗಿತ್ತು. ಈ ಕುರಿತು ಧಾರವಾಡ ತಾಲೂಕು ಕಚೇರಿಯ '೬೪೦ ಡ' ಎನ್ನುವ ಕಡತದಲ್ಲಿ ದಾಖಲಿಸಲಾಗಿದ್ದು, ಕಚೇರಿಯ ಹಳೇ ಕಡತಗಳ ಭಂಡಾರದಲ್ಲಿ ಇದನ್ನು ಕಾಪಾಡಲಾಗಿದೆ. ಇದರ ಅನ್ವಯ ಹೆಬ್ಬಳ್ಳಿ ಜಾಗೀರದಾರ ಮನೆತನದ ವಿವಿಧ ಸದಸ್ಯರಲ್ಲಿ ಹಂಚಿಕೆಯಾಗಿದ್ದ ಭೂಮಿಯ ವಿವರ ಇಂತಿದೆ.

೧. ಶೇಷಗಿರಿರಾವ್ ಮಾಧವರಾವ್ ಜಾಗೀರದಾರ – ೩,೪೬೮೦೦೦ ಎಕರೆ

೨. ಕೃಷ್ಣರಾವ್ ವಿಠಲ್‌ರಾವ್ ಜಾಗೀರದಾರ – ೨,೪೨೪.೩೫ ಎಕರೆ

೩. ಶ್ರೀನಿವಾಸರಾವ್ ಲಕ್ಷ್ಮಣ್ ರಾವ್ ಜಾಗೀರದಾರ – ೭೬೬.೯ ಎಕರೆ

೪. ಲಕ್ಷ್ಮಣ್ ರಾವ್ ನರಸಿಂಗರಾವ್ ಜಾಗೀರದಾರ – ೬೧೧.೩೯ ಎಕರೆ

೫. ದತ್ತೋಬರಾವ್ ಲಕ್ಷ್ಮಣ್ ರಾವ್ ಜಾಗೀರದಾರ – ೪೬೯.೨೨ ಎಕರೆ

೬. ಲಕ್ಷ್ಮೀಬಾಯಿ ಲಕ್ಷ್ಮಣ್ ರಾವ್ ಜಾಗೀರದಾರ – ೩೯೨.೦೦ ಎಕರೆ

೭. ರಘುನಾಥರಾವ್ ಕೃಷ್ಣ ರಾವ್ ಜಾಗೀರದಾರ – ೨೬೦.೧೫ ಎಕರೆ

೮. ಶ್ರೀನಿವಾಸರಾವ್ ಗುರುರಾಯರಾವ್ ಜಾಗೀರದಾರ – ೨೦೨.೦೦ ಎಕರೆ

ಇವರಲ್ಲದೆ ಇನ್ನು ಹಲವು ಜಾಗೀರು ಮನೆತನದ ಸದಸ್ಯರಲ್ಲಿ ಹಂಚಿಕೆಯಾಗಿದ್ದ ಭೂಮಿಯನ್ನು ೧೯೫೨ರಲ್ಲಿ ಬಾಂಬೆ ಸರ್ಕಾರ ವಶಪಡಿಸಿಕೊಂಡಿತು. ಹಾಗೆ ವಶಪಡಿಸಿಕೊಳ್ಳಲು ಪ್ರಮುಖ ಕಾರಣರಾದವರು ಕ್ಷೌರಿಕಜಾತಿಯ ಒಬ್ಬ ಸಾಮಾನ್ಯ ಮನುಷ್ಯ, ಅವರ ಹೆಸರು, ಬಿ.ಎಸ್. ಹೀರೆ. ಇವರು ಮಹಾರಾಷ್ಟ್ರ ಪ್ರಾಂತ್ಯದ ಜಾಗೀರದಾರ ಮನೆತನಗಳ ಆರ್ಥಿಕ ಶಕ್ತಿಯನ್ನು ಸಂಪೂರ್ಣವಾಗಿ ಕುಗ್ಗಲು ಕಾರಣವಾದರು. ಅವರು ಜಾಗೀರದಾರ ಮನೆತನಗಳಿಗೆ ಉಂಟು ಮಾಡಿದ ನಷ್ಟ ಅದ್ಯಾವ ಪರಿ ಇತ್ತೆಂದರೆ, ಐದು ದಶಕಗಳು ಕಳೆದರೂ ನನಗೆ ಮಾಹಿತಿ ನೀಡುತ್ತಿದ್ದ ಜಾಗೀರದಾರ ಮನೆತನದ ಪಾಂಡುರಂಗರಾವ್ ಹೆಬ್ಳೀಕರ್ ಮಾತಿನುದ್ದಕ್ಕೂ ಬಿ.ಎಸ್. ಹೀರೆಯವರನ್ನು ಬಯ್ಯುತ್ತಲೇ ಇದ್ದರು. ಬಿ.ಎಸ್. ಹೀರೆ ಅವರ ಪ್ರಸಂಗ ಸ್ವಾರಸ್ಯಕರವಾಗಿದೆ.

# ೩. ಒಬ್ಬ ಕ್ಷೌರಿಕ ಮತ್ತು ಜಾಗೀರದಾರರು

ಬಿ.ಎಸ್. ಹೀರೆಯವರ ಪೂರ್ಣ ಹೆಸರು ಬಾವು ಸಾಹೇಬ ಹೀರೆ. ಇವರು ಮೂಲತಃ ನಾಸಿಕದ ತ್ರ್ಯಂಬಕೇಶ್ವರ ದೇವಾಲಯದ ಬಳಿ ಕ್ಷೌರಿಕ ವೃತ್ತಿ ಮಾಡುವ ಮನೆತನದವರು. ಸ್ವತಂತ್ರ್ಯ ಹೋರಾಟದ ಸಂದರ್ಭದಲ್ಲಿ (೧೯೪೨ರ ಕ್ವಿಟ್ ಇಂಡಿಯಾ ಚಳುವಳಿ) ಜೈಲುವಾಸ ಅನುಭವಿಸಿದ್ದ ಹೀರೆ, ಆಗಲೇ ಮಹಾರಾಷ್ಟ್ರ ಪ್ರಾಂತ್ಯದಲ್ಲಿ ರಾಜಕೀಯದಲ್ಲಿ ಪ್ರಸಿದ್ಧರಾಗಿದ್ದರು.

ಅದು ೧೯೫೨ರ ಕಾಲ, ಮಹಾರಾಷ್ಟ್ರ, ಅಸೆಂಬ್ಲಿಯ ಪ್ರಥಮ ಚುನಾವಣೆ. ನಾಸಿಕ್ ಕ್ಷೇತ್ರದಿಂದ ಸ್ವತಂತ್ರ್ಯ ಅಭ್ಯಾರ್ಥಿಯಾಗಿ ಸ್ಥಳೀಯ ಜಾಗೀರದಾರರಾದ ಸರ್ದಾರ ವಿಂಚೂರ್ಕರ ಚುನಾವಣಾ ಉಮೇದುದಾರರಾಗಿದ್ದರು. ಇವರ ಎದುರುಗಡೆ ಕಾಂಗ್ರೆಸ್ ಪಕ್ಷದಿಂದ ಬಿ.ಎಸ್. ಹೀರೆ ನಾಮಪತ್ರ ಸಲ್ಲಿಸಿದರು. ರಾಷ್ಟ್ರದಾದ್ಯಂತ ಸ್ವಾತಂತ್ರ್ಯ ಹೋರಾಟದ ನೆನಪು ಇನ್ನೂ ಅಚ್ಚಳಿಯದೆ ಉಳಿದಿತ್ತು. ಅದರಲ್ಲೂ ಕಾಂಗ್ರೆಸ್ ಸ್ವಾತಂತ್ರ್ಯ ಹೋರಾಟದಲ್ಲಿ ಪಕ್ಷವಾಗಿತ್ತು.

ಸ್ವತಂತ್ರ್ಯ ಅಭ್ಯರ್ಥಿಯಾಗಿದ್ದ ಸರ್ದಾರ ವಿಂಚೂರ್ಕರ ಹೆಬ್ಬಳ್ಳಿ ಜಾಗೀರದಾರರ ಬಂಧುಗಳಾಗಿದ್ದರು. ೧೯೫೨ರಲ್ಲಿ ಹೆಬ್ಬಳ್ಳಿ ಜಾಗೀರದಾರರಲ್ಲಿ ಪ್ರಮುಖರಾಗಿದ್ದ ಕೃಷ್ಣರಾವ್ ಅವರಿಗೆ ಮಾವನಾಗಿದ್ದವರು; ಸರ್ದಾರ್ ವಿಂಚೂರ್ಕರ್ ಆಗಲಿ, ಅವರ ಮನೆತನದ ಇತರೆ ಸದಸ್ಯರಾಗಲಿ ಎಂದೂ ಸ್ವಾತಂತ್ರ್ಯಕ್ಕಾಗಿ ಹೋರಾಡಿದವರಲ್ಲ. ಬ್ರಿಟೀಷರ ವಿರುದ್ಧ ಹೋರಾಟಕ್ಕಿಳಿದರೆ ಜಾಗೀರದಾರ ಭೂಮಿಯನ್ನು ಕಳೆದುಕೊಳ್ಳುವ ಭಯ ಇವರಿಗೂ ಇತ್ತು. ಅಲ್ಲದೆ ಬ್ರಿಟೀಷರ ಪರವಾಗಿ ಸ್ವಾತಂತ್ರ್ಯ ಹೋರಾಟಗಾರರನ್ನು ಹಿಡಿದು ಕೊಡುತ್ತಿದ್ದುದಾಗಿ ಸಹ ಹೇಳಲಾಗುತ್ತದೆ. ಈ ಹಿನ್ನಲೆಯಲ್ಲಿ ಸ್ಥಳೀಯ ಜನತೆಯ ವಿಶ್ವಾಸವನ್ನು ಸರ್ದಾರ್ ವಿಂಚೂರ್ಕರ್ ಕಳೆದುಕೊಂಡಿದ್ದರು.

ಇಂತಹ ವಿಂಚೂರ್ಕರ್ ಚುನಾವಣೆಯಲ್ಲಿ ತಮ್ಮ ಎದುರಾಳಿ ಆಗಿದ್ದ ಬಿ.ಎಸ್. ಹೀರೆ ಕುರಿತು ಲಘುವಾಗಿ ಮಾತನಾಡಿದ್ದರು. ಹೆಬ್ಬಳ್ಳಿ ಭೂಹೋರಾಟದ ನಾಯಕರಾದ ಶ್ರೀನೀಲಂಗಯ್ಯ ಪೂಜಾರರ ಪ್ರಕಾರ 'ಕ್ಷೌರಿಕನೊಬ್ಬ ಚುನಾವಣೆಯಲ್ಲಿ ನನ್ನನೇನು ಸೋಲಿಸಿಯಾನು?' ಎಂದು ದರ್ಪದಿಂದ ಹೀಯಾಳಿಸಿದ್ದರು. ವಿಂಚೂರ್ಕರ್ ಅವರಲ್ಲಿದ್ದ ದರ್ಪ ಹಾಗೂ ಸ್ಥಳೀಯರೊಂದಿಗೆ ಅವರಿಗಿದ್ದ ವೈಯಕ್ತಿಕ ಸಂಬಂಧ, ೧೯೫೨ರ ಚುನಾವಣೆಯಲ್ಲಿ ಬಿ.ಎಸ್. ಹೀರೆಯವರ ವಿರುದ್ಧ ಸೋಲುವಂತೆ ಮಾಡಿತು. ಮಹಾರಾಷ್ಟ್ರದ ಪ್ರಥಮ ಸರ್ಕಾರದಲ್ಲಿಯೇ ಬಿ.ಎಸ್. ಹೀರೆ ಅವರು ಮುಖ್ಯಮಂತ್ರಿ ಆಗುವ ಅವಕಾಶ ಒದಗಿಬಂದಿತ್ತು. ಆದರೆ ಆ ಚುನಾವಣೆಯಲ್ಲಿ ಸೋತಿದ್ದರೂ ಮುರಾರ್ಜಿ ದೇಸಾಯಿಯವರನ್ನು ಮಹಾರಾಷ್ಟ್ರದ ಮುಖ್ಯಮಂತ್ರಿಯನ್ನಾಗಿ ಆಯ್ಕೆ ಮಾಡಲಾಯಿತು. ಸರ್ಕಾರದಲ್ಲಿ ಮೊದಲ ಕಂದಾಯ ಸಚಿವರಾಗಿ ಬಿ.ಎಸ್. ಹೀರೆ ಪ್ರಮಾಣ ವಚನ ಸ್ವೀಕರಿಸಿದರು. ಕಂದಾಯ ಸಚಿವರಾಗುತ್ತಿದ್ದ ಕೂಡಲೆ ಬಿ.ಎಸ್.ಹೀರೆ ಮಾಡಿದ ಮೊದಲ ಕೆಲಸವೆಂದರೆ ಮಹಾರಾಷ್ಟ್ರ, ಪ್ರಾಂತ್ಯದ ಎಲ್ಲ ಜಾಗೀರದಾರ್ ಭೂಮಿಯನ್ನು ಸರ್ಕಾರದ ವಶಕ್ಕೆ ತೆಗೆದುಕೊಂಡಿದ್ದು. ಇದೇ ವೇಳೆ ಎದುರಾಳಿಯಾದ ವಿಂಚೂರ್ಕರ್ ಪಾಲಿನ ಜಾಗೀರದಾರ ಭೂಮಿಯನ್ನು ಸರ್ಕಾರದ ವಶಕ್ಕೆ ತೆಗೆದುಕೊಂಡರು. ಹೀಗೆ ವಶಕ್ಕೆ ತೆಗೆದುಕೊಳ್ಳಲು ಇದ್ದ ಅನುಕೂಲವೆಂದರೆ ಈ ಭೂಮಿಯು ರಾಜಕೀಯ ಉಡುಗೊರೆಗಳಾಗಿ ಇನಾಮಿನ ರೂಪದಲ್ಲಿ ಜಾಗೀರದಾರರ ವಶಕ್ಕೆ ಬಂದಿದ್ದವಾಗಿದ್ದವು. ರಾಜಕೀಯ ಇನಾಂ ಭೂಮಿಯು ಕಾನೂನಿನ ಅಡಿಯಲ್ಲಿ ಸ್ವಂತ ಆಸ್ತಿಗಳಾಗಿ ಪರಿಗಣಿತವಾಗುವುದಿಲ್ಲ ಎಂದು ತಿಳಿದಿದ್ದ ಬಿ.ಎಸ್. ಹೀರೆ ಈ ಭೂಮಿಯನ್ನು ವಶಪಡಿಸಿಕೊಳ್ಳುವುದಕ್ಕಾಗಿ ಯಾವುದೇ ವಿನೂತನ ಶಾಸನವನ್ನು ಜಾರಿ ಮಾಡಲಿಲ್ಲ. ಬಾಂಬೆ ಪ್ರಾಂತ್ಯದಲ್ಲಿದ್ದ ಎಲ್ಲ ಜಾಗೀರದಾರ ಭೂಮಿಯನ್ನು ಆಡಳಿತಾತ್ಮಕ ಕ್ರಮಗಳ ಮೂಲಕವೇ ಸರ್ಕಾರದ ವಶಕ್ಕೆ ತೆಗೆದುಕೊಂಡರು. ಹಾಗೆ ಸರ್ಕಾರದ ವಶಕ್ಕೆ ಹೋದ ಜಾಗೀರದಾರ ಭೂಮಿಗಳಲ್ಲಿ ಆಗಿನ ಬಾಂಬೆ ಪ್ರಾಂತ್ಯಕ್ಕೆ ಸೇರಿದ್ದ ಹೆಬ್ಬಳ್ಳಿ ಮತ್ತು ಗಜೇಂದ್ರಗಡದ ಜಾಗೀರು ಭೂಮಿಯೂ ಇತ್ತು.

೧೯೫೨ರ ನವೆಂಬರ್ ೧ರಂದು ಹೆಬ್ಬಳ್ಳಿಯ ಜಾಗೀರದಾರ ಭೂಮಿಯನ್ನು ಮಹಾರಾಷ್ಟ್ರ ಸರ್ಕಾರ ತನ್ನ ವಶಕ್ಕೆ ತೆಗೆದುಕೊಂಡಿತು. ಸರ್ಕಾರಿ ದಾಖಲೆ ಪ್ರಕಾರ ಸರ್ಕಾರಿ ವಶಕ್ಕೆ ಹೋದ ಒಟ್ಟು ಹೆಬ್ಬಳ್ಳಿಯ ಜಾಗೀರದಾರ ಭೂಮಿ ೧೨,೬೫೫.೩೭ ಎಕರೆ. ಹೀಗೆ ಕಳೆದುಕೊಂಡ

ಭೂಮಿಯನ್ನು ಮರಳಿ ಪಡೆಯುವ ಪ್ರಯತ್ನವನ್ನು ಜಾಗೀರದಾರ ಮನೆತನದವರು ತೀವ್ರವಾಗಿ ಪ್ರಯತ್ನಿಸಿದರು. ಈ ಕುರಿತು ಬಿ.ಎಸ್. ಹೀರೆ ಹಾಗೂ ಮುರಾರ್ಜಿ ದೇಸಾಯಿ ಅವರನ್ನು ಅವರು ಹಲವು ಬಾರಿ ಭೇಟಿ ಮಾಡಿ ಚರ್ಚಿಸಿದರು.

ಹೆಬ್ಬಳ್ಳಿ ಜಾಗೀರದಾರರಾದ ಕೃಷ್ಣರಾವ್ ವಿಠಲ್ ರಾವ್, ಶೇಷಗಿರಿ ರಾವ್ ಮಾಧವರಾವ್ ಹಾಗೂ ಗಜೇಂದ್ರಗಡದ ಜಾಗೀರದಾರರಾದ ಮಾಲೋಜಿರಾವ್ ಅವರು ಬಾಂಬೆ ಸರ್ಕಾರದ ಕಂದಾಯ ಸಚಿವರಾಗಿದ್ದ ಬಿ.ಎಸ್. ಹೀರೆಯವರನ್ನು ಭೇಟಿ ಮಾಡಿ (೧೯೫೪, ಏಪ್ರಿಲ್ ೧೯ರಂದು) ಚರ್ಚಿಸಿದರು. ಕಳೆದುಕೊಂಡ ಭೂಮಿಗೆ ಪರಿಹಾರ ಮೊತ್ತ ಕೊಡುವಂತೆ ಬೇಡಿಕೊಂಡರು. ಆದರೆ ಬಿ.ಎಸ್. ಹೀರೆ ಕಾನೂನಿನ ವ್ಯಾಪ್ತಿಯ ಹೊರಗೆ ಯಾವುದೇ ಸಹಾಯ ನೀಡಲು ಸಿದ್ಧರಿರಲಿಲ್ಲ. ಆಗಿನ ಕಾನೂನಿನಂತೆ ಜಾಗೀರದಾರ ಭೂಮಿ ಕಳೆದುಕೊಂಡ ಪ್ರತಿ ಕುಟುಂಬದ ನಿರ್ವಹಣೆಗೆ ೧೧೦ ಎಕರೆ ಭೂಮಿ ನೀಡಲು ಸಿದ್ಧರಿದ್ದರು. ಇದಕ್ಕಿಂತ ಹೆಚ್ಚಿನ ಸಹಾಯ ಸಾಧ್ಯವಿಲ್ಲವೆಂದು ಜಾಗೀರದಾರರನ್ನು ವಾಪಸ್ಸು ಕಳುಹಿಸಿದ್ದರು. ಇದೇ ವೇಳೆ ಹೆಬ್ಬಳ್ಳಿಯ ಕೃಷ್ಣರಾವ್ ವಿಠಲರಾವ್ ಅವರು ಮುರಾರ್ಜಿ ದೇಸಾಯಿಯವರ ಬಳಿ ಹೆಚ್ಚಿನ ಪರಿಹಾರ ನೀಡಲು ವಿನಂತಿಸಿಕೊಂಡರು. ಅದರಲ್ಲೂ ಕೃಷ್ಣರಾವ್, ವಿಠಲರಾವ್ ಮತ್ತು ಮುರಾರ್ಜಿ ದೇಸಾಯಿಯವರು ರಾಯಗಢದಲ್ಲಿ ಒಂದೇ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡಿದ ಸ್ನೇಹಿತರಾಗಿದ್ದರು. ಅಲ್ಲದೇ ಮುರಾರ್ಜಿ ದೇಸಾಯಿಯವರು ಜಾಗೀರದಾರ್ ಮನೆತನಗಳ ಬಗ್ಗೆ ಹೆಚ್ಚು ಉದಾರಿಗಳಾಗಿದ್ದರು. ಈ ಹಿನ್ನೆಲೆಯಲ್ಲಿ ಅವರು ಭೂಮಿ ಕಳೆದುಕೊಂಡ ಹೆಬ್ಬಳ್ಳಿ ಜಾಗೀರದಾರರಿಗೆ ತಲಾ ೭೦೦ ಎಕರೆ ಭೂಮಿಯನ್ನು ಮರಳಿ ಕೊಟ್ಟರು. ಅಲ್ಲದೆ ಹೆಬ್ಬಳ್ಳಿಯ ವೆಂಕಟೇಶ ದೇವಾಲಯದ ಉಸ್ತುವಾರಿ ನೋಡಿಕೊಳ್ಳಲೆಂದು ಇದ್ದ ೪೫೦ ಎಕರೆ ಇನಾಂ ಭೂಮಿಯನ್ನು ಬಿಟ್ಟುಕೊಟ್ಟರು. ಅಧಿಕೃತವಾಗಿ ಈ ಸಂದರ್ಭದಲ್ಲಿ ಜಾಗೀರದಾರರಿಗೆ ಮರಳಿ ಬಂದ ಒಟ್ಟು ಭೂಮಿ ೩ ಸಾವಿರ ಎಕರೆ. ಈ ಬಗ್ಗೆ ಪ್ರಶ್ನೆ ಮಾಡಿದವರೆಂದರೆ ಬಿ.ಎಸ್. ಹೀರೆಯೊಬ್ಬರು ಮಾತ್ರ. ಉಳಿದಂತೆ ಅಂದು ಪ್ರಮುಖ ವಿರೋಧ ಪಕ್ಷಗಳಾಗಲಿ ಪ್ರಭಾವಿ ಸಮೂಹ ಮಾಧ್ಯಮಗಳಾಗಲಿ ಇರದಿದ್ದರಿಂದ, ಇದ್ದರೂ ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸದಿದ್ದರಿಂದ ಮುರಾರ್ಜಿ ದೇಸಾಯಿಯವರ ಕ್ರಮಕ್ಕೆ ಯಾರೂ ಅಡ್ಡಿ ಉಂಟು ಮಾಡಲಿಲ್ಲ.

ಇಷ್ಟಾಗುವ ಹೊತ್ತಿಗಾಗಲೇ ಜಾಗೀರದಾರ ಮನೆತನದವರು ತೀವ್ರವಾಗಿ ಹತಾಶಗೊಂಡಿದ್ದರು. ತಮ್ಮ ವ್ಯಾಪ್ತಿಯಲ್ಲಿದ್ದ ಸಾವಿರಾರು ಎಕರೆ ಕೈತಪ್ಪಿ ಹೋಗಿದ್ದರಿಂದ ಮಾನಸಿಕವಾಗಿ ಕುಗ್ಗಿ ಹೋದರು. ಕೃಷ್ಣರಾವ್ ವಿಠಲರಾವ್ ಅವರು ಆಧ್ಯಾತ್ಮದೆಡೆಗೆ ಹೆಚ್ಚಿನ ಒಲವು ತೋರಿದರೆ, ಶೇಷಗಿರಿರಾವ್ ಮಾಧವ್‌ರಾವ್ ಅವರು ಕೊನೆಯ ದಿನದ ತನಕವೂ ಬಿ.ಎಸ್. ಹೀರೆಯವರನ್ನೂ ಮಹಾರಾಷ್ಟ್ರ ಸರ್ಕಾರವನ್ನು ಬೈಯುತ್ತಾ ಕಳೆದರು.

ಈ ಹೊತ್ತಿಗಾಗಲೇ ಸ್ಥಳೀಯ ರೈತರು ಜಾಗೀರದಾರರಿಗೆ ಮೊದಲಿನಂತೆ ಹೆದರುವುದನ್ನು ಕಡಿಮೆ ಮಾಡಿದ್ದರು. ಹಲವಾರು ವರ್ಷಗಳಿಂದ ಜಾಗೀರ ಭೂಮಿಯನ್ನು ಉಳುತ್ತಿದ್ದ ರೈತರಿಗೆ ಭೂ ಸುಧಾರಣಾ ಕಾಯ್ದೆಗಳು ಆತ್ಮವಿಶ್ವಾಸವನ್ನು, ಧೈರ್ಯವನ್ನು ತಂದುಕೊಟ್ಟಿದ್ದವು. ಅದರಲ್ಲೂ ಬಾಂಬೆ ಪ್ರಾಂತ್ಯದಲ್ಲಿದ್ದ ಗೇಣಿ ಕಾನೂನುಗಳು ಉಳುವವರ ಪರವಾಗಿದ್ದವು. 'ಬಾಂಬೆ ಗೇಣಿ ಕಾನೂನು ೧೯೩೯' ಕಾಯ್ದೆಯನ್ನು ತಿದ್ದುಪಡಿ ಮಾಡಿ ೧೯೪೮ರಲ್ಲಿ ಜಾರಿಗೆ ತರಲಾಯಿತು. ಇದರ ಪ್ರಕಾರ ನಿಗದಿತ ಮೊತ್ತವನ್ನು ಪ್ರತಿವರ್ಷ ಗೇಣಿದಾರ ಭೂಮಾಲಕನಿಗೆ ಕೊಡಬೇಕು, ಭೂಮಾಲಿಕ ಬೇಕಾದ ಹಾಗೆ ಗೇಣಿ ಹೆಚ್ಚಿಸುವಂತಿಲ್ಲ. ಗೇಣಿದಾರರನ್ನು ಒಕ್ಕಲೆಬ್ಬಿಸುವಂತಿಲ್ಲ. ಭೂಮಾಲಿಕ ವ್ಯವಸಾಯೇತರ ಉದ್ದೇಶಗಳಿಗಾಗಿ ಜಮೀನನ್ನು ಗೇಣೀದಾರನಿಗೇ ಮಾರಬೇಕು' ಮುಂತಾದ ಪ್ರಮುಖ ಕಾನೂನುಗಳು ಉಳುವ ರೈತರಿಗೆ ಅನುಕೂಲಕರವಾಗಿದ್ದವು. ಈ ಹಿನ್ನೆಲೆಯಲ್ಲಿ ಆರ್ಥಿಕವಾಗಿ ಸ್ವಾವಲಂಬಿಗಳಾಗಲು ಬಯಸಿದ ಸ್ಥಳೀಯ ರೈತರು ಜಾಗೀರದಾರರಿಂದ ಬಿಡುಗಡೆಗೆ ಹಂಬಲಿಸುತ್ತಿದ್ದರು. ಅಲ್ಲದೆ ಸ್ಥಳೀಯ ರೈತರು ಭೂಸುಧಾರಣಾ ಕಾಯ್ದೆ ಅನ್ವಯ ಲಾವಣಿಯ ಆರು ಪಟ್ಟು ಹಣ ಸರ್ಕಾರಕ್ಕೆ ಪಾವತಿಸಿ ಉಳುವ ಭೂಮಿಯನ್ನು ಸ್ವಂತದ್ದನ್ನಾಗಿಸಿಕೊಳ್ಳಲು ಬಯಸಿದ್ದರು.

ಇದೇ ಸಂದರ್ಭದಲ್ಲಿ ಕರ್ನಾಟಕ ಭಾಗದಲ್ಲಿ ಕಾಂಗ್ರೆಸ್ ಕಿಸಾನ್ ವಿಭಾಗದ ಸಂಘಟಕರಾಗಿ ಸರ್ದಾರ್ ವೀರನಗೌಡ ಪಾಟೀಲರನ್ನು ಕಾಂಗ್ರೆಸ್ ಪಕ್ಷ ನೇಮಿಸಿತ್ತು. ಮೂಲತಃ ಧಾರವಾಡ ಭಾಗದವರಾಗಿದ್ದ ಇವರು ಹೆಬ್ಬಳ್ಳಿಯ ರೈತರನ್ನು ಸಂಘಟಿಸಿದರು. ಗಾಂಧೀ

ಅನುಯಾಯಿಗಳಾಗಿದ್ದ ಸರ್ದಾರ್ ವೀರನಗೌಡ್ರು ಹರಿಜನ ಸೇವಾಶ್ರಮದ ಮೂಲಕ ಸಾರ್ವಜನಿಕ ಸೇವೆ ಸಲ್ಲಿಸುತ್ತಿದ್ದರು. ಇವರು ಹೆಬ್ಬಳ್ಳಿಯ ರೈತರ ಪರವಾಗಿ ಮಹಾರಾಷ್ಟ್ರ ಸರ್ಕಾರದಲ್ಲಿ ಪ್ರಭಾವ ಬೀರುತ್ತಿದ್ದರು. ಹೆಬ್ಬಳ್ಳಿಯಲ್ಲಿ ಮಳೆ ಇಲ್ಲದೆ ಇಳುವರಿ ಕಡಿಮೆಯಾಗಿದೆ ಎಂದು ಹೇಳಿ, ಕಂದಾಯವನ್ನು ಕಡಿಮೆ ನಿಗದಿ ಮಾಡುವಂತೆ ಅವರು ಸರ್ಕಾರದ ಮೇಲೆ ಒತ್ತಡ ಹೇರಿದ್ದರು. ಈ ಸಂದರ್ಭದಲ್ಲೆಲ್ಲಾ ಜಾಗೀರದಾರ ಮನೆತನದವರು ಮುರಾರ್ಜಿ ದೇಸಾಯಿಯವರ ಬಳಿ ಹೋಗಿ ಮತ್ತೆ ಕಂದಾಯ ನಿಗದಿಯನ್ನು ಹೆಚ್ಚಿಸಿಕೊಂಡು ಬರುತ್ತಿದ್ದರು. ಹೀಗೆ ಕಂದಾಯ ನಿಗದಿಪಡಿಸುವ ಸಂಬಂಧವಾಗಿ ಸರ್ದಾರ ವೀರನಗೌಡ್ರು, ಸ್ಥಳೀಯ ರೈತರಿಂದ ಸಾಕಸ್ಟು ಹಣವನ್ನು ವಸೂಲಿ ಮಾಡುತ್ತಿದ್ದರೆಂದೂ, ಅದನ್ನು ವೈಯಕ್ತಕಿಕವಾಗಿಯೂ ಬಳಸಿಕೊಳ್ಳುತ್ತಿದ್ದರೆಂದೂ ನೀಲಗಂಗಯ್ಯ ಪೂಜಾರರು ತಿಳಿಸಿದರು.

೧೯೫೧-೫೨ರ ಸುಮಾರಿನ ಹೆಬ್ಬಳ್ಳಿಯಲ್ಲಿದ್ದ ಒಟ್ಟು ಜನಸಂಖ್ಯೆಯಲ್ಲಿ (೫೦೭೮) ೬೦೦ಕ್ಕಿಂತ ಹೆಚ್ಚು ಕುಟುಂಬಗಳು ಕೃಷಿಯನ್ನೇ ನಂಬಿ ಬದುಕುತ್ತಿದ್ದವು. ಇದರಲ್ಲಿ ಕೃಷಿಕರು, ರೈತ ಕೂಲಿ ಕಾರ್ಮಿಕರೂ ಇದ್ದರು. ಈ ಜನರನ್ನು ಅಂದಿನ ಧಾರವಾಡ ಜಿಲ್ಲಾ ಕಲೆಕ್ಟರ್ ಆಗಿದ್ದ ಆರ್.ಜಿ.ರೆಬೆಲ್ಲೋ ಖುದ್ದಾಗಿ ಭೇಟಿ ಮಾಡಿ ಚರ್ಚಿಸಿದರು. ಇದೇ ವೇಳೆ ಸರ್ಕಾರದ ನಿಯಮದಂತೆ ಉಳುತ್ತಿರುವ ರೈತನಿಗೆ ೪೮ ಭೂಮಿಯನ್ನು ಮಂಜೂರು ಮಾಡುವ ಕುರಿತು ಭರವಸೆಯನ್ನು ನೀಡಿದರು. ಅಲ್ಲದೆ ಹೆಚ್ಚುವರಿ ಭೂಮಿಯನ್ನು ಕೂಲಿಕಾರ್ಮಿಕರಿಗೆ ಕೊಡಿಸುವುದಾಗಿ ಭರವಸೆ ಇತ್ತರು. ಈ ಕುರಿತು ಧಾರವಾಡ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ದಾಖಲಾತಿ ಇದೆ.

ಬಿ.ಎಸ್. ಹೀರೆಯವರು ಜಾಗೀರುದಾರರ ಜಮೀನನ್ನು ೧೯೫೨ರಲ್ಲಿ ಸರ್ಕಾರದ ವಶಕ್ಕೆ ತೆಗೆದುಕೊಂಡರೂ ಭೂಮಿ ಉಳುವ ರೈತರಿಗೆ, ಕೂಲಿ ಕಾರ್ಮಿಕರಿಗೆ ಸ್ವಂತದ್ದಾಗಿ ಮಾಡಿಕೊಳ್ಳಲು ಮತ್ತೊಂದು ಹೋರಾಟವೇ ಬೇಕಾಯಿತು. ಈ ಹೋರಾಟವನ್ನು ಬಡ ರೈತ ಕೂಲಿಕಾರ್ಮಿಕರು ಕೈಗೊಂಡರು. ಈ ಹೋರಾಟದ ನೇತೃತ್ವ ವಹಿಸಿದವರು. ಶ್ರೀ ನೀಲಗಂಗಯ್ಯ ಪೂಜಾರ ಮತ್ತು ಜಿ.ಪಿ. ಪದಕಿ ಎಂಬ ಸಮಾಜವಾದಿ ಪಕ್ಷದ ಮುಖಂಡರು. ಇದು ನಡೆದಿದ್ದು ೧೯೫೮ ಮೇ ತಿಂಗಳಲ್ಲಿ. ೧೯೫೨ ರಿಂದ ೧೯೫೮ರ ಹೋರಾಟದ ದಿನಗಳವರೆಗೆ ನಡೆದ ಭೂವ್ಯಾಜ್ಯಗಳು, ಭೂಸಂಬಂಧಿ ಆಡಳಿತ ಕ್ರಮಗಳು ಹೆಬ್ಬಳ್ಳಿ ರೈತರನ್ನು ಹಾಗೂ ಸಮಾಜವಾದಿ ಮುಖಂಡರನ್ನು ಆಕ್ರೋಶಕ್ಕೀಡು ಮಾಡಿದ್ದವು.

## ೪. ೧೯೫೨ರಿಂದ ೧೯೫೮

೧೯೫೨ರಿಂದ ೧೯೫೮ರ ಅವಧಿಯು ಧಾರವಾಡ ಜಿಲ್ಲೆಯ ರೈತರಿಗೆ ಭೂಮಾಲಿಕರಿಗೆ, ಸಂಘರ್ಷದ ಕಾಲ. ಇದೇ ವೇಳೆಯಲ್ಲಿ ಪ್ರವರ್ಧಮಾನಕ್ಕೆ ಬಂದ ವಿನೋಭಾ ಭಾವೆಯರ ಭೂದಾನ ಚಳುವಳಿ, ಕರ್ನಾಟಕದ ಏಕೀಕರಣ, ಭೂಮಾಲಿಕ ಸಂಘಗಳ ಚಟುವಟಿಕೆಗಳು ಹಾಗೂ ಜತ್ತಿ ಸಮಿತಿಯ ಶಿಫಾರಸ್ಸುಗಳು ಒಟ್ಟಾರೆ ಈ ಭಾಗದ ರೈತರ ಜೀವನದಲ್ಲಿ ಮಹತ್ತರ ಪರಿಣಾಮಗಳನ್ನು ಬೀರಿದವು. ಏಕೀಕರಣದಿಂದಾಗಿ ಮುಂಬೈಯೊಂದಿಗೆ ಇದ್ದ ಭೂಸಂಬಂಧಗಳು ಬೆಂಗಳೂರಿಗೆ ವರ್ಗಾವಣೆಗೊಂಡವು.

ಕರ್ನಾಟಕದ ಏಕೀಕರಣಗೊಳ್ಳುವುದಕ್ಕಿಂತ ಸುಮಾರು ೨ ತಿಂಗಳು ಮೊದಲು, ಅಂದರೆ ಆಗಸ್ಟ್ ೨೫ ರಂದು, ಧಾರವಾಡ ಜಿಲ್ಲಾ ಕಲೆಕ್ಟರ್ ಆದ ಡಿ.ಡಿ. ಸಾಠೆ ಹೆಬ್ಬಳ್ಳಿಗೆ ಭೇಟಿ ಕೊಟ್ಟರು. ಅಲ್ಲದೆ ಸ್ಥಳೀಯ ರೈತರನ್ನು, ಕೂಲಿ ಕಾರ್ಮಿಕರನ್ನು ಭೇಟಿ ಮಾಡಿ ಜಾಗೀರದಾರ್ ಭೂಮಿಯ ಕುರಿತು ಚರ್ಚೆ ಮಾಡಿದರು. ಹಾಗೆ ಚರ್ಚಿಸಿದ ಬಳಿಕ ಡಿ.ಡಿ. ಸಾಠೆಯವರು ಸರ್ಕಾರಕ್ಕೆ ಈ ಬಗ್ಗೆ ಟಿಪ್ಪಣಿ ಬರೆದು ಕಳಿಸಿದರು. ಈ ಟಿಪ್ಪಣಿಯು ಧಾರವಾಡ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಈಗಲೂ ಇದೆ. ಇದರಲ್ಲಿ ಮುಖ್ಯವಾಗಿ ೫ ಅಂಶಗಳ ಪ್ರಸ್ತಾಪವಿದೆ. ಅವುಗಳೆಂದರೆ-

೧. ೧೯೫೨ರಲ್ಲಿ ಜಾಗೀರದಾರರಿಂದ ವಶಪಡಿಸಿಕೊಂಡ ಭೂಮಿಯಲ್ಲಿ ಕೆಲವು ಜಮೀನುಗಳನ್ನು ಮರಳಿ ಕೊಡುವ ಭರವಸೆಯನ್ನು ಸರ್ಕಾರವು ಕೊಟ್ಟಿದೆ. ಅದರಂತೆ ಈಗ ಸರ್ಕಾರಿ ಆದೇಶವಾಗಿದ್ದು, ಈ ಸವಲತ್ತು ರೈತರಿಗೆ ಸಿಗಲಾರದು. (The collector explained to the ryots that the saranjamdar were originally the holders of these lands and their lands were resumed under the

saranjam resumption rules, they were promised relief from the date.when they were deprivedof their lands. In view ofthis position, the royts, were informed that the retrosospective.effect from Ist November 1952,and that it was not possible to extend the same benifits to them (ryots) also. In any case this matter will have be dicided by Government)

೧. ರೈತರು ಸರ್ಕಾರಕ್ಕೆ ತಾವು ಸಾಗುವಳಿ ಮಾಡಿದ ಜಮೀನುಗಳ ೧೯೫೪-೫೫ನೇ ಸಾಲಿನ ಹಾಗೂ ೧೯೫೫-೫೬ನೇ ಸಾಲಿನ ಲಾವಣಿ ಹಣ ಕೊಡುವುದು ಬಾಕಿ ಇದ್ದು, ಅದನ್ನು ಪಾವತಿಸಬೇಕು. ಅಲ್ಲದೆ ಜಮೀನುಗಳ ಲಾವಣಿಯ ಆರುಪಟ್ಟು ಹಣ ಪಾವತಿಸಿ ಭೂಮಿಯನ್ನು ಸ್ವಂತದ್ದನ್ನಾಗಿಸಿಕೊಳ್ಳಬಹುದು ಎಂದು ರೈತರಿಗೆ ಮನವರಿಕೆ ಮಾಡಿಕೊಡಲಾಗಿದೆ. ಅಲ್ಲದೆ ಯಾವ ರೈತರಿಗೆ ಲಾವಣಿ ಹಣ ಹಾಗೂ ಭೂಮಿ ಸ್ವಂತದ್ದನ್ನಾಗಿಸಿಕೊಳ್ಳಲು ಆರ್ಥಿಕ ಶಕ್ತಿ ಇಲ್ಲವೋ ಅವರಿಗೆ ಸಹಾಯ ಮಾಡಲು ಸಹಕಾರಿ ಸಂಘಗಳಿಗೆ ಶಿಫಾರಸ್ಸು ಮಾಡಲಾಗುವುದು. ಈ ಸಹಕಾರಿ ಸಂಘಗಳು ಕೊಟ್ಟ ಸಾಲವನ್ನು ನಿಗದಿತ ಕಂತುಗಳಲ್ಲಿ ವಾಪಸ್ಸು ಮಾಡುವ ಕರಾರಿಗೆ ಒಳಪಟ್ಟು ಹಣವನ್ನು ಪಡೆಯಬಹುದಾಗಿದೆ.

೩. ಜಾಗೀರು ಭೂಮಿಯನ್ನು ಸಾಗುವಳಿ ಮಾಡುತ್ತಿರುವ ರೈತರು ತಮ್ಮ ಕುಟುಂಬದ ಪ್ರತಿಯೊಬ್ಬರ ಹೆಸರಿನಲ್ಲಿ ಭೂಮಿಯನ್ನು ಸ್ವಂತದ್ದನ್ನಾಗಿಸಿಕೊಳ್ಳುವ ಪ್ರಯತ್ನ ಮಾಡಿದ್ದು, ಇದನ್ನು ಖಂಡಿಸಲಾಗುವುದು. ಅಲ್ಲದೆ, ಸರ್ಕಾರದ ನಿಯಮದಂತೆ ಒಂದು ಕುಟುಂಬದಲ್ಲಿ ಕನಿಷ್ಠ ೧೬ ಎಕರೆಯಿಂದ ಗರಿಷ್ಠ ೪೮ ಎಕರೆ ಕಂಡುಬಂದಲ್ಲಿ ಹಾಗೂ ಸಾಕ್ಷಿಸಮೇತ ಖಾತ್ರಿ ಮಾಡಿದಲ್ಲಿ, ಅಂತಹ ಹೆಚ್ಚುವರಿ ಭೂಮಿಯನ್ನು ವಶಪಡಿಸಿಕೊಂಡು ಭೂರಹಿತ ರೈತ ಕೂಲಿಕಾರ್ಮಿಕರಿಗೆ ಹಂಚಲಾಗುವುದು.

೪. ರೈತರಿಗೆ ಹಂಚಿ ಉಳಿದ ಹೆಚ್ಚುವರಿ ಭೂಮಿಯನ್ನು ಭೂರಹಿತ ರೈತ ಕೂಲಿಕಾರ್ಮಿಕರಿಗೆ ಮುಂದಿನ ಸೂಚನೆಯಂತೆ ಕೊಡಲಾಗುವುದು.

ಎ. ರೈತ ಕೂಲಿಕಾರ್ಮಿಕರು ಒಕ್ಕಲುತನ ಸಹಕಾರಿ ಸಂಘಗಳನ್ನು ಸ್ಥಾಪಿಸಿಕೊಂಡು ಹೆಚ್ಚುವರಿ ಭೂಮಿಯನ್ನು ಸಂಘದ ಸಹಾಯದಿಂದ ಸಾಮೂಹಿಕವಾಗಿ ಸಾಗುವಳಿ ಮಾಡತಕ್ಕದ್ದು.

ಬಿ. ಹೆಚ್ಚುವರಿ ಭೂಮಿಯಲ್ಲಿ ಬೇರೊಂದು ಊರನ್ನು ನಿರ್ಮಿಸುವ ವಿಚಾರವಿದ್ದು, ಅಲ್ಲಿಯೂ ವಾಸವಾಗಿ ಸಾಗುವಳೀ ಮಾಡಬಹುದು. (It is possible that about 2000 to 2500 acres of land will remain as surplus. The land less agriculturists were informed that this surplus are will be given to then, if they agree to form a tentat farming Society and cultivate. These Lands on a co-operative basis. They are further informed that it is proposed to establish a separate Housing coloney out side the present Gouthana, where in these Landless agriculturists cultivating the surplus area. an a co-operative basis will be housed, without distinction as to castes or creeds giving preference to Harijans and other B.C.persons. The landless agriculturists agreed to this arrengements.)

೫. ಶ್ರೀ ವೆಂಕಟೇಶ್ವರ ಮತ್ತು ಶ್ರೀ ಪಾಂಡುರಂಗ ದೇವಸ್ಥಾನಗಳಿಗೆ ಕೆಲವೊಂದು ಜಮೀನುಗಳನ್ನು ಹಿಂದಿನಿಂದಲೇ ದೇವಸ್ಥಾನದ ಇನಾಂ ಹಾಕಿಕೊಟ್ಟಿದ್ದಾರೆ. ಅದರಂತೆ ಮಹತ್ವವಿರುವ ಇನ್ನುಳಿದ ದೇವಸ್ಥಾನಗಳ ಉಸ್ತುವಾರಿಗೆ ಭೂಮಿ ಕೊಡುವ ಕುರಿತು ಕೆಲವು ದೂರುಗಳು ಬಂದಿದ್ದು, ಈ ಕುರಿತು ಯೋಗ್ಯ ನಿರ್ಣಯ ಕೈಗೊಳ್ಳಲಾಗುವುದು. ಈ ಟಿಪ್ಪಣಿಯ ಪ್ರತಿಯನ್ನು ಧಾರವಾಡ ತಾಲೂಕು ಮಾಮಲೇದಾರರಿಗೆ ಹಾಗೂ ಅಸಿಸ್ಟೆಂಟ್ ಕಲೆಕ್ಟರ್ ಅವರಿಗೆ ಜಿಲ್ಲಾ ಕಲೆಕ್ಟರ್ ಆದ ಡಿ.ಡಿ. ಸಾಠೆ ಹೆಬ್ಬಳ್ಳಿಗೆ ಭೇಟಿಕೊಟ್ಟ ದಿನವೇ ಬರೆದು ಕಳುಹಿಸಿದ್ದಾರೆ. ಆದರೆ ಇವುಗಳಲ್ಲಿ ಕೆಲವು ಅಂಶಗಳು ವಾಸ್ತವದಲ್ಲಿ ಜಾರಿಗೆ ಬರಲೇ ಇಲ್ಲ. ಇನ್ನು ಕೆಲವನ್ನು ರೈತರೇ ವಿರೋಧಿಸಿದ್ದರು.

ಆರ್ಥಿಕವಾಗಿ ದುರ್ಬಲವಾಗಿರುವ ರೈತರಿಗೆ ಸಹಕಾರಿ ಸಂಘಗಳು ಧನಸಹಾಯ ಮಾಡುವಂತೆ ಶಿಫಾರಸ್ಸು ಮಾಡಾವುದಾಗಿ ತಿಳಿಸಿದ್ದ ಜಿಲ್ಲಾಧಿಕಾರಿ ಡಿ.ಡಿ. ಸಾಠೆ, ಯಾವುದೇ ಸಂಘಗಳಿಗೂ ಶಿಫಾರಸ್ಸು ಮಾಡಲಿಲ್ಲ. ಅಲ್ಲದೆ ಬಡ ರೈತರನ್ನು ನಂಬಿ ಯಾವುದೇ ಸಹಕಾರಿ

ಸಂಘಗಳು ಹಣವನ್ನು ಕೊಡುವ ಸ್ಥಿತಿಯಲ್ಲಿ ಇರಲಿಲ್ಲ. ಮುಖ್ಯವಾಗಿ ಸಹಕಾರಿ ಸಂಘಗಳಿಗೆ ಒತ್ತೆ ಇಡಲು ರೈತರಲ್ಲಿ ಏನೂ ಇರಲಿಲ್ಲ. ಅವರು ಉಳುತ್ತಿದ್ದ ಭೂಮಿಯೂ ಅಧಿಕೃತವಾಗಿ ರೈತರ ಹೆಸರಿನಲ್ಲಿ ಇರಲಿಲ್ಲ. ಈ ಹಿನ್ನೆಲೆಯಲ್ಲಿ ಯಾವುದೇ ಜಾಮೀನು ಇಲ್ಲದೇ ಧನಸಹಾಯ ನೀಡಲು ಸಹಕಾರಿ ಸಂಘಗಳು ಮುಂದೆ ಬರಲಿಲ್ಲ. ಅಲ್ಲದೆ ಈ ಬಗ್ಗೆ ಹಲವು ಬಾರಿ ಜಿಲ್ಲಾಧಿಕಾರಿಗಳನ್ನು ಕಾಣುವ ಪ್ರಯತ್ನವನ್ನು ರೈತರು ಮಾಡಿದರು. ಈ ಬಗ್ಗೆ ಸ್ಥಳೀಯ ಸಮಾಜವಾದಿ ಮುಖಂಡರಾದ ಜಿ.ಟಿ. ಪದಕಿ ವಕೀಲರು ಹೆಬ್ಬಳ್ಳಿ ರೈತರನ್ನು ಒಗ್ಗೂಡಿಸಿ ಜಿಲ್ಲಾಧಿಕಾರಿಗಳನ್ನು ಭೇಟಿ ಮಾಡಿ ೧೯೫೬ ಅಕ್ಟೋಬರ್ ನಲ್ಲಿ ಮನವಿ ಪತ್ರ ಸಲ್ಲಿಸಿದರು. ಇದಕ್ಕೂ ಯಾವುದೇ ಪೂರಕ ಪ್ರತಿಕ್ರಿಯೆ ವ್ಯಕ್ತವಾಗಲಿಲ್ಲ.

ಇಷ್ಟು ಹೊತ್ತಿಗಾಗಲೇ ಧಾರವಾಡ ಜಿಲ್ಲೆಯು ಮೈಸೂರು ರಾಜ್ಯಕ್ಕೆ ಸೇರುವ ಸ್ಪಷ್ಟ ಸೂಚನೆಗಳು ಕಂಡುಬಂದಿದ್ದವು. ಈ ಹಿನ್ನೆಲೆಯಲ್ಲಿ ಮಹಾರಾಷ್ಟ್ರ ಸರ್ಕಾರದ ಕಾನೂನುಗಳು ಹಾಗೂ ಮೈಸೂರು ರಾಜ್ಯದ ಕಾನೂನುಗಳ ವ್ಯತ್ಯಾಸವು ಆಡಳಿತಾತ್ಮಕವಾಗಿ ಅಡ್ಡಿ ಉಂಟು ಮಾಡಿದ್ದವು. ಅಲ್ಲದೆ ಮಹಾರಾಷ್ಟ್ರ ಸರ್ಕಾರದ ಭೂಸುಧಾರಣಾ ಕಾಯ್ದೆಗಳು ಗೇಣಿದಾರರ ಪರವಾಗಿದ್ದವು. ಆದರೆ ಮೈಸೂರು ರಾಜ್ಯದ ಭೂಸುಧಾರಣಾ ಕಾಯ್ದೆಗಳು ಭೂ ಮಾಲಿಕರ ಪರವಾಗಿದ್ದವು. ಅಲ್ಲದೆ ಮುಂಬೈ ಕರ್ನಾಟಕದ ಸಹಕಾರಿ ಸಂಘಗಳು ಮೈಸೂರು ರಾಜ್ಯಕ್ಕೆ ವಿಲೀನವಾಗುವ ಸಂದರ್ಭಕ್ಕೆ ಆಡಳಿತಾತ್ಮಕವಾಗಿ ಸಿದ್ಧಗೊಳ್ಳುತ್ತಿದ್ದವು. ಹೀಗಾಗಿ ಸಹಕಾರಿ ಸಂಘಗಳು ಹೆಬ್ಬಳ್ಳಿ ರೈತರ ಅಗತ್ಯಕ್ಕೆ ಬೇಕಾದಾಗ ಸಾಲ ನೀಡುವಲ್ಲಿ ವಿಫಲವಾದವು.

ಡಿ.ಡಿ. ಸಾಠೆಯವರ ಟಿಪ್ಪಣಿಯಲ್ಲಿನ ಮೂರನೇ ಅಂಶದಲ್ಲಿ ನಮೂದಿಸಿರುವಂತೆ ಕೆಲವರು ಕುಟುಂಬದ ಪ್ರತಿಯೊಬ್ಬ ಸದಸ್ಯರ ಹೆಸರಿನಲ್ಲಿಯೂ ಗರಿಷ್ಟ ಮಟ್ಟದ ಭೂಮಿಯನ್ನು (೪೮ ಎಕರೆ) ದಾಖಲಿಸಿದ್ದಾರೆ. ಹೀಗೆ ಮಾಡುವಾಗ ಒಂದೇ ಕುಟುಂಬದ ಸದಸ್ಯರು ಪ್ರತ್ಯೇಕ ಕುಟುಂಬಗಳೆನ್ನುವಂತೆ ದಾಖಲೆ ಸೃಷ್ಟಿಸಿದ್ದಾರೆ. ಹೆಬ್ಬಳ್ಳಿಯ ಬಸಪ್ಪನಾಯ್ಕರ್ ಎಂಬ ವ್ಯಕ್ತಿಯೊಬ್ಬರು ೬೬ ಎಕರೆ ಭೂಮಿ ಉಳುತ್ತಿದ್ದರು. ಕುಟುಂಬದ ನಿರ್ವಹಣೆಗೆ ಗರಿಷ್ಟ ೪೮ ಎಕರೆ ಭೂಮಿಯನ್ನು ನಿಗದಿಪಡಿಸುತ್ತಿದ್ದಂತೆ ತನ್ನ ಹೆಚ್ಚುವರಿ ೧೮ ಎಕರೆಯನ್ನು ಮಗ ಶಾಂತಪ್ಪ ನಾಯ್ಕರ್ ಹೆಸರಿನಲ್ಲಿ ನಮೂದಿಸಿ, ಇವರದು ಪ್ರತ್ಯೇಕ ಕುಟುಂಬ ಎನ್ನುವಂತೆ ದಾಖಲೆ ಸೃಷ್ಟಿಸಿದ್ದರು. ಅಲ್ಲದೆ ವೆಂಕಟರಾವ್ ಗಣಪತರಾವ್ ಹೆಸರಿನಲ್ಲಿ ೩೭ ಎಕರೆ, ಕೃಷ್ಣರಾವ್ ಗಣಪತರಾವ್ ೫೮ ಎಕರೆ, ಮಾಧವ್‌ರಾವ್ ಗಣಪತರಾವ್ ೩೬ ಎಕರೆ, ಹಣಮಂತರಾವ್ ಗಣಪತರಾವ್ ೫೨ ಎಕರೆ ಭೂಮಿಯನ್ನು ಹೊಂದಿದ್ದರು. ಅಲ್ಲದೆ ಶ್ರೀನಿವಾಸರಾವ್ ಲಕ್ಷಣರಾವ್ ೭೬೬.೯ ಎಕರೆ, ಲಕ್ಷ್ಮೀಬಾಯಿ ಲಕ್ಷ್ಮಣ್ ರಾವ್ ೩೯೨ ಎಕರೆ, ಕೃಷ್ಣರಾವ್ ಲಕ್ಷ್ಮಣ್ ರಾವ್ ೧೩೫ ಎಕರೆ, ದತ್ತೋಬರಾವ್ ಲಕ್ಷ್ಮಣ್ ರಾವ್ ೪೬೯.೨೨ಎಕರೆ ಭೂಮಿಯನ್ನು ಹೊಂದಿದ್ದರು. ಮೂಲತಃ ಇವರೆಲ್ಲ ಗಣಪತಿರಾವ್, ಲಕ್ಷ್ಮಣ್ ರಾವ್ ಎಂಬ ಕುಟುಂಬಗಳ ಇತರ ಸದಸ್ಯರು. ಇದು ಸ್ಥಳೀಯ ರೈತರಿಗೆ ತಿಳಿದಿದ್ದರೂ ಅಗತ್ಯ ದಾಖಲೆಗಳನ್ನು ಸಂಗ್ರಹಿಸುವುದಾಗಲೀ, ಸರ್ಕಾರಕ್ಕೆ ಆದ ಅನ್ಯಾಯ ಮನವರಿಕೆ ಮಾಡುವ ಶಕ್ತಿಯಾಗಲಿ ಇರಲಿಲ್ಲ.

ಶ್ರೀಮಂತರು ಕುಟುಂಬದ ಸದಸ್ಯರ ಹೆಸರಿಗೆ ಭೂಮಿಯನ್ನು ಹೊಂದಲು ಆ ಸಂದರ್ಭದಲ್ಲಿದ್ದ ಸರಪಂಚನಾದ ಉಳುವಪ್ಪ ಮಲ್ಲಪ್ಪ ತಿರ್ಲಾಪುರ ಅಗತ್ಯ ದಾಖಲೆ ಸೃಷ್ಟಿಸಿದ್ದನೆಂದು ಹೇಳಲಾಗುತ್ತದೆ. ಇವರು ೧೯೪೧ರಿಂದಲೂ ಹೆಬ್ಬಳ್ಳಿಯ ಸರಪಂಚರಾಗಿ ಕಾರ್ಯನಿರ್ವಹಿಸುತ್ತಿದ್ದರು. (ವರದಿ : ಸಂಯುಕ್ತ ಕರ್ನಾಟಕ, ೫-೫-೧೯೫೭)

ಧಾರವಾಡ ಜಿಲ್ಲಾ ಕಲೆಕ್ಟರ್ ಡಿ.ಡಿ. ಸಾಠೆಯವರ ಟಿಪ್ಪಣಿಯಲ್ಲಿ ಮಂಡಿಸಿರುವ ಮತ್ತೊಂದು ವಿಚಾರವೆಂದರೆ ರೈತ ಕೂಲಿಕಾರರು ಹೆಚ್ಚುವರಿ ಭೂಮಿಯನ್ನು ಸಹಕಾರಿ ತತ್ವದ ಮೇಲೆ ಕೃಷಿ ಮಾಡಲು ಸೂಚಿಸಿದ್ದರು. ಈ ಸಲಹೆಗೆ ಅಂದಿನ ಸಭೆಯಲ್ಲಿಯೇ ವಿರೋಧ ವ್ಯಕ್ತವಾಗಿತ್ತು. ಸಭೆಯಲ್ಲಿ ಹಾಜರಿದ್ದ ರೈತ ಕೂಲಿಕಾರ್ಮಿಕರಾದ ಗುರುಸಿದ್ಧಪ್ಪ ಗಡೇಕಾರ, ಚಂದ್ರಪ್ಪ ಚಲುವಾದಿ, ಬಾಬುಸಾಬ್ ಎಲಿಗಾರ ಮುಂತಾದವರು ವಿರೋಧ ವ್ಯಕ್ತಪಡಿಸಿದ್ದರು. ಏಕೆಂದರೆ ಸಹಕಾರಿ ತತ್ವದ ಆಧಾರದ ಮೇಲೆ ಕೃಷಿ ಮಾಡುವುದು ಕಷ್ಟಕರವಾಗಿತ್ತು. ಹೆಚ್ಚುವರಿ ಭೂಮಿ ಒಂದೇ ಸ್ಥಳದಲ್ಲಿ ದೊರೆಯುತ್ತಿರಲಿಲ್ಲ. ಈ ಕೃಷಿ ಪದ್ಧತಿಯಲ್ಲಿ ತೊಡಗಿಕೊಂಡ ರೈತರಲ್ಲಿ ಶ್ರದ್ಧೆಯ ಕೊರತೆ ಸಹ ಕಂಡುಬರುತ್ತಿರಲಿಲ್ಲ. ಸ್ವಂತ ಭೂಮಿಯಲ್ಲಿ ಕೃಷಿ ಮಾಡುವ ಶ್ರದ್ಧೆ ಸಾಮೂಹಿಕ ಕೃಷಿಯಲ್ಲಿ ಕಂಡುಬರುವುದಿಲ್ಲ. ಅಲ್ಲದೆ ರೈತ ಕಾರ್ಮಿಕರೆಲ್ಲ ಸಾಮೂಹಿಕ ಕೃಷಿ ಕೈಗೊಳ್ಳಲು ಸ್ಥಾಪಿಸಿಕೊಳ್ಳುವ ಸಹಕಾರಿ ಸಂಘಗಳು ಮುಂದೊಂದು ದಿನ ಶ್ರೀಮಂತರ, ಭೂಮಾಲಿಕರ ಕೈವಶವಾಗಬಹುದೆಂಬ ಭಯವಿತ್ತು. ರೈತ

ಕೂಲಿಕಾರ್ಮಿಕರಲ್ಲಿ ಭಿನ್ನಾಭಿಪ್ರಾಯ ಉಂಟಾದಲ್ಲಿ ಅದು ಕೃಷಿ ಬೆಳೆಯ ಮೇಲೆ ಪರಿಣಾಮ ಬೀರುತ್ತದೆ. ಇಂತಹ ಹಲವು ಕಾರಣಗಳಿಗಾಗಿ ಈ ಸೂಚನೆಯನ್ನು ವಿರೋಧಿಸುವುದು ರೈತ ಕೂಲಿಕಾರ್ಮಿಕರಿಗೆ ಅನಿವಾರ್ಯವಾಗಿತ್ತು. ಅಲ್ಲದೆ ಹೆಚ್ಚುವರಿ ಭೂಮಿಯಲ್ಲಿ ಹೊಸತೊಂದು ಊರನ್ನು ನಿರ್ಮಿಸುವ ಬಗ್ಗೆ ಆಲೋಚನೆ ಇದೆ ಎಂದು ತಮ್ಮ ಟಿಪ್ಪಣಿಯಲ್ಲಿ ಡಿ.ಡಿ. ಸಾಠೆ ಪ್ರಸ್ತಾಪಿಸಿದ್ದರು. ಈ ಬಗ್ಗೆಯೂ ರೈತರಲ್ಲಿ ಸಹಮತ ಇರಲಿಲ್ಲ. ಅಲ್ಲದೆ ಒಂದು ಊರನ್ನೇ ಹೊಸದಾಗಿ ನಿರ್ಮಿಸುವುದು ಅಷ್ಟೊಂದು ಸುಲಭದ ಮಾತಾಗಿರಲಿಲ್ಲ. ರೈತ ಕೂಲಿಕಾರ್ಮಿಕರನ್ನು ಹೆಬ್ಬಳ್ಳಿಯಿಂದ ಪ್ರತ್ಯೇಕಿಸುವುದು ಹಾಗೂ ಕೃಷಿ ಜಮೀನಿನ ಬಳಿಯೇ ಅವರಿಗೆ ವಾಸಸ್ಥಳ ನಿಗದಿಗೊಳಿಸುವುದು ಅವರ ದುಡಿಮೆಗೆ ಕೃಷಿಗೆ ಸಹಕಾರಿಯಾಗಬಲ್ಲದಾಗಿತ್ತು. ಆದರೆ ಜೀವನ ನಿರ್ವಹಣೆ ಎನ್ನುವುದು ಬರೀ ದುಡಿಮೆ ಅಥವಾ ಆರ್ಥಿಕ ಸ್ವಾವಲಂಬನೆಯ ಮೇಲೆಯೇ ನಿಂತಿರುವುದಿಲ್ಲ. ನೆರೆ-ಹೊರೆಯ ಬಾಂಧವ್ಯ, ಧಾರ್ಮಿಕ ಆಚರಣೆ, ಸಾಮಾಜಿಕ ಸಂಬಂಧಗಳೂ ಬದುಕಿಗೆ ಅನಿವಾರ್ಯವಾಗಿರುತ್ತದೆ. ಸರ್ಕಾರಿ ಅಧಿಕಾರಿಯಾಗಿದ್ದ ಶ್ರೀ ಡಿ.ಡಿ. ಸಾಠೆಯವರು ರೈತರ ಬಗ್ಗೆ ಕಾಳಜಿಯಿದ್ದರೂ ಅವರ ಸಾಂಸ್ಕೃತಿಕ ಬದುಕಿನ ಈ ಕಷ್ಟಗಳನ್ನು ಗಮನಿಸದೇ ಇಂತಹದ್ದೊಂದು ಟ್ಟಿಪ್ಪಣಿ ಬರೆದು, ಸಲಹೆ ಸೂಚನೆ ನೀಡಿದ್ದರು; ವಾಸ್ತವವಾಗಿ ಇವತ್ತಿನವರೆಗೂ ಇಲ್ಲಿ ಪ್ರತ್ಯೇಕ ಊರಾಗಲಿ, ವಾಸಸ್ಥಳವಾಗಲಿ ಸ್ಥಳೀಯ ರೈತ ಕೂಲಿಕಾರರು ಸ್ಥಾಪಿಸಿಕೊಂಡಿಲ್ಲ.

ಕೊನೆಯದಾಗಿ ಶ್ರೀ ವೆಂಕಟೇಶ ದೇವಸ್ಥಾನ ಹಾಗೂ ಪಾಂಡುರಂಗ ದೇವಸ್ಥಾನಗಳಿಗೆ ಇನಾಂ ಭೂಮಿಯನ್ನು ಉಳಿಸಿದ್ದು, ಈ ಭೂಮಿಯ ಪ್ರಮಾಣ ಸುಮಾರು ೪೫೦ ಎಕರೆಗಳಿತ್ತು. ಇದರ ಉಸ್ತುವಾರಿಯನ್ನು ಜಾಗೀರದಾರ ಕುಟುಂಬಗಳೇ ನೋಡಿಕೊಳ್ಳುತ್ತಿದ್ದವು. ದೇವಸ್ಥಾನಗಳಿಗೆ ಸಂಬಂಧಿಸಿದ ಈ ಭೂಮಿ ಜಾಗೀರದಾರರ ಖಾಸಗೀ ಆಸ್ತಿ ಎನ್ನುವಂತೆಯೇ ಉಪಯೋಗವಾಗುತ್ತಿತ್ತು. ಕಲೆಕ್ಟರರು ದೇವಾಲಯಗಳ ಖರ್ಚು-ವೆಚ್ಚಕ್ಕಾಗಿ ಇಷ್ಟೊಂದು ಭೂಮಿಯನ್ನು ಉಳಿಸುವ ನಿರ್ಣಯ ಮಾಡಿದ್ದರ ಔಚಿತ್ಯ ತಿಳಿಯುತ್ತಿರಲಿಲ್ಲ. ಇದಲ್ಲದೆ ತಮ್ಮ ಟಿಪ್ಪಣಿಯಲ್ಲಿ ಊರಿನ ಇನ್ನಿತರ ಮಹತ್ವದ ದೇವಾಲಯಗಳಿಗೂ ಭೂಮಿ ನೀಡುವ ಕುರಿತು ವಿಚಾರಿಸಿ ಯೋಗ್ಯ ನಿರ್ಣಯ ಕೈಗೊಳ್ಳಲಾಗುವುದು ಎಂದು ಅವರು ನಮೂದಿಸಿದ್ದರು. ಆದರೆ ಇದುವರೆಗೂ ಯಾವುದೇ ಸರಕಾರವು ಹೆಬ್ಬಳ್ಳಿಯ ಇತರೆ ದೇವಾಲಯಗಳಿಗೆ ಕಿಂಚಿತ್ತು ಭೂಮಿಯನ್ನು ನೀಡಿಲ್ಲ.

ಗ್ರಾಮೀಣ ಬದುಕಿನ ಅಥವಾ ಕೃಷಿ ಸಮಾಜದ ಬಗ್ಗೆ ಸಂಪೂರ್ಣ ಜ್ಞಾನವಿಲ್ಲದ ಒಬ್ಬ ಉನ್ನತ ಅಧಿಕಾರಿಯ ಟಿಪ್ಪಣಿಗಳ ಮಿತಿಗಳನ್ನು ಇಲ್ಲಿ ಕಾಣಬಹುದು. ಇಂತಹ ಟಿಪ್ಪಣಿಗಳಾಗಲಿ, ಸರಕಾರಿ ದಾಖಲೆಗಳಾಗಲಿ, ವಿವಿಧ ಇಲಾಖೆಗಳಲ್ಲಿ ಸಾಕಷ್ಟು ಸಿಗುತ್ತವೆ. ಭಾರತದ ಅಧಿಕಾರಿ ಶಾಹಿಯು ಗ್ರಾಮೀಣ ಜಗತ್ತಿನ ಸಮಸ್ಯೆಗಳಲ್ಲಿ ಕೆಲಸ ಮಾಡುವಾಗ ಉಂಟಾಗುತ್ತಿದ್ದ ಸಮಸ್ಯೆಗಳಿವು.

೧೯೫೨ರಿಂದ ೧೯೫೭ರ ಇದೇ ಸಂದರ್ಭದಲ್ಲಿ ಧಾರವಾಡ ಭಾಗದಲ್ಲಿ ಭೂಮಿಗೆ ಸಂಬಂಧಿಸಿದಂತೆ ವಿನೋಬಾ ಭಾವೆ ನೇತೃತ್ವದ ಭೂದಾನ ಚಳುವಳಿಯ ಪ್ರಭಾವವು ಚಾಲ್ತಿಯಲ್ಲಿತ್ತು. ೧೯೫೧ರಂದು ಆಂಧ್ರಪ್ರದೇಶ ಪುಜಂಪಲ್ಲಿ ಎಂಬ ಗ್ರಾಮದಿಂದ ವಿನೋಬಾ ಭಾವೆ ಆರಂಭಿಸಿದ್ದ ಭೂದಾನ ಯಾತ್ರೆ ಭಾರತದಾದ್ಯಂತ ಸುದ್ದಿಯಲ್ಲಿತ್ತು. ಆಂಧ್ರಪ್ರದೇಶ, ಕೇರಳ, ಒರಿಸ್ಸಾ, ತಮಿಳುನಾಡು ಮುಂತಾದೆಡೆ ವಿನೋಭಾವೆ ಪಾದಯಾತ್ರೆಯ ಮೂಲಕ ಲಕ್ಷಾಂತರ ಭೂಮಿಯನ್ನು ಭೂಮಾಲಿಕರಿಂದ ದಾನವಾಗಿ ಪಡೆದಿದ್ದರು. ೧೯೫೭ರ ಸೆಪ್ಟೆಂಬರ್ ನಿಂದ ೧೯೫೮ರ ಮಾರ್ಚ್ ರವರೆಗೆ ಕರ್ನಾಟಕದಲ್ಲಿ ಪಾದಯಾತ್ರೆ ಕೈಗೊಂಡಿದ್ದ ವಿನೋಬಾ ಭಾವೆ ೧೦ ಸಾವಿರ ಎಕರೆಗಿಂತ ಹೆಚ್ಚು ಭೂಮಿಯನ್ನು ದಾನವಾಗಿ ಪಡೆದರು. ಭೂಮಿಗಾಗಿ ಮಾರ್ಕ್ಸ್ ವಾದಿಗಳು ಹಾಗೂ ಸಮಾಜವಾದಿಗಳು ನಡೆಸುತ್ತಿದ್ದ ಹೋರಾಟವನ್ನು ಈ ಭೂದಾನ ಚಳುವಳಿಯು ಅಣಕಿಸುವಂತಿತ್ತು. ಭೂದಾನವಾಗಿ ಬಂದ ಭೂಮಿಯ ಗುಣಮಟ್ಟ ಹಾಗೂ ಭೂದಾನ ಚಳುವಳಿಯ ಯಶಸ್ಸಿನ ಬಗ್ಗೆ ಎಂಥದೇ ಮಿತಿಗಳಿರಲಿ, ಅದು ಕರ್ನಾಟಕದಲ್ಲಿ ಹಾಗೂ ಭಾರತದ ಸಮಾಜವಾದಿಗಳು ತಮ್ಮ ಹೋರಾಟದಿಂದ ಪಡೆದ ಭೂಮಿಯ ಪ್ರಮಾಣಕ್ಕಿಂತ ಹೆಚ್ಚಿನದಾಗಿತ್ತು.

ಧಾರವಾಡದಲ್ಲಿ ಆಗಿನ ಸಂದರ್ಭದಲ್ಲಿ ವಿನೋಬಾ ಭಾವೆ ಪ್ರಭಾವ ತೀವ್ರವಾಗಿತ್ತು. ಭಾರತದಲ್ಲಿಯೇ ಪ್ರಥಮವಾಗಿ ಮಹಿಳಾ ಭೂದಾನ ಕಾರ್ಯಕರ್ತೆಯರ ತಂಡವೊಂದು ೧೯೫೮ರ ಸಂದರ್ಭದಲ್ಲಾಗಲೇ ರೂಪುಗೊಂಡಿತ್ತು. ಭಾಗೀರಥಿ ಬಾಯಿ ಪ್ರಭು, ಮೀರಾಬಾಯಿ

ಕೊಪ್ಪೀಕರ, ಕೃಷ್ಣಬಾಯಿ ಪಂಡಿತ, ಲಕ್ಷ್ಮೀಬಾಯಿ, ಶ್ರೀಮತಿ ಚೆನ್ನಮ್ಮ ಹಳ್ಳೀಕೆರೆ ಮುಂತಾದವರು ಒಟ್ಟುಗೂಡಿ ರಚಿಸಿಕೊಂಡಿದ್ದ ಈ ತಂಡ ಭೂದಾನ ಪಡೆಯಲು ಹಾಗೂ ಸರ್ವೋದಯ ಗ್ರಾಮ ನಿರ್ಮಾಣ ಮಾಡಲು ಶ್ರಮಿಸುತ್ತಿದ್ದರು. ಈ ಸಂಬಂಧವಾಗಿ ಹೆಬ್ಬಳ್ಳಿ ಜಾಗೀರದಾರರಾದ ಕೃಷ್ಣರಾವ್ ಅವರನ್ನು ಅವರನ್ನು ಭಾವೆಯವರು ಭೇಟಿ ಮಾಡಿ ಭೂಮಿಯನ್ನು ದಾನವಾಗಿ ಕೊಡುವಂತೆ ಕೇಳಿಕೊಂಡಿದ್ದರು. ಆದರೆ ಇಷ್ಟೊತ್ತಿಗಾಗಲೇ ತಮ್ಮಲ್ಲಿನ ಅಧಿಕ ಜಾಗೀರು ಭೂಮಿಯನ್ನು ಸರ್ಕಾರದ ವಶಕ್ಕೆ ಒಪ್ಪಿಸಿದ್ದರಿಂದ ಕೃಷ್ಣರಾವ್ ಅವರು ಭೂದಾನ ನೀಡಲು ನಿರಾಕರಿಸಿದರು.

ಅಲ್ಲದೆ ಭೂದಾನಿಗಳ ಈ ಮಹಿಳಾ ತಂಡ ಆಚಾರ್ಯ ವಿನೋಬಾ ಭಾವೆ ಅವರ ಆದೇಶದಂತೆ ಮಹಾರಾಷ್ಟ್ರದ ಪಾಂಡಪುರದಲ್ಲಿ ೧೯೫೮ ಮೇ ೩೦, ೩೧ ರಂದು ನಡೆದ ಸರ್ವೋದಯ ಸಮ್ಮೇಳನಕ್ಕೆ ಪಾದಯಾತ್ರೆಯ ಮೂಲಕ ಹೋದರು. ಭಾರತದಲ್ಲಿಯೇ ಭೂದಾನ ಮಹಿಳಾ ತಂಡ ಇದಾಗಿದ್ದರಿಂದ ಇವರನ್ನು ವಿಶೇಷವಾಗಿ ಆಹ್ವಾನಿಸಿ ಮಾನ್ಯತೆ ನೀಡಲಾಗಿತ್ತು.

ಭೂಮಾಲಿಕರಿಂದ ಭೂಮಿಯನ್ನು ಪಡೆದುಕೊಳ್ಳುವ ಈ ಮೇಲಿನ ಪ್ರಕ್ರಿಯೆ ಒಂದೆಡೆಯಾದರೆ ಭೂಮಿಯನ್ನು ತಮ್ಮಲ್ಲೇ ಬಳಸಿಕೊಳ್ಳುವ ಭೂಮಾಲಿಕರ ಚಟುವಟಿಕೆಗಳು ಇನ್ನೊಂದೆಡೆ. ಆಗ ಧಾರವಾಡ ಜಿಲ್ಲೆಯ ಭೂಮಾಲಿಕರ ಸಂಘಟನೆಯೊಂದು ಮಾಡಿಕೊಂಡು ತಮ್ಮ ಹಿತಾಸಕ್ತಿ ಕಾಪಾಡಿಕೊಳ್ಳಲು ಪ್ರಯತ್ನಿಸಿದರು. ಭೂಮಾಲಿಕರ ಸಂಘದ ಚಟುವಟಿಕೆಗಳನ್ನು ಆ ಸಂದರ್ಭದಲ್ಲಿ ಪ್ರಚಲಿತದಲ್ಲಿದ್ದ 'ಸಂಯುಕ್ತ ಕರ್ನಾಟಕ' ದಿನಪತ್ರಿಕೆ ಸಾಕಷ್ಟು ವರದಿ ಮಾಡಿದೆ. ಅದರ ಪ್ರಕಾರ ಮುಂಬೈ ಕರ್ನಾಟಕಕ್ಕೆ ಸೇರಿದ ಬೆಳಗಾಂ, ಬಿಜಾಪುರ, ಧಾರವಾಡ ಮತ್ತು ಉತ್ತರ ಕನ್ನಡ ಜಿಲ್ಲೆಗಳ ಭೂಮಾಲಿಕರು ಸೇರಿಕೊಂಡು 'ಮುಂಬೈ ಕರ್ನಾಟಕ ಹೊಲದೊಡೆಯರ ಸಂಘ' ಸ್ಥಾಪಿಸಿಕೊಂಡಿದ್ದರು. ಏಕೀಕರಣದ ನಂತರದಲ್ಲಿ ಭೂಸುಧಾರಣೆ ಸಂಬಂಧವಾಗಿ ರೂಪುಗೊಂಡಿದ್ದ ಜತ್ತಿ ಸಮಿತಿಗೆ ಮನವಿ ಪತ್ರ ಸಲ್ಲಿಸಿ ತಮ್ಮ ಹಿತಾಸಕ್ತಿ ಕಾಯಲು ವಿನಂತಿಸಿಕೊಂಡಿದ್ದರು. ಅಲ್ಲದೆ ಪ್ರತಿ ತಿಂಗಳು ಹುಬ್ಬಳ್ಳಿಯ ನಗರಸಭೆಯ ಅಟ್ಟದ ಮೇಲೆ ಭೂಮಾಲಿಕರು ಸಭೆ ಸೇರುತ್ತಿದ್ದರು. (ವರದಿ : ૩-೫-೧೯೫೭, ಸಂಯುಕ್ತ ಕರ್ನಾಟಕ) ಅಲ್ಲದೆ ಒಮ್ಮೆ ನಡೆದ ವಾರ್ಷಿಕ ಸಭೆಯು ರಾ.ಬಿ.ಬಿ.ಎಲ್. ಪಾಟೀಲರ ಅಧ್ಯಕ್ಷತೆಯಲ್ಲಿ ನಡೆದಿತ್ತು. ಈ ಸಭೆಯಲ್ಲಿ ಚರ್ಚಿತವಾದ ಮುಖ್ಯ ಅಂಶಗಳೆಂದರೆ, ಕೆಲವೇ ದಿನಗಳಲ್ಲಿ ಮೈಸೂರು ರಾಜ್ಯದ ಭೂ ಒಡೆಯರ ಪರಿಷತ್ತು ಸೇರಿಸುವುದು; ಮುಂದೆ ಬೆಂಗಳೂರಿನಲ್ಲಿ ದಕ್ಷಿಣ ಭಾರತದ ಎಲ್ಲ ರಾಜ್ಯಗಳ ಭೂ ಒಡೆಯರ ಸಂಘಟನೆ ಮಾಡುವುದು; ಆ ಮೂಲಕ ಪ್ರದಾನಿ ನೆಹರೂ ಹಾಗೂ ಯೋಜನಾ ಆಯೋಗದ ಸದಸ್ಯರೆಲ್ಲರಿಗೂ ಈಗಿನ ಭೂ ಸುಧಾರಣಾ ಕಾಯ್ದೆಗಳಿಂದ ಆಗುವ ಅನಿಷ್ಟ ಪರಿಣಾಮಗಳನ್ನು ಕುರಿತು ಮನವರಿಕೆ ಮಾಡುವುದು ಮುಂತಾದ ವಿಷಯಗಳ ಬಗೆಗೆ ಚರ್ಚಿಸುವುದು. (ವರದಿ : ೨೬-೫-೧೯೫೮, ಸಂಯುಕ್ತ ಕರ್ನಾಟಕ) ಈ ಭೂಮಾಲಿಕ ಸಂಘದ ಸಭೆಗಳಿಗೆ ಹೆಬ್ಬಳ್ಳಿ ಜಾಗೀರದಾರ ಮನೆತನ ಹಾಗೂ ಹೆಬ್ಬಳ್ಳಿ ಗೌಡರ ಮನೆತನವಾದ ಬಾಡಿಗೇರ ಮನೆತನದ ಸದಸ್ಯರು ಹೋಗಿ ತಮ್ಮ ಸ್ಥಿತಿಯ ಕುರಿತು ವಿವರಿಸುತ್ತಿದ್ದರು.

ಈ ಎಲ್ಲ ಬೆಳವಣಿಗೆಗಳ ಮಧ್ಯೆ ೧೯೫೮ರ ಸುಮಾರಿಗೆ ಹೆಬ್ಬಳ್ಳಿಯ ಜಾಗೀರದಾರ ಭೂಮಿಗೆ ಸಂಬಂಧಿಸಿದಂತೆ ಸರ್ಕಾರದಲ್ಲಿ ವಶವಾದ ಭೂಮಿ, ರೈತರಿಗೆ ಹಂಚಿಕೆಯಾದ ಭೂಮಿ ವಿವಾದವಾಗಿ ಉಳಿದ ಭೂಮಿಯ ವಿವರ ಇಂತಿದೆ.

೧. ಹೆಬ್ಬಳ್ಳಿ ಜಾಗೀರದಾರ ಒಟ್ಟು ಭೂಮಿ ೧೨,೬೫೫.૩೭(ಎಕರೆಗಳಲ್ಲಿ)

೨. ೧೯೫೨ರಲ್ಲಿ ಸರಕಾರ ವಶಕ್ಕೆ ತೆಗೆದುಕೊಂಡ ಭೂಮಿ – ೧೨,೬೫೫.૩೭

૩. ಜಾಗೀರದಾರರಿಗೆ ಮರು ಹಂಚಿಕೆಯಾದ ಭೂಮಿ – ૩,೦೨೦.૩೭

೪. ಗೇಣಿದಾರರಿಗೆ ಮಂಜೂರಾದ ಭೂಮಿ – ೯,೫೫೫.೨೬

೫. ಯಾರಿಗೂ ಮಂಜೂರಾಗದೆ ಉಳಿದ ಭೂಮಿ – ೮೦.೧೪

ಈ ಮಾಹಿತಿಗಳು ಧಾರವಾಡ ತಾಲೂಕು ಕಚೇರಿಯ ಕಡತಗಳಲ್ಲಿ ನಮೂದಾಗಿದ್ದು, ಈ ಭೂಮಿಯ ಕುರಿತು ೧೯೫೮ರ ಸಂದರ್ಭದಲ್ಲಿ ಯಾವ ರೈತರಿಗೂ ಅಧಿಕೃತ ದಾಖಲು ಪತ್ರಗಳನ್ನು ಸರ್ಕಾರ ವಿತರಿಸಲಿಲ್ಲ. ಈ ದಾಖಲೆಗಳನ್ನು ರೈತರು ಪಡೆಯಲಿಕ್ಕಾಗಿ ಹಾಗೂ ಹೆಚ್ಚುವರಿ ಭೂಮಿಯ ಹಂಚಿಕೆಗಾಗಿ ಸರ್ಕಾರದೊಡನೆ ರೈತರು ಹೋರಾಟಕ್ಕಿಳಿದರು. ಈ ಹೋರಾಟದ ನೇತೃತ್ವ ವಹಿಸಿದವರು ಧಾರವಾಡ ಭಾಗದ ಸಮಾಜವಾದಿಗಳು. ಸಮಾಜವಾದಿಗಳು ಪ್ರವೇಶಿಸಿದ್ದರಿಂದ ಹೆಬ್ಬಳ್ಳಿಯ ಭೂಮಿಗೆ ರೈತರು ಅಧಿಕೃತ ವಾರಸುದಾರರಾದರು. ಅಲ್ಲದೆ ಸ್ಥಳೀಯ ರೈತ ಕೂಲಿಕಾರ್ಮಿಕರಿಗೆ ಭೂಮಿ ದೊರಕುವಂತಾಯಿತು. ಇದೊಂದು ಸಮಾಜವಾದಿಗಳ ಸದ್ದಿಲ್ಲದ ಹೋರಾಟವಾಗಿತ್ತು.

## ೫. ಸಮಾಜವಾದಿಗಳ ಸದ್ದಿಲ್ಲದ ಹೋರಾಟ

'ಉಳುವವನೇ ನೆಲದೊಡೆಯ', ಇದು ಕರ್ನಾಟಕದ ರೈತರ ಹೋರಾಟಗಳ ಪ್ರಸಿದ್ಧ ಹೇಳಿಕೆ. ಇಲ್ಲಿನ ಬಹಳಷ್ಟು ರೈತ ಹೋರಾಟಗಳು ಈ ಹೇಳಿಕೆಯನ್ನು ತಮ್ಮ ಹೋರಾಟದ ಪ್ರಮುಖ ಭಾಗವನ್ನಾಗಿಸಿಕೊಂಡು ಬೆಳೆದಿವೆ. ಭೂಸುಧಾರಣಾ ಕಾಯ್ದೆಗಳು, ಆಯೋಗಗಳೂ ಈ ಹೇಳಿಕೆಯ ಅರ್ಥಕ್ಕೆ ಹೆಚ್ಚಿನ ಒತ್ತುಕೊಟ್ಟು ಕಾನೂನುಗಳನ್ನು ತರಲು ಪ್ರಯತ್ನಿಸಿವೆ. ಆದರೆ ಕರ್ನಾಟಕದ ಈ ಸಂಗತಿಗಳು ನಿಜವಾಗಿಯೂ ಉಳುವವನಿಗೆಯೇ ಭೂಮಿಯ ಒಡೆತನವನ್ನು ನೀಡಿವೆಯೇ? ಎನ್ನುವುದು ಪ್ರಶ್ನೆ.

ಅದರಲ್ಲೂ (೧೯ಜ೯ರ ದಶಕದಲ್ಲಿ ಧಾರವಾಡ ಜಿಲ್ಲೆಯಲ್ಲಿ ಭೂಮಾಲಿಕರು ತಮ್ಮ ಹಿಡಿತದಲ್ಲಿ ಅತಿ ಹೆಚ್ಚಿನ ಭೂಮಿಯನ್ನು ಹೊಂದಿದ್ದರು. ೧೯೫೫-೫೬ರಲ್ಲಿ ಎರಡು ಹೆಕ್ಟೇರ್‌ಗಿಂತ (೧ ಹೆಕ್ಟೇರ್ = ೨.೪೭ ಎಕರೆ) ಕಡಿಮೆ ಇದ್ದು ಭೂ ಹಿಡುವಳಿಗಳ ಸಂಖ್ಯೆ = ೧,೧೩,೬೦೦, ಅವುಗಳ ವಿಸ್ತೀರ್ಣ ೧,೧೨,೧೮,೫೦೦ ಹೆಕ್ಟೇರ್ (೨,೭೭,೦೯,೬೯೫ ಎಕರೆ), ೨ ರಿಂದ ೪ ಹೆಕ್ಟೇರ್(೫ ರಿಂದ ೧೦ ಎಕರೆ) ಭೂ ಹಿಡುವಳಿಗಳ ಸಂಖ್ಯೆ ೬೦,೬೦೦, ಅವುಗಳ ವಿಸ್ತೀರ್ಣ ೧,೭೩,೩೪೦೦ ಹೆಕ್ಟೇರ್ (೪,೨೮,೧೪,೯೮೦ ಎಕರೆ), ೪ ರಿಂದ ೬ ಹೆಕ್ಟೇರ್ (೧೦ ರಿಂದ ೧೫ ಎಕರೆ) ಇದ್ದ ಭೂ ಹಿಡುವಳಿಗಳ ಸಂಖ್ಯೆ ೨೯,೮೦೦, ಹೆಕ್ಟೇರ್‌ಗಳಲ್ಲಿ ಅವುಗಳ ವಿಸ್ತೀರ್ಣ ೧,೪೯,೦೪,೦೦೦ (೩,೬೮,೧೨,೮೮೦ ಎಕರೆ) ೬ ರಿಂದ ೧೨ ಹೆಕ್ಟೇರ್ (೧೫ ರಿಂದ ೨೫ ಎಕರೆ) ಇದ್ದ ಭೂ ಹಿಡುವಳಿಗಳ ಸಂಖ್ಯೆ ೩೪,೩೦೦ ಅವುಗಳ ೨,೯೦,೩೮,೫೦೦ ಹೆಕ್ಟೇರ್ (೭,೧೭,೨೫,೦೯೫ ಎಕರೆ) ೧೨ ರಿಂದ ೨೪ ಹೆಕ್ಟೇರ್ (೩೦ ರಿಂದ ೬೦ ಎಕರೆ) ಇದ್ದ ಭೂಹಿಡುವಳಿಗಳ ಸಂಖ್ಯೆ ೧೨,೯೦೦. ಅವುಗಳ ವಿಸ್ತೀರ್ಣ ೨,೧೧,೮೧,೫೦೦ ಹೆಕ್ಟೇರ್. (೫೨೩,೧೮,೩೦೫ ಎಕರೆ) ಮತ್ತು ೨೦ ರಿಂದ ೪೦ ಹೆಕ್ಟೇರ್(೫೦ ರಿಂದ ೧೦೦ ಎಕರೆ) ವರೆಗೆ ಭೂ ಹಿಡುವರಿಗಳ ಸಂಖ್ಯೆ ೨,೬೦೦. ಅವುಗಳ ವಿಸ್ತೀರ್ಣ ೮೦,ಜ೯,೫೦೦ ಹೆಕ್ಟೇರ್ (೧,೯೯,೦೬,೯೬೫ ಎಕರೆ) ಆಗಿತ್ತು. ಕೇವಲ ೯೦೦ ಜನರು ೪೦ ರಿಂದ ೮೦ ಹೆಕ್ಟೇರ್ (೧೦೦ ರಿಂದ ೨೦೦ ಎಕರೆ) ಭೂ ಹಿಡುವಳಿ ಹೊಂದಿದ್ದು ಅದರ ವಿಸ್ತೀರ್ಣ ೪೯,೮೧೫ ಹೆಕ್ಟೇರ್ (೧,೨೩,೦೪೩ ಎಕರೆ) ೮೦ ಹೆಕ್ಟೇರ್ (೨೦೦ ಎಕರೆ)ಕ್ಕಿಂತ ಹೆಚ್ಚಿಗೆ ವಿಸ್ತೀರ್ಣದ ಭೂ ಹಿಡುವಳಿಗಳನ್ನು ೨೫೦ ಜನರು ಹೊಂದಿದ್ದು, ಅವುಗಳ ವಿಸ್ತೀರ್ಣ ೩೮,೦೭೦ ಹೆಕ್ಟೇರ್ (೯೪,೦೩೨ ಎಕರೆ) ಆಗಿತ್ತು. (ಧಾರವಾಡ ಜಿಲ್ಲಾ ಗೆಜೆಟಿಯರ್ ೧೯೯೫, ಪು.೨೬೩).

ಹೆಬ್ಬಳ್ಳಿ ಸಂಬಂಧಿಸಿದಂತೆ ಇರುವ ಒಟ್ಟೂ ಜಾಗೀರದಾರ್ ಭೂಮಿಸುಮಾರು ೧೩ ಸಾವಿರ ಎಕರೆ. ಇದರಲ್ಲಿ ೩೦೦ ರಿಂದ ೩೫೦ ರೈತರು ಈ ಬಗ್ಗೆ ಸರ್ಕಾರಿ ದಾಖಲೆಯಲ್ಲಿ ಸ್ಪಷ್ಟತೆ ಇಲ್ಲ. ಹಾಗೂ ನೀಲಗಂಗಯ್ಯ ಪೂಜಾರ್ ಅವರೊಂದಿಗೆ ಮಾತನಾಡುವಾಗಲೂ ಅವರು ಭೂಮಿ ಹಂಚಿಕೊಂಡ ರೈತರ ನಿರ್ದಿಷ್ಟ ಸಂಖ್ಯೆ ಹೇಳಲಿಲ್ಲ. ೯.೫೪೧ ಎಕರೆ ಜಮೀನನ್ನು ತಮ್ಮಲ್ಲಿ ಹಂಚಿಕೊಂಡರು. ಪ್ರತಿ ರೈತರು ಗರಿಷ್ಟ ಪ್ರಮಾಣದಲ್ಲಿ ೪೮ ಎಕರೆ ಜಮೀನನ್ನು ಹೊಂದಿ (ತಮ್ಮ ಸ್ವಂತ ಜಮೀನು ಹಾಗೂ ಜಾಗೀರುಭೂಮಿ ಸೇರಿ), ಹೆಚ್ಚುವರಿಯಾದ ೨,೫೦೦ ಎಕರೆ ಜಮೀನು ಉಳಿಯಿತು. ಈ ಭೂಮಿ ಪಡೆಯಲಿಕ್ಕಾಗಿ ಗ್ರಾಮದಲ್ಲಿ ೩೦೦ ಕ್ಕಿಂತ ಅಧಿಕ ರೈತ ಕೂಲಿಕಾರ್ಮಿಕರಿದ್ದರು. ಈ ರೈತ ಕೂಲಿಕಾರರಿಗೆ ಬೇರ್ಯಾವ ಸ್ವಂತ ಭೂಮಿ ಇಲ್ಲದೆ ಗ್ರಾಮದ ವಿವಿಧ ರೈತರಲ್ಲಿ ಭೂಮಿಗಳಲ್ಲಿ ಕೂಲಿ ಕೆಲಸ ಮಾಡಿ ತಮ್ಮ ಜೀವನ ನಿರ್ವಹಣೆ ಮಾಡಿಕೊಳ್ಳಬೇಕಿತ್ತು. ೪೮ ಎಕರೆ ಗರಿಷ್ಟ ಭೂಮಿ ಹೊಂದಿದ್ದ ಗ್ರಾಮದ ಅದೆಷ್ಟೋ ಕುಟುಂಬಗಳು ಇಂತಹ ರೈತ ಕೂಲಿ

ಕಾರ್ಮಿಕರಿಗೆ ದಿನಗೂಲಿಯೋ ವಾರದ ಕೂಲಿಯೋ ಕೊಟ್ಟು ತಮ್ಮ ಭೂಮಿಯನ್ನು ಸಾಗುವಳಿ ಮಾಡಿಸುತ್ತಿದ್ದರು. ಅಂದರೆ ಮಧ್ಯಮ ವರ್ಗದ ಈ ರೈತ ಕುಟುಂಬಗಳು ತಮ್ಮ ವಶದಲ್ಲಿದ್ದ ೪೮ ಎಕರೆಯಲ್ಲಿ ತಮ್ಮ ಕೈಲಾದ ಹಲವು ಎಕರೆ ಪ್ರದೇಶವನ್ನು ಸ್ವಂತ ಸಾಗುವಳಿ ಮಾಡಿದರೆ, ಉಳಿದ ಭೂಮಿಯನ್ನು ರೈತ ಕೂಲಿ ಕಾರ್ಮಿಕರಿಂದ ಸಾಗುವಳಿ ಮಾಡಿಸುತ್ತಿದ್ದರು. ಅಂದರೆ ಹೆಬ್ಬಳ್ಳಿಯ ಹೆಚ್ಚುಪಾಲು ಭೂಮಿಯನ್ನು ಉಳುತ್ತಿದ್ದುದು ಇಂತಹ ಕೆಳವರ್ಗದ ರೈತ ಕೂಲಿಕಾರ್ಮಿಕರೇ ಹೊರತು ಮಧ್ಯಮ ರೈತ ಕುಟುಂಬಗಳಲ್ಲ. ಆದರೆ ಜಾಗೀರದಾರರ ಬಹುಪಾಲು ಭೂಮಿ ಹೆಬ್ಬಳ್ಳಿಯ ರೈತ ಕೂಲಿಕಾರ್ಮಿಕರಿಗೆ ಹಂಚಿಕೆಯಾಗುವ ಬದಲು ಗ್ರಾಮದ ಮಧ್ಯಮ ವರ್ಗದ ರೈತ ಕುಟುಂಬಗಳಲ್ಲಿ ಹಂಚಿಕೆಯಾಗಿತ್ತು. 'ಉಳೂವವನೇ ನೆಲದೊಡೆಯ' ಎನ್ನುವ ಸ್ಲೋಗನ್ ಹಾಗೂ ಭೂ ಸುಧಾರಣಾ ಕಾಯ್ದೆಗಳು ಕೈಗೊಂಡಿದ್ದ ಕೃಷಿ ಸಮಾಜದ ಬದಲಾವಣೆಗಳು ತಮ್ಮ ಅರ್ಥವನ್ನು ಕಳೆದುಕೊಂಡಿದ್ದವು.

ಈ ರೀತಿಯ ಅನರ್ಥತೆ ಬರಿ ಹೆಬ್ಬಳ್ಳಿಯ ಪ್ರಸಂಗದಲ್ಲಿ ಮಾತ್ರವಲ್ಲ ಕರ್ನಾಟಕದ ಹಲವು ಭಾಗಗಳಲ್ಲಿ ನಡೆದಿದೆ. ೧೯೬೧ರಲ್ಲಿ ಧಾರವಾಡ ಜಿಲ್ಲೆಯಲ್ಲಿದ್ದ ಕೃಷಿ ಕೂಲಿಕಾರ್ಮಿಕರ ಸಂಖ್ಯೆ ೨,೩೦,೨೮೫ ಆಗಿತ್ತು. ೧೯೭೧ರಲ್ಲಿ ಈ ಪ್ರಮಾಣ ೨೦,೧೮೭ರಷ್ಟಾಗಿದೆ. (ಅದೇ, ಪು.೨೯೦) ಈ ೧೦ ವರ್ಷಗಳಲ್ಲಿ ಜನಸಂಖ್ಯೆ ಹೆಚ್ಚಾಗಿದೆ ಎನ್ನಬಹುದಾದರೂ ಕೃಷಿ ಕೂಲಿಕಾರ್ಮಿಕರಲ್ಲಿ ಅದೆಷ್ಟು ಮಂದಿ ಸ್ವಂತ ಸಾಗುವಳಿದಾರರಾಗಿದ್ದಾರೆ ಎನ್ನುವುದು ಪ್ರಶ್ನೆ? ಏಕೆಂದರೆ ಇದೇ ಅವಧಿಯಲ್ಲಿ ಸ್ವಂತ ಸಾಗುವಳಿ ಮಾಡಿಕೊಳ್ಳುವವರ ಪ್ರಮಾಣ ಹೆಚ್ಚಾಗುವ ಬದಲು ಕುಗ್ಗಿದೆ. ೧೯೬೧ರಲ್ಲಿ ಸಾಗುವಳಿದಾರರ ಸಂಖ್ಯೆ ೩,೬೯,೧೭೪ ಇದ್ದರೆ ೧೯೭೧ರಲ್ಲಿ ೨,೪೯,೭೫೬ ಜನ ಸಾಗುವಳಿದಾರರಿದ್ದಾರೆ.(ಅದೇ, ಪು.೨೯೦)

ಈ ಅಂಕಿ-ಅಂಶಗಳು ಸೂಚಿಸುತ್ತಿರುವುದೇನೆಂದರೆ ಈ ಅವಧಿಯಲ್ಲಿ ಉಂಟಾದ ಭೂ ಸುಧಾರಣಾ ಕಾಯ್ದೆಗಳು ಭೂ ಹಂಚಿಕೆಯ ಮೂಲಕ ಸಾಗುವಳಿದಾರರನ್ನು ಹೆಚ್ಚಿಸುವುದಕ್ಕಿಂತ ಅವರಿಗೆ ಮಾರಕವಾಗಿ ಪರಿಣಮಿಸಿ ಸ್ವಂತ ಸಾಗುವಳಿದಾರರನ್ನೂ ಕೂಲಿಕಾರ್ಮಿಕರನ್ನಾಗಿಸಿವೆ. ಹಾಗಾದರೆ ಕರ್ನಾಟಕದ ಆರಂಭದ ಭೂಸುಧಾರಣಾ ಕಾಯ್ದೆಗಳು ಭೂ ಹಂಚಿಕೆಗಿಂತ ಭುಮಿಯ ಕೇಂದ್ರೀಕರಣದ ಬಗೆಗೆ ಹೆಚ್ಚಿನ ಒಲವು ಹೊಂದಿದ್ದವು ಎನಿಸುತ್ತದೆ. ಅದರಲ್ಲೂ ಬಿ.ಡಿ.ಜತ್ತಿ ಸಮಿತಿ ವರದಿಯು ಸ್ವಂತ ಸಾಗುವಳಿ ಮಾಡುವುದಾದರೆ ಭೂಮಾಲಿಕರು ತಮ್ಮ ಭುಮಿಯನ್ನು ಉಳುತ್ತಿದ್ದ ಗೇಣಿದಾರರನ್ನು ಒಕ್ಕಲೆಬ್ಬಿಸುವುದಕ್ಕೆ ಅವಕಾಶವನ್ನು ಮಾಡಿಕೊಟ್ಟಿತ್ತು.

೧೯೫೨ರಲ್ಲಿ ಮಹಾರಾಷ್ಟ್ರ ಸರ್ಕಾರ ಹೆಬ್ಬಳ್ಳಿಯ ಭೂಮಿಯನ್ನು ವಶಪಡಿಸಿಕೊಂಡ ನಂತರದಲ್ಲಿ ಈ ಭೂಮಿಯನ್ನು ಅನುಭೋಗಿಸುವುದರಲ್ಲಿ ಹೆಚ್ಚಿನವರು ಮಧ್ಯಮವರ್ಗದವರೇ ಆಗಿದ್ದಾರೆ. ಇವರು ಲಿಂಗಾಯುತರು ಮತ್ತು ಬ್ರಾಹ್ಮಣ ಜಾತಿಗೆ ಸೇರಿದವರು. ರೈತ ಕೂಲಿಕಾರ್ಮಿಕರಲ್ಲಿ ಹೆಚ್ಚಿನವರು ಕೆಳವರ್ಗದ ಹರಿಜನರು, ನೇಕಾರರು, ಪಿಂಜಾರರು, ಚಲುವಾದಿಯವರು ಇದ್ದರು. ಈ ವರ್ಗಗಳು ಅನಕ್ಷರಸ್ಥರು, ವೈಯಕ್ತಕಿಕವಾಗಿ ಪ್ರತಿಭಟಸುವ ಆತ್ಮಸ್ಥೈರ್ಯವನ್ನು ಕಳೆದುಕೊಂಡಿದ್ದವರಾಗಿದ್ದರು. ಇವರಿಗೆ ಸರ್ಕಾರಿ ಕಾಯ್ದೆಗಳು ಆರ್ಥಿಕವಾಗಿ ಸ್ವಾವಲಂಬಿಗಳಾಗಲು ಅವಕಾಶ ನೀಡಬೇಕಿತ್ತು. ಆದರೆ ಭೂಮಿಗೆ ಸಂಬಂಧಿಸಿದ ಕರ್ನಾಟಕದ ಅದೆಷ್ಟೋ ಹೋರಾಟಗಳು, ಕಾಯ್ದೆಗಳು ಸಾಮಾಜಿಕವಾಗಿ ಮೇಲ್ವರ್ಗವಾಗಿರುವ ಲಿಂಗಾಯಿತರಿಗೆ, ಒಕ್ಕಲಿಗರಿಗೆ, ಬ್ರಾಹ್ಮಣರಿಗೆ ಆರ್ಥಿಕವಾಗಿ ಬಲಿಷ್ಟವಾಗಲು ಸಹಾಯ ಮಾಡಿದವು. ಈ ಹಿನ್ನೆಲೆಯಲ್ಲಿ ಸಮಾಜವಾದಿ ಪಕ್ಷ ೧೯೫೮ನೇ ವರ್ಷದಲ್ಲಿ ಹೆಬ್ಬಳ್ಳಿಯಲ್ಲಿ ಭೂರಹಿತ ರೈತಕೂಲಿ ಕಾರ್ಮಿಕರ ಹೋರಾಟ ಕೈಗೊಳ್ಳಲು ಸಿದ್ಧವಾಯಿತು. ನೀಲಗಂಗಯ್ಯ ಪೂಜಾರ್ ಅವರು ದಲಿತರನ್ನು ಹಾಗೂ ದುಡಿಯುವ ವರ್ಗಗಳನ್ನೇ ಮುಖ್ಯವಾಗಿಸಿಕೊಂಡು ಹೋರಾಟಕ್ಕಿಳಿಯಲು ಸಿದ್ಧರಾದರು. ಅಲ್ಲದೆ ಈ ಹೋರಾಟ ಕೈಗೊಳ್ಳದಿದ್ದರೆ ಹೆಚ್ಚುವರಿಯಾಗಿದ್ದ ಸುಮಾರು ೨೫೦೦ ಎಕರೆ ಭೂಮಿಯೂ ಮಧ್ಯಮ ರೈತ ವರ್ಗದ ಪಾಲಾಗುವ ಅವಕಾಶವಿತ್ತು. ಹೆಚ್ಚುವರಿ ಭೂಮಿಯಲ್ಲಿ ಹೆಬ್ಬಳ್ಳಿಯ ಎಲ್ಲ ರೈತ ಕೂಲಿಕಾರ್ಮಿಕರಿಗೂ ಭೂಮಿ ಹಂಚುವ ಸಾಧ್ಯತೆ ಇರಲಿಲ್ಲ. ಆದರೂ ಸಮಾಜವಾದಿಗಳು ಕೈಗೊಂಡಿದ್ದ ರೈತ ಕೂಲಿಕಾರ್ಮಿಕರ ಸಂಘಟನೆಗೆ ಗ್ರಾಮದ ಎಲ್ಲ ರೈತ ಕೂಲಿಕಾರ್ಮಿಕರು ಬೆಂಬಲ ಸೂಚಿಸಿದರು. ಹೋರಾಟಕ್ಕೆ ಸಿದ್ಧರಾದರು.

ಈ ಸಂಬಂಧವಾಗಿ ದಿನಾಂಕ ೧೮ ಏಪ್ರಿಲ್, ೧೯೫೮ರಂದು ಸಮಾಜವಾದಿ ಮುಖಂಡರಾದ ನೀಲಗಂಗಯ್ಯ ಪೂಜಾರ್ ಮತ್ತು ಗಂಗಾಧರ್ ಪದಕಿಯವರು ಹೆಬ್ಬಳ್ಳಿಯಲ್ಲಿ ಸಾರ್ವಜನಿಕ ಸಭೆ ನಡೆಸಿದರು. ೫೦೦ಕ್ಕಿಂತ ಹೆಚ್ಚು ಜನ ಭಾಗವಹಿಸಿದ್ದ ಈ ಸಭೆಯಲ್ಲಿ ರೈತ ಕೂಲಿಕಾರ್ಮಿಕರೇ ಹೆಚ್ಚಿದ್ದರು. ಹೋರಾಟವನ್ನು ಕೈಗೊಳ್ಳುವ ರೂಪು-ರೇಷೆಯ ಕುರಿತು ಚರ್ಚಿಸಲಾಯಿತು. ಸಭೆಯಲ್ಲಿ ಕೆಲವು ನಿರ್ಣಯಗಳನ್ನು ಕೈಗೊಳ್ಳಲಾಯಿತು. ರೈತ ಕೂಲಿಕಾರ್ಮಿಕರಿಗೆ ಹೆಚ್ಚುವರಿಯಾಗಿ ಉಳಿದಿರುವ ಸುಮಾರು ೨,೫೦೦ ಎಕರೆ ಭೂಮಿಯನ್ನು ಶೀಘ್ರವೇ ಹಂಚಿಕೆ ಮಾಡಿ ಅಧಿಕೃತ ಮಾನ್ಯತಾ ಪತ್ರ (ಪಹಣಿ ಪತ್ರ)ವನ್ನುಸರ್ಕಾರ ನೀಡಬೇಕು, ಈಗಾಗಲೇ ರೈತರು ಉಳುತ್ತಿರುವ ಜಾಗೀರು ಭೂಮಿಗೆ ಮಾನ್ಯತೆ ನೀಡಿ ಅವರಿಗೂ ಸಹಿತ ಪಹಣಿಪತ್ರವನ್ನು ನೀಡಬೇಕೆಂದು ನಿರ್ಣಯಿಸಲಾಯಿತು. (ಮಾಧ್ಯಮ ರೈತ ವರ್ಗ ಹಾಗು ರೈತ ಕೂಲಿಕಾರ್ಮಿಕರ ಮಧ್ಯದ ಅಸಮಾನತೆಯ ಬಗ್ಗೆ ಸ್ಪಷ್ಟತೆಯಿದ್ದ ನೀಲಗಂಗಯ್ಯ ಪೂಜಾರ್ ಅವರು ಶ್ರೀಮಂತ ಜಾಗೀರದಾರರರಿಂದ ಮಧ್ಯಮ ರೈತ ವರ್ಗಕ್ಕಾದರೂ ಭೂಮಿ ಸಿಗುತ್ತದೆ ಎನ್ನುವ ಬಗ್ಗೆ ಒಲವಿದ್ದರು. ಹಾಗಾಗಿ ಸಭೆಯಲ್ಲಿ ಈ ವರ್ಗಗಳು ಉಳುತ್ತಿರುವ ಭೂಮಿಗೆ ಸರ್ಕಾರವು ಅಧಿಕೃತ ಮಾನ್ಯತಾ ಪತ್ರ (ಪಹಣಿಪತ್ರ) ನೀಡಲು ಒತ್ತಾಯಿಸಿ ನಿರ್ಣಯ ಸ್ವೀಕರಿಸಲು ಬಯಸಿದರು. ಈ ನಿರ್ಣಯ ಹೋರಾಟದಲ್ಲಿ ಪಾಲ್ಗೊಂಡವರಿಗೆ ಗ್ರಾಮಸ್ಥರಿಂದ ಹೆಚ್ಚಿನ ಬೆಂಬಲ ನೀಡಿತು.) ಅಂದಿನ ಸಭೆಯಲ್ಲಿಯೇ ದಿನಾಂಕ ೨೦-೪-೧೯೫೮ ರಂದು ಧಾರವಾಡ ಜಿಲ್ಲಾಧಿಕಾರಿಗಳನ್ನು ಭೇಟಿ ಮಾಡಿ ಮನವಿಪತ್ರವನ್ನು ಸಲ್ಲಿಸಲು ತೀರ್ಮಾನಿಸಲಾಯಿತು.

ದಿನಾಂಕ ೨೦-೪-೧೯೫೮ರಂದು ಹೆಬ್ಬಳ್ಳಿಯಿಂದ ಧಾರವಾಡ ಜಿಲ್ಲಾಧಿಕಾರಿಗಳವರ ಕಚೇರಿಯವರೆಗೆ ೩೦೦ಕ್ಕಿಂತ ಹೆಚ್ಚು ಭೂರಹಿತ ಕೂಲಿಕಾರ್ಮಿಕರು ಸಮಾಜವಾದಿ ಮುಖಂಡರ ನೇತೃತ್ವದಲ್ಲಿ ಕಾಲ್ನಡಿಗೆಯಲ್ಲಿ ಮೆರವಣಿಗೆ ಮಾಡಿದರು. ಅಂದಿನ ಧಾರವಾಡ ಜಿಲ್ಲಾಧಿಕಾರಿ ವಿ.ಎಸ್.ಹಿರೇಮಠ ಅವರನ್ನು ಭೇಟಿ ಮಾಡಿದ ಭೂರಹಿತ ರೈತ ಕೂಲಿಕಾರ್ಮಿಕರು, ತಮ್ಮ ಬೇಡಿಕೆಗಳನ್ನು ಈಡೇರಿಸಲು ಒತ್ತಾಯಿಸಿದರು. ಈ ಸಂಬಂಧವಾಗಿ ಮನವಿಪತ್ರ ಸಲ್ಲಿಸಿದರು. ಬೇಡಿಕೆ ಈಡೇರಿಸಲು ೧೫ ದಿನಗಳ ಗಡವು ನೀಡಿದರು. ದಿನಾಂಕ ೧೫-೫-೧೯೫೮ರ ಒಳಗಾಗಿ ಬೇಡಿಕೆ ಈಡೇರದಿದ್ದರೆ ಹೋರಾಟ ಕೈಗೊಳ್ಳುವುದಾಗಿ ಸರ್ಕಾರಕ್ಕೆ ಎಚ್ಚರಿಸಿದರು.

ಈ ಹದಿನೈದು ದಿನಗಳಲ್ಲಿ ಸರ್ಕಾರದ ಯಾವುದೇ ಪೂರಕ ಪ್ರತಿಕ್ರಿಯೆ ವ್ಯಕ್ತವಾಗುವ ಸೂಚನೆ ಕಂಡುಬರಲಿಲ್ಲ. ಸಮಾಜವಾದಿ ಮುಖಂಡರು ಮತ್ತೊಮ್ಮೆ ಗ್ರಾಮದಲ್ಲಿ ರೈತ ಕೂಲಿಕಾರ್ಮಿಕಾರ ಸಭೆ ನಡೆಸಿದರು. ಈ ಸಭೆಯಲ್ಲಿ ಬಡಕೂಲಿ ಕಾರ್ಮಿಕರು ತಮ್ಮ ಜೀವನ ನಿರ್ವಹಣೆಯ ಕಷ್ಟಗಳನ್ನು ಹಂಚಿಕೊಂಡರು. ಪ್ರತಿಭಟನೆಯಲ್ಲಿ ಪಾಲ್ಗೊಳ್ಳುವುದರಿಂದ ಅವರು ತಮ್ಮ ದಿನದ ಆದಾಯವನ್ನು ಕಳೆದುಕೊಳ್ಳಬೇಕಿತ್ತು. ಪ್ರತಿದಿನ ದುಡಿದರೆ ಮಾತ್ರ ಜೀವನ ನಿರ್ವಹಣೆ ಸಾಗುತ್ತಿದ್ದ ರೈತ ಕೂಲಿಕಾರ್ಮಿಕರು ಹೋರಾಟದಿಂದಾಗಿ ತಮ್ಮ ಕುಟುಂಬದ ನಿರ್ವಹಣೆ ಕಷ್ಟವಾಗುವುದೆಂದು ತಿಳಿಸಿದರು. ಅದರಲ್ಲೂ ಪಿಕೆಟಿಂಗ್ ಮಾಡಿ ಬಧ್ನನಕ್ಕೊಳಗಾದರೆ ಹಲವು ದಿನಗಳ ಸೆರೆವಾಸ ಸಹಜವಾಗಿತ್ತು. ಈ ಹಿನ್ನೆಲೆಯಲ್ಲಿ ರೈತ ಕೂಲಿಕಾರ್ಮಿಕರಿಗೆ ಯಾವುದೇ ತೊಂದರೆಯಾಗದಂತೆ ಹೋರಾಟ ಕೈಗೊಳ್ಳಲು ಸಭೆಯಲ್ಲಿ ಚರ್ಚಿಸಲಾಯಿತು. ಕೊನೆಗೆ ಪ್ರತಿದಿನ ೧೦ ರಿಂದ ೧೫ ರೈತ ಕೂಲಿಕಾರರು ಧಾರವಾಡ ಜಿಲ್ಲಾಧಿಕಾರಿಗಳ ಕಚೇರಿ ಎದುರು ಪಿಕೆಟಿಂಗ್ ಮಾಡುವುದು ಎಂದು ನಿರ್ಧರಿಸಲಾಯಿತು. ಇದರಿಂದ ಬೇಡಿಕೆ ಈಡೇರುವವರೆಗೂ ಹೋರಾಟದ ಬಿಸಿಯನ್ನು ಉಳಿಸಿಕೊಳ್ಳಲು ಸಾಧ್ಯವಿತ್ತು. ಅಲ್ಲದೆ ಸಾಮೂಹಿಕವಾಗಿ ಪ್ರತಿಭಟನೆ ಮಾಡಿ ಎಲ್ಲರೂ ಬಂಧನವಾಗುವುದರಿಂದ ಗ್ರಾಮದ ಕೃಷಿ ಕಾರ್ಯಗಳ ಮೇಲೆ ಪರಿಣಾಮ ಬೀರುತ್ತಿತ್ತು. ಈ ಹಿನ್ನೆಲೆಯಲ್ಲಿ ರೈತ ಕೂಲಿಕಾರ್ಮಿಕರು ಸರದಿಯ ಪ್ರಕಾರ ಪ್ರತಿಭಟಿಸುವುದು ಸರಿಯಾದ ಕ್ರಮವಾಗಿತ್ತು. ಹೋರಾಟದ ಎಲ್ಲ ಸಂದರ್ಭದಲ್ಲಿಯೂ ನೀಲಗಂಗಯ್ಯ ಪೂಜಾರ್ ಮತ್ತು ಗಂಗಾಧರ ಪದಕಿಯವರು ಹೆಬ್ಬಳ್ಳಿಯಲ್ಲಿಯೇ ಉಳಿದು ರೈತರು ಕೈಗೊಳ್ಳಬೇಕಾದ ಮುಂದಿನ ತೀರ್ಮಾನಗಳ ಬಗ್ಗೆ ಸಲಹೆ ಸೂಚನೆ ನೀಡುತ್ತಿದ್ದರು. ಈ ಹಿನ್ನೆಲೆಯಲ್ಲಿ ಈ ಮುಖಂಡರು ರೈತ ಕೂಲಿಕಾರ್ಮಿಕರೊಂದಿಗೆ ಜಿಲ್ಲಾಧಿಕಾರಿ ಕಚೇರಿ ಎದುರು ಪಿಕೆಟಿಂಗ್ ಮಾಡಿ ಬಂಧನಕ್ಕೊಳಗಾಗುವುದನ್ನು ಇಷ್ಟಪಡಲಿಲ್ಲ.

ದಿನಾಂಕ ೭-೫-೧೯೫೮ ಬುಧವಾರ ಹೋರಾಟದ ಮೊದಲ ದಿನ. ಅಂದು ಹೆಬ್ಬಳ್ಳಿಯಲ್ಲಿ ಹೋರಾಟಗಾರರು ಮೆರವಣಿಗೆ ಮಾಡಿದರು. 'ಉಳುವವನಿಗೇ ಭೂಮಿ' ರೈತ ಕೂಲಿಕಾರ್ಮಿಕರ ಹೋರಾಟಕ್ಕೆ ಜಯವಾಗಲಿ 'ಸಮಾಜವಾದಿ ಪಕ್ಷಕ್ಕೆ ಜಯವಾಗಲಿ' ಈ ಮೂರು

ಘೋಷಣೆಗಳನ್ನು ಕೂಗುತ್ತಾ ಬೀದಿಯಲ್ಲಿ ಮೆರವಣಿಗೆ ನಡೆಸಿದರು. ಹೋರಾಟ ಮುಕ್ತಾಯಗೊಳ್ಳುವವರೆಗೂ ಈ ಮೂರು ಘೋಷಣೆಗಳನ್ನು ಮಾತ್ರ ಕೂಗುತ್ತಿದ್ದರು. (ಮಾಹಿತಿ : ಜಿ.ವಿ.ಪದಕಿ) ಅಂದು ಹೆಬ್ಬಳ್ಳಿಯಲ್ಲಿ ಮೆರವಣಿಗೆ ಮಾಡಿ ಅದರಲ್ಲಿ ಈಗಾಗಲೇ ನಿರ್ಧರಿಸಿದ್ದ ೧೧ ಮಂದಿಯನ್ನು ಧಾರವಾಡ ಜಿಲ್ಲಾಧಿಕಾರಿಗಳ ಕಚೇರಿಗೆ ತೆರಳಲು ಬೀಳ್ಕೊಟ್ಟರು. ಪಾದಯಾತ್ರೆಯಲ್ಲಿಯೇ ಧಾರವಾಡ ಜಿಲ್ಲಾಧಿಕಾರಿಗಳ ಕಚೇರಿಗೆ ಬಂದ ಈ ಹೋರಾಟಗಾರರು ಅಲ್ಲಿ ಮೂರು ಘೋಷಣೆಗಳನ್ನು ಕೂಗುತ್ತಾ ಬಂಧನಕ್ಕೊಳಗಾದರು. ಆದರೆ ಹೀಗೆ ಬಂಧನಕ್ಕೊಳಗಾದವರು ಯಾರು ಎಂಬ ಬಗ್ಗೆ ಹೆಚ್ಚಿನ ವಿವರಣೆಗಳು ತಿಳಿದುಬಂದಿಲ್ಲ. ಆದರೆ ಹೋರಾಟದ ಮೊದಲದಿನದ ಬಂಧನ ಹೆಬ್ಬಳ್ಳಿಯಲ್ಲಿ ಸಂಚಲನವನ್ನು ಉಂಟುಮಾಡಿತು. ಪ್ರತಿದಿನ ಸಂಜೆ ನಡೆಯುತ್ತಿದ್ದ ಸಮಾಜವಾದಿ ಮುಖಂಡರ ಸಭೆಗೆ ಅಂದು ಹೆಚ್ಚಿನ ಸಂಖ್ಯೆಯಲ್ಲಿ ರೈತ ಕೂಲಿಕಾರರು ಸೇರಿದರು. ಸಭೆಯಲ್ಲಿ ಸ್ತ್ರೀಯರೂ ಮಕ್ಕಳೂ ಬಂದಿದ್ದರು. ಈ ಬಂಧನ ರೈತರಲ್ಲಿ ದುಗುಡವನ್ನುಂಟು ಮಾಡಿತ್ತು. ಅದರಲ್ಲಿ ಬಂಧಿತ ಕುಟುಂಬಗಳು ಈ ಘಟನೆಯಿಂದ ಆತಂಕಗೊಂಡಿದ್ದವು. ಸಭೆಯಲ್ಲಿ ಅವರಿಗೆ ಧೈರ್ಯ ತುಂಬಲಾಯಿತು. ಬಂಧಿತರನ್ನು ಶೀಘ್ರವೇ ಸರ್ಕಾರ ಬಿಡುಗಡೆ ಮಾಡುತ್ತದೆ ಎಂದು ತಿಳಿಹೇಳಲಾಯಿತು. ಹೋರಾಟ ಮಾಡಿ ಬಿಡುಗಡೆ ಮಾಡಿಸುವುದಾಗಿ ಮೂಲತಃ ವಕೀಲರಾಗಿದ್ದ ನೀಲಗಂಗಯ್ಯ ಪೂಜಾರ್ ಮತ್ತು ಗಂಗಾಧರ್ ಪದಕಿಯವರು ಸ್ಪಷ್ಟವಾಗಿ ತಿಳಿಸಿದರು.

ಹೋರಾಟಕ್ಕೆ ಸಂಪೂರ್ಣವಾಗಿ ತಮ್ಮನ್ನು ತೊಡಗಿಸಿಕೊಂಡ ಸ್ಥಳೀಯ ರೈತ ಕೂಲಿಕಾರ್ಮಿಕರೆಂದರೆ ಬಾಬುಸಾಬ ಎಲಿಗಾರ, ಚಂದ್ರಪ್ಪ ಚಲುವಾದಿ, ಲಿಂಬಣ್ಣ ನಾಯ್ಕರ್, ಗುರುಸಿದ್ದಪ್ಪ ಗಡೇಕಾರ, ಮೂಗಯ್ಯ ಪೂಜಾರ ಇನ್ನು ಮುಂತಾದವರು. ಅದರಲ್ಲೂ ಬಾಬುಸಾಬ್ ಎಲಿಗಾರ ಎಂಬ ಪಿಂಜಾರ್ ಜಾತಿಯ ಯುವಕ ಸಮಾಜವಾದಿ ಚಳುವಳಿಯ ಕುರಿತು ಆಸಕ್ತಿ ಹೊಂದಿದ್ದ. ಸ್ಥಳೀಯ ರೈತ ಕೂಲಿಕಾರ್ಮಿಕರು ಈತನ ಮಾತಿಗೆ ಹೆಚ್ಚಿನ ಮಹತ್ವ ನೀಡುತ್ತಿದ್ದರು. ಬಾಬುಸಾಬ್ ಎಲಿಗಾರ ಹೆಬ್ಬಳ್ಳಿಯವನೇ ಆಗಿದ್ದರಿಂದ ಸ್ಥಳೀಯರಲ್ಲಿ ಈತನ ಮಾತಿಗೆ ಬೆಲೆ ಇತ್ತು. ನೀಲಗಂಗಯ್ಯ ಪೂಜಾರ ಅವರ ಬಗ್ಗೆ ಅಪಾರ ಗೌರವ ಇಟ್ಟುಕೊಂಡಿದ್ದ ಈತ ಅವರ ಅಣತಿಯಂತೆ ರೈತ ಕೂಲಿಕಾರ್ಮಿಕರನ್ನು ಸಂಘಟಿಸುವ ಹಾಗೂ ಹೋರಾಟದ ಸ್ಫೂರ್ತಿಯನ್ನು ತುಂಬುವ ಕೆಲಸ ಮಾಡುತ್ತಿದ್ದ. ಚಂದ್ರಪ್ಪ ಚಲುವಾದಿ ಎನ್ನುವ ಇನ್ನೊಬ್ಬ ಹೋರಾಟಗಾರ ಯಾವಾಗಲೂ ಸಭೆಗಳಲ್ಲಿ ತತ್ವಪದಗಳನ್ನು ಹಾಡುತ್ತಿದ್ದ. ಪಾದಯಾತ್ರೆ ಕೈಗೊಳ್ಳುವ ಸಂದರ್ಭದಲ್ಲಿ ಹೋರಾಟದ ಘೋಷಣೆಗಳು ಬಿಟ್ಟರೆ ಈತನ ಹಾಡುಗಳೇ ಪ್ರಮುಖ ಸ್ಫೂರ್ತಿ. ಶಿಶುನಾಳ ಷರೀಫ, ಕನಕದಾಸ, ಪುರಂದರದಾಸರ ಗೀತೆಗಳನ್ನು ಹಾಗೂ ಜನಪದ ಹಾಡುಗಳನ್ನು ಹಾಡುತ್ತಿದ್ದನು. (ಮಾಹಿತಿ : ನೀಲಗಂಗಯ್ಯ ಪೂಜಾರ)

ದಿನಂಕ ಮೇ ೮ ರಂದು (ಗುರುವಾರ) ಹಾಗೂ ಮೇ ೯ ರಂದು (ಶುಕ್ರವಾರ) ಕ್ರಮವಾಗಿ ೧೧ ಹಾಗೂ ೧೨ ಮಂದಿ ರೈತ ಕೂಲಿಕಾರ್ಮಿಕರು ಹೆಬ್ಬಳ್ಳಿಯಿಂದ ಕಾಲ್ನಡಿಗೆಯಲ್ಲಿ ಧಾರವಾಡ ಜಿಲ್ಲಾಧಿಕಾರಿ ಕಚೇರಿ ಎದುರು ಪಿಕೆಟಿಂಗ್ ಮಾಡಿ ಬಂಧನಕ್ಕೊಳಗಾದರು. ಈ ಸಂದರ್ಭದಲ್ಲಿ ಸಮಾಜವಾದಿ ಪಕ್ಷದ ಧಾರವಾಡ ಜಿಲ್ಲಾ ಕಾರ್ಯದರ್ಶಿಯಾದ ಗಂಗಾಧರ್ ಪದಕಿಯವರು ಪತ್ರಿಕಾ ಹೇಳಿಕೆಯೊಂದನ್ನು ನೀಡಿದರು. ಅದರಲ್ಲಿ 'ಬಿತ್ತುವ ಕಾಲವು ಸಮೀಪಿಸಿರುವ ಈ ಸಂದರ್ಭದಲ್ಲಿ ಹೊಲದ ಕೆಲಸಗಾರರು. ಈ ರೀತಿ ಬಂಧನವಾಗುತ್ತಾ ನಡೆದರೆ ಹೆಬ್ಬಳ್ಳಿ ಗ್ರಾಮದಲ್ಲಿ ಹೊಲ ಸಾಗುವಳಿ ವ್ಯತ್ಯಯ ಬಂದು ಭೂಮಿಯೆಲ್ಲಾ ಪಾಳು ಬೀಳಬಹುದೆಂದು ಜನರು ಹೇಳುತ್ತಿದ್ದಾರೆ. ಸರ್ಕಾರದವರು ಇದಕ್ಕೆ ಅವಕಾಶ ಕೊಡದೆ ಬೇಗನೆ ಮಧ್ಯಸ್ಥಿಕೆ ವಹಿಸಿ ಭೂರಹಿತ ಒಕ್ಕಲಿಗರ ಬೇಡಿಕೆಯನ್ನು ಮನ್ನಿಸಬೇಕೆಂದೂ, ಅಲ್ಲದೆ ನಾಳೆ (ಶನಿವಾರ) ಮತ್ತು ನಾಡಿದ್ದು (ಆದಿತ್ಯವಾರ) ಎರಡು ದಿವಸ ಸತ್ಯಾಗ್ರಹ ಇಲ್ಲವೆಂದೂ, ಸೋಮವಾರದಿಂದ ಮತ್ತೆ ಎಂದಿನಂತೆ ಸತ್ಯಾಗ್ರಹಿಗಳ ತಂಡಗಳು ಧಾರವಾಡ ಜಿಲ್ಲಾಧಿಕಾರಿ ಕಚೇರಿ ಎದುರು ಪಿಕೆಟಿಂಗ್ ಮಾಡುವುದೆಂದೂ ತಿಳಿಸಿದರು. (ವರದಿ : ಸಂಯುಕ್ತ ಕರ್ನಾಟಕ, ೧೦-೫-೧೯೫೮) ಶನಿವಾರ ಮತ್ತು ಆದಿತ್ಯವಾರ (ಮೇ ೧೦ ಮತ್ತು ೧೧)ಜಿಲ್ಲಾಧಿಕಾರಿಗಳ ಕಛೇರಿ ರಜೆ ಇದ್ದ ಕಾರಣವಾಗಿ ಆ ಎರಡು ದಿನಗಳ ಕಾಲ ಪ್ರತಿಭಟನೆಯನ್ನು ಮುಂದೂಡಲಾಗಿದೆ. ಆದರೆ ಹೋರಾಟದ ಬಿಸಿ ಮಾತ್ರ ಕಡಿಮೆಯಾಗಿರಲಿಲ್ಲ. ಮತ್ತೆ ದಿನಾಂಕ ೧೨ ಮತ್ತು ೧೩ ರಂದು ಕ್ರಮವಾಗಿ ೧೦ ಹಾಗೂ ೧೨ ರೈತರು ಬಂಧಿಸಲ್ಪಟ್ಟರು. ಇಷ್ಟು ಹೊತ್ತಿಗಾಗಲೇ ಭೂರಹಿತ ರೈತ ಕೂಲಿಕಾರ್ಮಿಕರ ಹೋರಾಟವನ್ನು ತೀವ್ರಗೊಳಿಸಬೇಕೆಂದು ಸಭೆಗಳಲ್ಲಿ ರೈತರು ಒತ್ತಾಯಿಸಲಾರಂಭಿಸಿದರು. ಈ ಸಂದರ್ಭದಲ್ಲಿಯೇ ಬಾಬುಸಾಬ್ ಎಲಿಗಾರ ಹೋರಾಟವನ್ನು ತೀವ್ರಗೊಳಿಸಲು ಮಾರಡಗಿ, ಗೋವನಕೊಪ್ಪ ಗ್ರಾಮಗಳಲ್ಲಿನ ರೈತಕೂಲಿಕಾರ್ಮಿಕರನ್ನು ಸಂಘಟಿಸುವ ಯತ್ನ ಮಾಡಿದರು. ಈ ಬಗ್ಗೆ ಆ

ಗ್ರಾಮಗಳಲ್ಲಿ ಸಭೆಯನ್ನು ನಡೆಸಲಾಯಿತು. ಹೋರಾಟಕ್ಕೆ ಧುಮುಕುವ ಕುರಿತು ಸುತ್ತಲಿನ ಗ್ರಾಮಸ್ಥರು ರೈತ ಕೂಲಿಕಾರ್ಮಿಕರು ನಿರ್ಧರಿಸಿದರು.

ದಿನಾಂಕ ಮೇ ೧೪ ರಂದು ಮತ್ತೆ ಸರದಿಯಂತೆ ಹೆಬ್ಬಳ್ಳಿ ರೈತ ಕೂಲಿಕಾರ್ಮಿಕರು ಪ್ರತಿಭಟನೆಗೆ ಸಜ್ಜಾದರು. ಕಾಲ್ನಡಿಗೆಯಲ್ಲಿ ಹೋದ ೧೨ ಮಂದಿ ಹೋರಾಟಗಾರರು ಪಿಕೆಟಿಂಗ್ ಮಾಡಿ ಬಂಧಿತರಾದರು. ಅದುವರೆಗೂ ೬೮ ಮಂದಿ ರೈತ ಕೂಲಿಕಾರ್ಮಿಕರು ಬಂಧಿತರಾಗಿದ್ದರು. ಇದರಲ್ಲಿ ೩೮ ಮಂದಿ ರೈತರನ್ನು ಬಂಧಿಸಿದ ದಿನವೇ ಸಾಯಂಕಾಲ ಬಿಡುಗಡೆ ಮಾಡಿದ್ದರು. ಉಳಿದ ೩೦ ಮಂದಿ ರೈತ ಕೂಲಿಕಾರರ ಮೇಲೆ ಖಟ್ಲೆ ಹಾಕಲಾಯಿತು. ಅದರಲ್ಲೂ ಈ ೩೦ ಮಂದಿ ಹೋರಾಟಗಾರರ ಮೊದಲ ಮೂರು ದಿನಗಳಲ್ಲೇ ಬಂಧಿತರಾಗಿದ್ದರು. ಇವರ ಮೇಲೆ ಖಟ್ಲೆ ಹಾಕಲು ಕಾರಣವೆಂದರೆ ಪ್ರತಿಭಟನೆಯನ್ನು ಮಾಡುವುದಲ್ಲದೆ, ಜಿಲ್ಲಾಡಳಿತ ಕಾರ್ಯನಿರ್ವಹಿಸಲು ಅಡ್ಡಿ ಉಂಟು ಮಾಡಿದ್ದಾರೆಂದು ಆಪಾದಿಸಲಾಗಿತ್ತು. ಈ ಹೋರಾಟಗಾರರ ಪರವಾಗಿ ನೀಲಗಂಗಯ್ಯ ಪೂಜಾರ್ ಮತ್ತು ಗಂಗಾಧರ್ ಪದಕಿಯವರು ಕೋರ್ಟಿನಲ್ಲಿ ವಾದಮಾಡಲು ಸಿದ್ಧರಾಗಿದ್ದರು. ಈ ಬಗ್ಗೆ ಹೆಬ್ಬಳ್ಳಿ ರೈತರಲ್ಲಿ ಅವರು ಧೈರ್ಯವನ್ನು ತುಂಬಿದರು.

ಹೆಬ್ಬಳ್ಳಿ ರೈತ ಕೂಲಿಕಾರರ ಬಂಧನ ದಿನದಿನಕ್ಕೂ ಹೆಚ್ಚುತ್ತಾ ಹೋಯಿತು. ಹೋರಾಟವನ್ನು ತೀವ್ರಗೊಳಿಸಲು ರೈತರು ನಿರ್ಧರಿಸಿದ್ದರು. ಬೃಹತ್ ಪ್ರತಿಭಟನೆ ಕೈಗೊಳ್ಳುವ ಕುರಿತು ಮತ್ತಷ್ಟು ಒತ್ತಡಗಳನ್ನು ಮುಖಂಡರ ಮೇಲೆ ಹೇರಲಾಯಿತು. ಸರ್ಕಾರ ಪೂರಕ ಪ್ರತಿಕ್ರಿಯೆ ಕೈಗೊಳ್ಳುವ ಸೂಚನೆ ಕಂಡುಬರದಿದ್ದರಿಂದ ಹೋರಾಟವನ್ನು ಹೆಚ್ಚು ದಿನಗಳ ಕಾಲ ಉಳಿಸುವ ಅವಶ್ಯಕತೆ ನೀಲಗಂಗಯ್ಯ ಪೂಜಾರ್ ಅವರಿಗಿತ್ತು. ಹಾಗಾಗಿ ಅವರು ಬೃಹತ್ ಪ್ರತಿಭಟನೆಯನ್ನು ಕೈಗೊಳ್ಳುವ ಕುರಿತು ವಿರೋಧ ವ್ಯಕ್ತಪಡಿಸಿದರು. ಅಲ್ಲದೆ ಎಂದಿನಂತೆ ಸರದಿ ಪ್ರತಿಭಟನೆಗೆ ಒಲವು ತೋರಿದರು.

ಮೇ ೧೫ ರಂದು ಬಾಬುಸಾಬ್ ಎಲಿಗಾರ, ಚಂದ್ರಪ್ಪ ಚಲುವಾದಿ ಒಳಗೊಂಡಂತೆ ೮ ಜನ ರೈತಕೂಲಿಕಾರ್ಮಿಕರು ಬಂಧಿತರಾದರು. ಮೇ ೧೬ ರಂದು ನಡೆದ ಪ್ರತಿಭಟನೆಯಲ್ಲಿ ೧೪ ಹೋರಾಟಗಾರರು ಬಂಧಿತರಾದರು. ಮೇ ೧೬ ರಂದು ನಡೆದ ಪ್ರತಿಭಟನೆಯಲ್ಲಿ ೧೪ ಹೋರಾಟಗಾರರು ಬಂಧಿತರಾದರು. ಇವರಲ್ಲಿ ಮೂವರನ್ನು ಉಳಿದಂತೆ ಎಲ್ಲ ರೈತರನ್ನು ಬಂಧಿತವಾದ ಸಂಜೆಯೇ ಬಿಡುಗಡೆ ಮಾಡಿದರು. ‘ಮೇ ೭ ರಿಂದ ಪ್ರಾರಂಭವಾದ ರೈತ ಕೂಲಿಕಾರ್ಮಿಕರ ಹೋರಾಟದಲ್ಲಿ ಇದುವರೆಗೂ (ಮೇ ೧೬) ಬಂಧಿತರಾದ ಒಟ್ಟು ರೈತ ಕೂಲಿಕಾರ್ಮಿಕರು ೯೦ ಮಂದಿ. ಇದರಲ್ಲಿ ೩೩ ಜನರ ಮೇಲೆ ಖಟ್ಲೆ ಹಾಕಲಾಯಿತು. ಅಲ್ಲದೆ ದಿನಾಂಕ ೧೭ ಮತ್ತು ೧೮ ರಂದು ಸತ್ಯಾಗ್ರಹವು ನಡೆಯುದಿಲ್ಲವೆಂದು ಧಾರವಾಡ ಜಿಲ್ಲಾ ಸಮಾಜವಾದಿ ಪಕ್ಷವು ಪ್ರಕಟಣೆ ಹೊರಡಿಸಿತು (ವರದಿ : ಸಂಯುಕ್ತ ಕರ್ನಾಟಕ ೧೯-೫-೧೯೫೮).

ಇಷ್ಟರಲ್ಲಾಗಲೇ ರಾಜ್ಯ ರಾಜಕೀಯ ಹಲವು ಬದಲಾವಣೆಗಳು ನಡೆದಿದ್ದವು. ೧೯೫೨ರ ಆರಂಭದ ದಿನಗಳಲ್ಲಿ ರಾಜ್ಯದ ಮುಖ್ಯಮಂತ್ರಿಯಾಗಿ ಶ್ರೀ ಎಸ್. ನಿಜಲಿಂಗಪ್ಪನವರು ಇದ್ದರು. ಇವರು ಒಮ್ಮೆ ಧಾರವಾಡಕ್ಕೆ ಬಂದಿದ್ದರು. ಆ ಸಂದರ್ಭದಲ್ಲಿ ಹೆಬ್ಬಳ್ಳಿಯಿಂದ ರೈತ ಕೂಲಿಕಾರ್ಮಿಕರನ್ನು ಕರೆದುಕೊಂಡು ಹೋಗಿದ್ದ ನೀಲಗಂಗಯ್ಯ ಪೂಜಾರ್, ನಿಜಲಿಂಗಪ್ಪನವರನ್ನು ಭೇಟಿ ಮಾಡಿದ್ದರು. ಹಾಗೂ ರೈತ ಕುಳಿಕಾರ್ಮಿಕರ ಬೇಡಿಕೆಗಳನ್ನು ಈಡೇರಿಸುವಂತೆ ಮನವಿ ಪತ್ರವನ್ನೂ ಸಲ್ಲಿಸಿದ್ದರು. (ಇದು ಜನವರಿ ೧೯೫೮ರಲ್ಲಿ ನಡೆದಿದೆ. ಸ್ಪಷ್ಟ ದಿನಾಂಕ ತಿಳಿದಿಲ್ಲ. ಮಾಹಿತಿ : ಗಂಗಾಧರ ಪದಕಿ) ಇದಕ್ಕೆ ಪೂರಕವಾಗಿ ಸ್ಪಂದಿಸಿದ್ದ ಅಂದಿನ ಮುಖ್ಯಮಂತ್ರಿ ನಿಜಲಿಂಗಪ್ಪ ಬೇಡಿಕೆ ಈಡೇರಿಸುವುದಾಗಿ ಭರವಸೆ ನೀಡಿದ್ದರು. ಆದರೆ ಹೋರಾಟ ತೀವ್ರಗೊಳ್ಳುತ್ತಿರುವ ಈ ಸಂದರ್ಭದಲ್ಲಿ ಅವರು ಮುಖ್ಯಮಂತ್ರಿ ಹುದ್ದೆಗೆ ರಾಜಿನಾಮೆ ನೀಡಿದರು. ಆಗ ನೂತನ ಮುಖ್ಯಮಂತ್ರಿಯಾಗಿ ಬಿ.ಡಿ. ಜತ್ತಿ ನೇಮಕಗೊಂಡರು. ಬಿ.ಡಿ. ಜತ್ತಿ ಮುಖ್ಯಮಂತ್ರಿಯಾಗಿ ನೇಮಕಗೊಂಡ ನಂತರದಲ್ಲಿ ರಾಜ್ಯದ ಕಾನೂನು ಸುವ್ಯವಸ್ಥೆ ಕುರಿತು ಚರ್ಚೆ ಮಾಡುವ ಸಂದರ್ಭದಲ್ಲಿ ಹೆಬ್ಬಳ್ಳಿ ರೈತ ಕೂಲಿಕಾರ್ಮಿಕರ ಹೋರಾಟದ ಕುರಿತು ಪ್ರಸ್ತಾಪ ಬಂತು. ಬಿ.ಡಿ. ಜತ್ತಿಯವರು ಕೂಡಲೇ ಹೆಬ್ಬಳ್ಳಿ ರೈತ ಕೂಲಿಕಾರ್ಮಿಕರ ಹೋರಾಟದ ಮಾಹಿತಿ ಸಂಗ್ರಹಿಸಿದರು. ಈಗಾಗಲೇ ನೀಲಗಂಗಯ್ಯ ಪೂಜಾರ್ ಅವರ ಪರಿಚಯವಿದ್ದ ಅವರು ಹೋರಾಟವನ್ನು ಹಿಂತೆಗೆದುಕೊಳ್ಳುವಂತೆ ಮನವೊಲಿಸಲು ಆಲೋಚಿಸಿದರು. ಧಾರವಾಡ ಜಿಲ್ಲಾಧಿಕಾರಿ ವಿ.ಎಸ್. ಹಿರೇಮಠ ಅವರೊಂದಿಗೆ ದೂರವಾಣಿಯಲ್ಲಿ ಮಾತನಾಡಿ

ನೀಲಗಂಗಯ್ಯ ಪೂಜಾರ್ ಅವರೊಂದಿಗೆ ಮಾತನಾಡುವ ಬಯಕೆ ವ್ಯಕ್ತಪಡಿಸಿದರು. ಕೂಡಲೇ ಜಿಲ್ಲಾಧಿಕಾರಿಗಳು ನೀಲಗಂಗಯ್ಯ ಪೂಜಾರ್ ಅವರ ಮನೆಗೆ ಇಬ್ಬರು ಪೋಲಿಸ್ ಪೇದೆಗಳನ್ನು ಕಳುಹಿಸಿ ಅವರನ್ನು ಕರೆತರಲು ಸೂಚಿಸಿದರು. ಆದರೆ ಅ ಸಂದರ್ಭದಲ್ಲಿ ನೀಲಗಂಗಯ್ಯ ಪೂಜಾರ್ ಅವರು ಹೆಬ್ಬಳ್ಳಿಗೆ ಹೋಗಿದ್ದರು. ಕೂಡಲೇ ಜಿಲ್ಲಾಧಿಕಾರಿಗಳು ವಾಹನವನ್ನು ಕೊಟ್ಟು ಅವರನ್ನು ಕರೆತರಲು ಹೆಬ್ಬಳ್ಳಿಗೆ ಕಳುಹಿಸಿದರು. ಹೆಬ್ಬಳ್ಳಿಯಲ್ಲಿ ಕೂಲಿಕಾರ್ಮಿಕರೊಂದಿಗೆ ಚರ್ಚಿಸುತ್ತಿದ್ದ ನೀಲಗಂಗಯ್ಯ ಪೂಜಾರ್ ಅವರನ್ನು ಬಂಧಿಸಲು, ಪೋಲಿಸರು ಬಂದಿದ್ದಾರೆ ಎಂದು ತಿಳಿದು ಗ್ರಾಮದ ಸಾವಿರಾರು ಜನ ಸೇರಿದರು. ಆ ಗ್ರಾಮಸ್ಥರು ಪೋಲಿಸರೊಂದಿಗೆ ನೀಲಗಂಗಯ್ಯ ಪೂಜಾರ್ ಹೋಗುವುದನ್ನು ವಿರೋಧಿಸಿದರು. ಕೊನೆಗೆ ಧಾರವಾಡ ಜಿಲ್ಲಾಧಿಕಾರಿಗಳು ಜಿಲ್ಲಾ ವರಿಷ್ಠಾಧಿಕಾರಿಗಳನ್ನು ಹೆಬ್ಬಳ್ಳಿಗೆ ಕಳುಹಿಸಿ ಕೊಟ್ಟರು. ಮತ್ತು ಮುಖ್ಯಮಂತ್ರಿಗಳು ತಮ್ಮೊಂದಿಗೆ ಮಾತನಾಡಬೇಕೆಂದು ಬಯಸಿರುವ ವಿಷಯವನ್ನೂ ತಿಳಿಸಿದರು. ಆಗ ಜಿಲ್ಲಾ ವರಿಷ್ಠಾಧಿಕಾರಿಗಳೊಂದಿಗೆ ನೀಲಗಂಗಯ್ಯ ಪೂಜಾರ್ ಅವರು ಜಿಲ್ಲಾಧಿಕಾರಿ ಕಚೇರಿಯಲ್ಲಿ ಮುಖ್ಯಮಂತ್ರಿ ಜತ್ತಿಯವರೊಂದಿಗೆ ದೂರವಾಣಿಯಲ್ಲಿ ಮಾತನಾಡಿದರು. ದೂರವಾಣಿಯಲ್ಲಿಯೇ ನೀಲಗಂಗಯ್ಯ ಪೂಜಾರ್ ಅವರು 'ಜಾಗೀರದಾರ್ ಭೂಮಿಯನ್ನು ೧೯೫೨ರಲ್ಲಿ ಸರ್ಕಾರ (ಮಹಾರಾಷ್ಟ ಸರ್ಕಾರ) ವಶಪಡಿಸಿಕೊಂಡಿದ್ದು, ಈ ಸಂಬಂಧವಾಗಿ ಯಾವುದೇ ರೀತಿಯ ಶಾಸನ ರಚಿಸುವ ಅವಶ್ಯಕತೆ ಇಲ್ಲದೆ, ಆಡಳಿತಾತ್ಮಕ ಪ್ರಯತ್ನಗಳ ಮೂಲಕವೇ ಜಾರಿಗೆ ತರಬಹುದಾದ ಮುಂದಿನ ಕ್ರಮಗಳನ್ನು, ಸೂಚಿಸಿದರು. ಅಲ್ಲದೆ ಹೆಚ್ಚುವರಿ ಭೂಮಿಯನ್ನು ರೈತ ಕೂಲಿಕಾರರಿಗೆ ಹಂಚುವ ಕುರಿತು ಹೇಳಿದರು. ಈಗಾಗಲೇ ಹಂಚಿಕೆಯಾಗಿರುವ ಭೂಮಿಗೆ ಸಂಬಂಧಿಸಿದಂತೆ ಅಧಿಕೃತ ಮಾನ್ಯತಾ ಪತ್ರ (ಪಹಣಿಪತ್ರ) ನೀಡುವ ಕುರಿತು ಬಿ.ಡಿ.ಜತ್ತಿಯವರಲ್ಲಿ ಒತ್ತಾಯಿಸಿದರು. ದೂರವಾಣಿಯಲ್ಲಿ ನಡೆದ ಈ ಸಂಭಾಷಣೆಯಲ್ಲಿಯೇ ಬಿ.ಡಿ.ಜತ್ತಿ ಎಲ್ಲ ಕ್ರಮಗಳನ್ನು ಕೈಗೊಳ್ಳುವ ಬಗ್ಗೆ ಸ್ಪಷ್ಟ ಭರವಸೆ ನೀಡಿದರು. ಈ ಹಿನ್ನಲೆಯಲ್ಲಿ ಪ್ರತಿಭಟನೆಯನ್ನು ಕೈಬಿಡಲು ಮನವಿ ಮಾಡಿಕೊಂಡರು. ಹಾಗು ಪ್ರತಿಭಟನೆಯಲ್ಲಿ ಬಂಧಿತರಾಗಿರುವ ರೈತ ಕೂಲಿಕಾರ್ಮಿಕರ ಮೇಲಿನ ಖಟ್ಲೆ ವಾಪಾಸ್ ತೆಗೆದುಕೊಳ್ಳುವ ಬಗ್ಗೆ ಸ್ಪಷ್ಟ ಭರವಸೆ ನೀಡಿದರು. ಅಲ್ಲದೆ ಆಡಳಿತಾತ್ಮಕವಾಗಿ ಈ ಸಮಸ್ಯೆಯನ್ನು ಬಗೆಹರಿಸುವ ಕುರಿತು ಸಲಹೆಯನ್ನೂ ಪಡೆದರು.

ಬಿ.ಡಿ. ಜತ್ತಿಯವರು ನೀಡಿದ ಪೂರಕ ಪ್ರತಿಕ್ರಿಯೆಯಿಂದಾಗಿ ಭೂರಹಿತ ಕೂಲಿಕಾರ್ಮಿಕರ ಹೋರಾಟವನ್ನು ನಿಲ್ಲಿಸುವ ಕುರಿತು ನೀಲಗಂಗಯ್ಯ ಪೂಜಾರ್ ಮತ್ತು ಗಂಗಾಧರ ಪದಕಿ ನಿರ್ಧರಿಸಿದರು. ಈ ಸಂಬಂಧವಾಗಿ ಅಂತಿಮ ನಿರ್ಧಾರ ಕೈಗೊಳ್ಳುವುದಕ್ಕಾಗಿ ಹೆಬ್ಬಳ್ಳಿಯಲ್ಲಿ ರೈತ ಕೂಲಿಕಾರ್ಮಿಕರ ಸಭೆಯನ್ನೂ (೧೮-೫-೧೯೫೮) ಕರೆದರು. ಈ ಸಭೆಗೆ ಜಿಲ್ಲಾಧಿಕಾರಿ ವಿ.ಎಸ್. ಹಿರೇಮಠರು ಆಗಮಿಸಿದರು. ಸಭೆಯಲ್ಲಿ ಸರ್ಕಾರವು ನಿಮ್ಮ ಎಲ್ಲ ಸಮಸ್ಯೆಗಳನ್ನು ಈಡೇರಿಸಲು ಬದ್ಧವಾಗಿದೆ ಎಂದು ಸರ್ಕಾರದ ನಿಲುವನ್ನು ವಿವರಿಸಿದರು. ಅಲ್ಲದೆ ಅಧಿಕೃತವಾಗಿ ಹೋರಾಟ ನಿಲ್ಲಿಸಿದ ಮರುಕ್ಷಣವೇ ಬಂಧಿತರಾದ ೩೩ ರೈತ ಕೂಲಿಕಾರ್ಮಿಕರ ಮೇಲಿನ ಖಟ್ಲೆಗಳನ್ನು ವಾಪಾಸ್ ಪಡೆಯುದಾಗಿಯೂ ಭರವಸೆ ನೀಡಿದರು.ಈ ಹಿನ್ನಲೆಯಲ್ಲಿ ಹೋರಾಟವನ್ನು ಪೂರ್ಣವಾಗಿ ನಿಲ್ಲಿಸುವ ಕುರಿತು ಅಂತಿಮ ನಿರ್ಣಯವನ್ನು ಕೈಗೊಳ್ಳಲಾಯಿತು. ಅಂದೇ ಧಾರವಾಡ ಜಿಲ್ಲಾ ಸಮಾಜವಾದಿ ಕಾರ್ಯದರ್ಶಿಯಾಗಿದ್ದ ಗಂಗಾಧರ್ ಪದಕಿಯವರು ಪ್ರಕಟಣೆಯನ್ನು ಬಿಡುಗಡೆ ಮಾಡಿದರು. ಅದರಲ್ಲಿ 'ಧಾರವಾಡ ಜಿಲ್ಲಾಧಿಕಾರಿಗಳು ಹೆಬ್ಬಳ್ಳಿಗೆ ಬಂದು ಸರ್ಕಾರದ ನಿಲುವನ್ನು ವಿವರಿಸಿದ್ದಾರೆ. ಹಾಗೂ ಈ ಸ್ಪಷ್ಟೀಕರಣದಿಂದ ಸಮಾಧಾನ ಹೊಂದಿದ ಚಳುವಳಿ ಸಂಘಟಕರು ಸತ್ಯಾಗ್ರಹ ನಿಲ್ಲಿಸಲು ನಿರ್ಧರಿಸಿದ್ದಾರೆ. ಸಾಯಂಕಾಲ ಸಭೆ ಸೇರಿ ಸತ್ಯಾಗ್ರಹ ಹಿಂತೆಗೆದುಕೊಳ್ಳಲು ನಿರ್ಧರಿಸಿದ್ದಾರೆ. ದಿನಾಂಕ ಮೇಲೆ ೭ ರಂದು ಆರಂಭವಾಗಿ ೧೧ ದಿನಗಳವರೆಗೆ ನಡೆದ ಹೋರಾಟದಲ್ಲಿ ಒಟ್ಟು ೯೧ ಮಂದಿ ಬಂಧಿಸಲ್ಪಟ್ಟರು. ಇವರಲ್ಲಿ ೩೩ ಜನರ ಮೇಲೆ ಮಾತ್ರ ಕಟ್ಲೆ ಹಾಕಲಾಗಿದ್ದು ಉಳಿದವರನ್ನು ಬಿಟ್ಟು ಕೊಡಲಾಗಿದೆ. ಸತ್ಯಾಗ್ರಹ ನಿಲ್ಲಿಸಿದ ಬಗ್ಗೆ ಚಳುವಳಿ ಸಂಘಟಕರು ಅಧಿಕೃತವಾಗಿ ತಿಳಿಸಿದ ನಂತರ ಈ ೩೩ ರೈತ ಕೂಲಿಕಾರರ ಮೇಲಿನ ಖಟ್ಲೆಗಳನ್ನು ಸಹ ಹಿಂತೆಗೆದುಕೊಳ್ಳುವುದಾಗಿ ಜಿಲ್ಲಾಧಿಕಾರಿಗಳ ಎದುರು ಭರವಸೆ ಇತ್ತರೆಂದು ಗೊತ್ತಾಗಿದೆ. ಈ ಹಿನ್ನೆಲೆಯಲ್ಲಿ ಸಂಘಟಕರು ಈ ಪ್ರಕಟಣೆಯ ಮೂಲಕವೇ ಪ್ರತಿಭಟನೆ ನಿಲ್ಲಿಸಿರುವುದಾಗಿ ತಿಳಿಸಿದ್ದು, ಇದರಲ್ಲಿ ಸಹಕರಿಸಿದ ಎಲ್ಲ ಕಾರ್ಯಕರ್ತರಿಗೂ ಹಾಗೂ ಇನ್ನಿತರರಿಗೂ ಧನ್ಯವಾದಗಳನ್ನು ಅರ್ಪಿಸಲಾಗಿದೆ ಎಂದು ತಿಳಿಸಿದರು. (ವರದಿ : ೧೯-೫-೧೯೫೮, ಸಂಯುಕ್ತ ಕರ್ನಾಟಕ)

ಇಡೀ ಹೋರಾಟದ ೧೧ ದಿನಗಳಲ್ಲಿ ಹಲವು ರೀತಿಯ ಜನರು ಸಹಾಯ ಹಸ್ತ ಚಾಚಿದರು. ಈಗಾಗಲೇ ಮಾಜಿ ಶಾಸಕರಾಗಿದ್ದ ನೀಲಗಂಗಯ್ಯ ಪೂಜಾರ್ ತಮ್ಮ ವ್ಯಕ್ತಿತ್ವದಿಂದಾಗಿ ಹಲವಾರು ಜನರನ್ನು ಪ್ರಭಾವಿಸಿದ್ದರು. ೧೧ ದಿನಗಳಲ್ಲಿ ಒಮ್ಮೆಯೂ ಪೋಲೀಸ್ ಅಧಿಕಾರಿಗಳು ಪ್ರತಿಭಟನಾಕಾರರ ಮೇಲೆ ಅನುಚಿತವಾಗಿ ವರ್ತಿಸಲಿಲ್ಲ. ಅಲ್ಲದೆ ಹೋರಾಟಕ್ಕೆ ತಮ್ಮ ಅಮೂಲ್ಯ ಸಲಹೆ ಸೂಚನೆಗಳ ಮೂಲಕ ಕೊಡುಗೆಯನ್ನು ನೀಡಿದರು. ಪೋಲೀಸ್ ಇಲಾಖೆಯ ಗುಪ್ತದಳ ವಿಭಾಗದ ಮೂಗಿ ಎಂಬ ಅಧಿಕಾರಿಗಳು ಹೋರಾಟವನ್ನು ಪರೋಕ್ಷವಾಗಿ ಬೆಂಬಲಸಿದ್ದರು. ಪ್ರತಿದಿನ ಸರದಿಯ ಪ್ರಕಾರ ೧೦-೧೫ ರೈತ ಕೂಲಿಕಾರರು ಪ್ರತಿಭಟನೆ ಮಾಡುವುದರಿಂದ ಹೋರಾಟದ ತೀವ್ರತೆಯನ್ನು ಹೆಚ್ಚು ದಿನ ಉಳಿಸಿಕೊಳ್ಳಲು ಸಾಧ್ಯವೆಂದು ಆರಂಭದಲ್ಲಿ ಇವರೇ ಹೇಳಿದ್ದರು. ಅಲ್ಲದೆ ಈ ಹೋರಾಟವು ಸದ್ಯಕ್ಕೆ ಸ್ಥಗಿತಗೊಳ್ಳಲಾರದೆಂದೂ ದಿನದಿನಕ್ಕೂ ತೀವ್ರಗೊಳ್ಳುತ್ತಾ ಸರ್ಕಾರಕ್ಕೆ ಮುಜುಗರ ಉಂಟು ಮಾಡಬಲ್ಲದೆಂದೂ ಬಿ.ಡಿ.ಜತ್ತಿಯವರಿಗೆ ಮಾಹಿತಿ ರವಾನಿಸಿದ್ದರು. ಆ ಮೂಲಕ ಬಿ.ಡಿ.ಜತ್ತಿಯವರು ಹೆಬ್ಬಳ್ಳಿ ರೈತ ಕೂಲಿಕಾರರ ಹೋರಾಟವನ್ನು ಮುಕ್ತಾಯಗೊಳಿಸಲು,ಅವರೆಲ್ಲಾ ಬೇಡಿಕೆಗಳಿಗೆ ಶೀಘ್ರ ಸ್ಪಂದಿಸಲು ಕಾರಣರಾಗಿದ್ದರು. (ಮಾಹಿತಿ : ನೀಲಗಂಗಯ್ಯ ಪೂಜಾರ್) ಪ್ರತಿದಿನವು ಹಲವು ಪೋಲೀಸ್ ಅಧಿಕಾರಿಗಳು ಹೋರಾಟದ ಕುರಿತು ಆಡಳಿತ ವರ್ಗದ ಧೋರಣೆಯನ್ನು ನೀಲಗಂಗಯ್ಯ ಪೂಜಾರ್ ಅವರಿಗೆ ರವಾನಿಸುತ್ತಿದ್ದರು. ಇದು ಹೋರಾಟವು ಹೆಚ್ಚು ಸಂಘರ್ಷಾತ್ಮಕವಾಗಿಸದೆ ತಮ್ಮ ಗುರಿ ಈಡೇರಿಸಿಕೊಳ್ಳಲು ರೈತ ಕೂಲಿಕಾರರಿಗೆ ಸಹಾಯಕವಾಯಿತು. ಕಾಗೋಡು ಚಳುವಳಿಯ ಸಂದರ್ಭದಲ್ಲಿನ ಅಧಿಕಾರಿಗಳ ಧೋರಣೆ ಹಾಗೂ ಸರ್ಕಾರದ ಪಾತ್ರದೊಂದಿಗೆ ಹೆಬ್ಬಳ್ಳಿಯ ಹೋರಾಟವನ್ನು ಹೋಲಿಸಿದರೆ, ಇಲ್ಲಿನ ಹೋರಾಟಗಾರರು ಹೇಗೆ ಈ ಎರಡನ್ನೂತಮ್ಮ ವಿಶ್ವಾಸಕ್ಕೆ ತೆಗೆದುಕೊಂಡು ತಮ್ಮ ಗುರಿ ಈಡೇರಿಸಿಕೊಂಡರು ಎಂಬುದು ಅರಿವಾಗುತ್ತದೆ.

ಈ ಹೋರಾಟಕ್ಕೆ ಸಹಾಯ ಮಾಡಿದ ಮತ್ತೊಬ್ಬ ಮುಖ್ಯ ವ್ಯಕ್ತಿ ಎಂದರೆ ಗುಬ್ಬಿ ರಾಮಣ್ಣ ಎನ್ನುವವರು. ಇವರು ಒಂದು ಚೀಲ ಜೋಳವನ್ನು ಹೋರಾಟಕ್ಕೆ ಕೊಡುಗೆ ಯಾಗಿ ನೀಡಿದರು. ಈ ಜೋಳದ ಚೀಲವನ್ನು ೨೦ ರೂಪಾಯಿಗೆ ಮಾರಾಟ ಮಾಡಿದ ಹೋರಾಟಗಾರರು, ಅದರಲ್ಲಿ ತಮಗೆ ಬೇಕಾದ ಅವಶ್ಯಕ ಖರ್ಚುಗಳನ್ನು ನಿಭಾಯಿಸಿದರು. ಇದಲ್ಲದೆ ನೇಕಾರ ಜಾತಿಯ ಪರಪ್ಪ ನವಲೂರ ಎನ್ನುವವರು ಹೋರಾಟಕ್ಕೆ ೧೦ ರೂ.ಗಳನ್ನು ನೀಡಿದರು. ಒಟ್ಟು ಹೋರಾಟಕ್ಕೆ ಖರ್ಚು ಮಾಡಿದ್ದು ೮೦ ರೂಪಾಯಿಗಳು (ಮಾಹಿತಿ : ನೀಲಗಂಗಯ್ಯ ಪೂಜಾರ್) ಇದರಲ್ಲಿ ಮನವಿ ಪತ್ರಗಳನ್ನು ಬರೆಯಲು ಕಾಗದ-ಪೆನ್ನು ಬಿಟ್ಟರೆ ಮತ್ತೊಂದು ವಿಶೇಷ ಖರ್ಚು ಇರಲಿಲ್ಲ. ಗೋಡೆ ಬರಹಗಳಾಗಲಿ, ಯಾವುದೇ ಕರಪತ್ರಗಳನ್ನಾಗಲಿ ಈ ಹೋರಾಟದ ಸಂದರ್ಭದಲ್ಲಿ ಬಳಸಿಕೊಂಡಿಲ್ಲ. ೮೦ ರೂಪಾಯಿಗಳಲ್ಲಿ ಉಳಿದ ಹಣವನ್ನು ಹೋರಾಟ ಮುಗಿದ ನಂತರ ನಡೆದ ವಿಜಯೋತ್ಸವ ಕಾರ್ಯಕ್ರಮದಲ್ಲಿ ಖರ್ಚು ಮಾಡಲಾಯಿತು.

ಆಗಿನ ಸಂದರ್ಭದಲ್ಲಿಯಾದರೂ ಹೋರಾಟಗಾರರ ಮುಖಂಡರಾಗಿದ್ದ ಗಂಗಾಧರ್ ಪದಕಿ ಮತ್ತು ನೀಲಗಂಗಯ್ಯ ಪೂಜಾರ್ ಅವರ ದಿನಚರಿ ಅತ್ಯಂತ ಸರಳ ಹಾಗೂ ಯಾವುದೇ ಖರ್ಚಿಲ್ಲದ್ದಾಗಿತ್ತು. ಹೆಬ್ಬಳ್ಳಿಗೆ ಹೋಗಬೇಕಾದರೆ ಸೈಕಲ್ ಇಲ್ಲವೆ ಯವುದಾದರೂ ಎತ್ತಿನ ಬಂಡಿಗಳಲ್ಲಿ ಅವರು ಹೊರಡುತ್ತಿದ್ದರು. ಬರುವಾಗಲೂ ಅಷ್ಟೆ ಯಾರಾದರೂ ಕೃಷಿಕರು ಬಂಡಿಗಳಲ್ಲಿ ಧಾರವಾಡ ತಲುಪಿಸುತ್ತಿದ್ದರು. ಕೆಲವೊಮ್ಮೆ ಕಾಲ್ನಡಿಗೆ ಪ್ರಯಾಣವನ್ನೂ ಮಾಡುದ್ದುಂಟು. (ಮಾಹಿತಿ : ಗಂಗಾಧರ್ ಪದಕಿ) ಪ್ರತಿದಿನ ಹೆಬ್ಬಳ್ಳಿಗೆ ಬಂದಾಕ್ಷಣ ಆ ದಿನ ಸರದಿಯಲ್ಲಿ ಪ್ರತಿಭಟನೆ ಮಾಡುವ ಹೋರಾಟಗಾರರಿಗೆ ಸಲಹೆಗಳನ್ನು ನೀಡುತ್ತಿದ್ದರು. ಸಂಜೆಯ ಸಭೆಯಲ್ಲಿ ಆ ದಿನದ ಕಾರ್ಯಕ್ರಮಗಳ ಪುನರಾವಲೋಕನ ಹಾಗೂ ಮರುದಿನ ಕೈಗೊಳ್ಳಬೇಕಾದ ಹೋರಾಟದ ಬಗ್ಗೆ ಚರ್ಚೆ ಮಾಡುತ್ತಿದ್ದರು. ಆಗ ಹೆಬ್ಬಳ್ಳಿಯಲ್ಲಿಯೇ ಊಟ ಮಾಡುವ ಪ್ರಸಂಗ ಬರುತ್ತಿತ್ತು. ಹಾಗೆ ಊಟ ಮಾಡಬೇಕಾದಲ್ಲಿ ಹೋರಾಟದ ಕೆಲವು ಸದಸ್ಯರು ಗ್ರಾಮದಲ್ಲಿ ತಿರುಗಿ ರೊಟ್ಟಿ ಭಿಕ್ಷಾ ಮಾಡಿಕೊಂಡು ತರುತ್ತಿದ್ದರು. ಹಾಗೆ ತಂದ ರೊಟ್ಟಿಗೆ ಹೆಚ್ಚೆಂದರೆ ಮೆಣಸಿನ ಖಾರ ಹಾಗೂ ಎಣ್ಣೆಯನ್ನು ಹಾಕಿಕೊಂಡು ತಿನ್ನುತ್ತಿದ್ದರು.

ಒಂದು ಕ್ಷೇತ್ರದ ಶಾಸಕರಾಗಿದ್ದ (ರೋಣಕ್ಷೇತ್ರ) ನೀಲಗಂಗಯ್ಯ ಪೂಜಾರ್ ಹಾಗೂ ಪ್ರಸಿದ್ಧ ವಕೀಲರಾಗಿದ್ದ ಮತ್ತು ಧಾರವಾಡ ಜಿಲ್ಲೆಯ ಸಮಾಜವಾದಿ ಪಕ್ಷದ ಕಾರ್ಯದರ್ಶಿಯಾಗಿದ್ದ ಗಂಗಾಧರ್ ಪದಕಿಯವರು ಇಷ್ಟೊಂದು ಸರಳವಾಗಿ ಬದುಕುತ್ತಿದ್ದುದು, ಅವರು ನಂಬಿದ

ಜನಪರ ಕಾಳಜಿಗೆ, ಪಕ್ಷದ ಸಿದ್ಧಾಂತಗಳಿಗೆ ಅವರಿಗಿದ್ದ ಬದ್ಧತೆಗೆ ಸಾಕ್ಷಿಯಾಗಿದೆ. ಇಂದಿನ ಮಾಜಿ ಶಾಸಕರು ಬದುಕುತ್ತಿರುವ ರೀತಿ ಹಾಗೂ 'ಜನಪರ'ವೆಂದು ಕರೆಸಿಕೊಳ್ಳುವ ಹೋರಾಟಗಳಿಗೆ ಪಕ್ಷಗಳು ಖರ್ಚು ಮಾಡುತ್ತಿರುವುದನ್ನು ಗಮನಿಸಿದರೆ ಹೆಬ್ಬಳ್ಳಿ ಹೋರಾಟದ ಮುಖಂಡರು ಸರಳತೆ ಹಾಗೂ ಬದ್ಧತೆ ಎಷ್ಟಿತ್ತೆಂಬುದು ಅರಿವಾಗುತ್ತದೆ.

ಇಂತಹದ್ದೊಂದು ಹೋರಾಟಕ್ಕೆ ಜಾಗೀರದಾರ ಮನೆತನದವರು ಹಿಂಸಾಚಾರ ನಡೆಸುವುದಾಗಲಿ, ಬಹಿರಂಗವಾಗಿ ವಿರೋಧ ವ್ಯಕ್ತಪಡಿಸುವ ಪ್ರಯತ್ನವಾಗಲಿ ಮಾಡಲಿಲ್ಲ. ೧೯೫೨ರಲ್ಲಿಯೇ ತಮ್ಮೆಲ್ಲ ಭೂಮಿಯನ್ನು ಸರ್ಕಾರದ ವಶಕ್ಕೆ ಒಪ್ಪಿಸಿದ್ದ ಜಾಗೀರದಾರ ಮನೆತನದವರು ಹೋರಾಟದಲ್ಲಿ ಪರ-ವಿರೋಧವಾಗದೇ ತಟಸ್ಥರಾಗಿದ್ದರು. ೧೯೫೮ ರಲ್ಲಾಗಲೇ ಕಳೆದುಕೊಂಡ ಜಾಗೀರು ಭೂಮಿ ಮರಳಿ ಬರುವುದಿಲ್ಲ ಎನ್ನುವುದು ಅವರಿಗೆ ಖಾತ್ರಿಯಾಗಿತ್ತು. ಅಲ್ಲದೆ ಗ್ರಾಮದ ರೈತರು ಜಾಗೀರು ಭೂಮಿ ಉಳುತ್ತಿರುವುದಕ್ಕಾಗಿ ಕಂದಾಯ ಕೊಡುವುದನ್ನು ಬಿಟ್ಟು ಆರು ವರ್ಷಗಳೇ ಆಗುತ್ತಾ ಬಂದಿದ್ದವು. ಈ ಹಿನ್ನೆಲೆಯಲ್ಲಿ ಹೋರಾಟವನ್ನು ವಿರೋಧಿಸುವ ಪ್ರಯತ್ನವನ್ನೇ ಮಾಡಲಿಲ್ಲ. ಅದರಲ್ಲೂ ಅವರು ಜಾತಿಯಲ್ಲಿ ಬ್ರಾಹ್ಮಣರಾಗಿದ್ದರಿಂದ ಜನಸಾಮಾನ್ಯರೊಂದಿಗೆ ಪ್ರೀತಿ ವಿಶ್ವಾಸದಿಂದ ಬೆರೆಯದೇ ಒಂದು ರೀತಿಯಲ್ಲಿ ಅಂತರವನ್ನು ಕಾಯ್ದುಕೊಂಡು ಬಂದಿದ್ದರು. ಜಾತಿ ಹಾಗೂ ಅಂತಸ್ತು ಅವರು ಜನರ ವಿಶ್ವಾಸಗಳಿಸಿಕೊಳ್ಳಲು ಅಡ್ಡಿಯಾಗಿದ್ದವು. ಈ ಹಿನ್ನೆಲೆಯಲ್ಲಿ ಜಾಗೀರುದಾರರು ಹೋರಾಟವ ವಿರೋಧಿಸಿದರೂ ಅದನ್ನು ಗಣನೆಗೆ ತೆಗೆದುಕೊಳ್ಳಲಾಗಲಿ, ಮಾನ್ಯತೆ ನೀಡಲಾಗಲಿ ಯಾರೂ ಸಿದ್ಧರಿರಲಿಲ್ಲ. ಹೀಗಾಗಿ ತಮ್ಮ ಆಪ್ತರೊಡನೆ ಮಾತ್ರ ಜಾಗೀರ್ ಮನೆತನದವರು ಈ ರೈತ ಕೂಲಿಕಾರರ ಕುರಿತು ಆಕ್ಷೇಪಣೆ ವ್ಯಕ್ತಪಡಿಸುತ್ತಿದ್ದರೇ ವಿನಃ, ಬಹಿರಂಗವಾಗಿ ವಿರೋಧ ವ್ಯಕ್ತಪಡಿಸುತ್ತಿರಲಿಲ್ಲ. ಜಾಗೀರ ಮನೆತನದವರೇ ಈ ಹೋರಾಟದ ಬಗ್ಗೆ ನಿರ್ಲಿಪ್ತರಾಗಿದ್ದುದು ಹೋರಾಟವು ಹೆಚ್ಚು ಶಾಂತಿಯುತವಾಗಿ ನಡೆಯಲು ಸಹಕಾರಿಯಾಯಿತು. ರಾಜಕೀಯವಾಗಿಯೂ ಸಹಿತ ಈ ಕುಟುಂಬದಲ್ಲಿ ಯಾರೊಬ್ಬರೂ ಪ್ರಬಲರಾಗಿರಲಿಲ್ಲ. ಏಕೆಂದರೆ ಈ ಮನೆತನಗಳ ಯಾರೊಬ್ಬರೂ ಜನನಾಯಕರಾಗಿಯೋ, ಚುನಾವಣಾ ಕಣದಲ್ಲಿ ಧುಮುಕಿ ಪಕ್ಷಗಳ ಮುಖಂಡರಾಗಿಯೋ ರೂಪುಗೊಂಡಿರಲಿಲ್ಲ. ಈ ಹಿನ್ನೆಲೆಯಲ್ಲಿ ಆಡಳಿತಾತ್ಮಕವಾಗಿಯಾಗಲಿ, ರಾಜಕೀಯ ತಂತ್ರಗಾರಿಕೆಯ ಮೂಲಕವಾಗಲಿ ಇಲ್ಲವೇ ಹಿಂಸೆಯ ಮೂಲಕವಾಗಲಿ ರೈತ ಕೂಲಿಕಾರ್ಮಿಕರ ಹೋರಾಟವನ್ನು ವಿಫಲಗೊಳಿಸುವ ಪ್ರಯತ್ನ ಮಾಡಲಿಲ್ಲ.

ಹೋರಾಟದ ಸಂದರ್ಭದಲ್ಲಿ ಸಂಯುಕ್ತ ಕರ್ನಾಟಕ ಹಾಗೂ ಪಾಟೀಲ್ ಪುಟ್ಟಪ್ಪನವರ 'ಪ್ರಪಂಚ' ಪತ್ರಿಕೆ ಧಾರವಾಡ ಭಾಗದಲ್ಲಿ ಅತ್ಯಂತ ಜನಪ್ರಿಯವಾಗಿದ್ದವು. ಪಾಪು ಅವರು ವೈಯಕ್ತಿಕವಾಗಿ ಗಂಗಾಧರ್ ಪದಕಿಯವರಿಗೆ ಉತ್ತಮ ಗೆಳೆಯರಾಗಿದ್ದರು. ಆದರೂ ಸಹಿತ ಈ ಸಮಾಜವಾದಿ ಹೋರಾಟದ ಬಗ್ಗೆಯಾಗಲಿ, ಜಾಗೀರದಾರ ಭೂಮಿಯ ಹಂಚಿಕೆಯ ಕುರಿತಾಗಲಿ ಅವರು ಆ ಸಂದರ್ಭದಲ್ಲಿ ಯಾವುದೇ ವರದಿ, ವಿಶೇಷ ಲೇಖನ ಪ್ರಕಟಿಸಿಲ್ಲ. ಕಾಗೋಡು ಚಳುವಳಿಯ ಸಂದರ್ಭದಲ್ಲಿ ಪತ್ರಿಕಾ ವರದಿಗಳು, ರೇಡಿಯೋ ವಾರ್ತೆಗಳು, ಹೋರಾಟದ ಮೇಲೆ ಸಾಕಷ್ಟು ಪ್ರಭಾವ ಬೀರಿದ್ದವು. ಆದರೆ ಹೆಬ್ಬಳ್ಳಿ ರೈತ ಕೂಲಿಕಾರ್ಮಿಕರ ಹೋರಾಟದ ಬಗ್ಗೆ ಮಾಧ್ಯಮಗಳಲ್ಲಿ ಯಾವುದೇ ಲೇಖನ ಅಥವಾ ಪ್ರಭಾವ ಬೀರುವ ರೀತಿಯಲ್ಲಿ ವಿಶೇಷ ವರದಿ ಪ್ರಕಟವಾಗಲಿಲ್ಲ. ಇದೊಂದು ಭೂರಹಿತ ರೈತ ಕೂಲಿಕಾರ್ಮಿಕರಿಗೆ ಸಂಬಧಿಸಿದ ಸಮಾಜವಾದಿಗಳ ಸದ್ದಿಲ್ಲದ ಹೋರಾಟವಾಗಿತ್ತು. ಸಮಾಜವಾದಿ ಮುಖಂಡರು ಕೂಡ ಮಾಧ್ಯಮಗಳನ್ನು ಬಳಸಿಕೊಳ್ಳಬೇಕೆಂಬ ಬಗ್ಗೆ ಆಸಕ್ತಿಯನ್ನೇ ಹೊಂದಿರಲಿಲ್ಲ.

ಕಾಗೋಡು ಚಳುವಳಿಯ ಸಂದರ್ಭದಲ್ಲಿ ನಾಡಿನ ಪತ್ರಿಕೆಗಳು (ಅದರಲ್ಲೂ ಪ್ರಜಾವಾಣಿ) ಹೋರಾಟದ ಪರ-ವಿರೋಧವಾಗಿ ಕಾರ್ಯ ನಿರ್ವಹಿಸುತ್ತಾ ಅದಕ್ಕೊಂದು ರಾಜ್ಯವ್ಯಾಪಿ ಚರ್ಚೆಯನ್ನು ರೂಪಿಸಿತ್ತು. ಇಮ್ತಹ ಅವಕಾಶ ಹೆಬ್ಬಳ್ಳಿ ರೈತಕೂಲಿಕಾರರ ಹೋರಾಟದ ಸಂದರ್ಭದಲ್ಲಿ 'ಸಂಯುಕ್ತ ಕರ್ನಾಟಕ' ದಿನಪತ್ರಿಕೆಗೆ ಒದಗಿಬಂದಿತ್ತು. ಆದರೆ ವರದಿಯ ವಿಷಯ ಮತ್ತು ನಿರೂಪಣೆ ಅತ್ಯಂತ ಚಿಕ್ಕದಾಗಿದ್ದರಿಂದ ನಾಡಿನ ಪ್ರಜ್ಞಾವಂತರನ್ನು ಅದು ಸೆಳೆಯಲಿಲ್ಲ. ತನ್ನಲ್ಲಿ ವರದಿಗಳಲ್ಲೂ ಹೋರಾಟದ ಪರವಾಗಿಯಾಗಲಿ ಇಲ್ಲವೆ ವಿರೋಧಿಯಾಗಿಯಾಗಲಿ ಕಾರ್ಯ ನಿರ್ವಹಿಸದೆ ಅದು ನಿರ್ಲಿಪ್ತತೆ ವಹಿಸಿತ್ತು.

ಪ್ರಶ್ನೆ ಏನೆಂದರೆ ಒಂದು ಸಂಗತಿಯ ಕುರಿತು ಅದರಲ್ಲೂ ಬಡ ರೈತ ಕೂಲಿಕಾರರ ಹೋರಾಟದ ಕುರಿತು ನಿರ್ಲಿಪ್ತವಾಗಿ ವರದಿ ಮಾಡುವುದೆ ಪತ್ರಿಕಾ ಧರ್ಮವೇ? ಮಾಧ್ಯಮಗಳಿಗೆ ಸಾಮಾಜಿಕ ಜವಾಬ್ದಾರಿಗಳಿಲ್ಲವೇ? ಏಕೆಂದರೆ 'ಪ್ರಪಂಚ' ಹೋರಾಟದ ಬಗೆಗೆ ಕಿವುಡಾಗಿ ಅಥವಾ ಕುರುಡಾಗಿ ವರ್ತಿಸಿದರೆ 'ಸಂಯುಕ್ತ ಕರ್ನಾಟಕ' ಅದೊಂದು ಸಾಮಾನ್ಯ ಸುದ್ದಿ ಎನ್ನುವಂತೆ ಬಿಂಬಿಸಿದೆ. ಹೆಬ್ಬಳ್ಳಿ ರೈತಕೂಲಿಕಾರರ ಹೋರಾಟಕ್ಕೆ ಸಂಬಂಧಿಸಿದಂತೆ ಈ ಎರಡೂ ಪತ್ರಿಕೆಗಳ ವರ್ತನೆ ಆಶ್ಚರ್ಯ ಹುಟ್ಟಿಸುತ್ತದೆ.

ಈ ಎಲ್ಲವುಗಳ ಮಧ್ಯೆಯೂ ರೈತ ಕೂಲಿಕಾರ್ಮಿಕರು ಹಾಗೂ ಸಮಾಜವಾದಿ ಮುಖಂಡರು ರಾಜ್ಯ ಸರ್ಕಾರದಿಂದ ಭೂ ಹಂಚಿಕೆ ಕುರಿತು ಸ್ಪಷ್ಟ ಭರವಸೆಯನ್ನು ಪಡೆದಿದ್ದರು. ಈ ಹಿನ್ನೆಲೆಯಲ್ಲಿ ನೀಲಗಂಗಯ್ಯ ಪೂಜಾರ್ ಅವರು ಸಮಾಜವಾದಿ ಪಕ್ಷದ ಹಿರಿಯ ಮುಖಂಡರನ್ನು ವಿಜಯೋತ್ಸವ ಕಾರ್ಯಕ್ರಮಕ್ಕೆ ತರಲು ಸಮಾಜವಾದಿ ಮುಖಂಡರಲ್ಲಿ ಅತ್ಯಂತ ಪ್ರಖ್ಯಾತರಾಗಿದ್ದವರೆಂದರೆ ರಾಮಮನೋಹರ ಲೋಹಿಯಾ, ಜಯಪ್ರಕಾಶ ನಾರಾಯಣ್ ಮತ್ತು ಮಧುಲಿಮಯೆ. ಇವರಲ್ಲಿ ಲೋಹಿಯಾ ಮತ್ತು ಮಧಿಲಿಮಯೆ ಕೆಲಸದ ಒತ್ತಡಗಳ ಮಧ್ಯೆ ಹೆಬ್ಬಳ್ಳಿಗೆ ಬರಲು ನಿರಾಕರಿಸಿದರು. ಈ ಸಂಬಂಧವಾಗಿ ಗಂಗಾಧರ ಪದಕಿಯವರು ಮಧುಲಿಮಯೆ ಪತ್ರ ಬರೆದರು. ರೈತಕೂಲಿಕಾರ್ಮಿಕರ ಹೋರಾಟದ ವಿಜಯೋತ್ಸವ ಕಾರ್ಯಕ್ರಮಕ್ಕೆ ಮಧುಲಿಮೆ ಬರಲು ಸಿದ್ಧರಾದರು. ಆಗಸ್ಟ್ ತಿಂಗಳಲ್ಲಿ (ದಿನಾಂಕ ತಿಳಿದಿರುವುದಿಲ್ಲ) ಬಾಂಬೆಯಿಂದ ಹುಬ್ಬಳ್ಳಿಗೆ ರೈಲಿನಲ್ಲಿ ಬರುವ ಸೂಚನೆಯನ್ನು ಮಧುಲಿಮಯೆ ಅವರಿಗೆ ನೀಡಲಾಯಿತು. ಅದರಂತೆಯೆ ನಿಗಧಿತ ದಿನದಂದು ಸಮಾಜವಾದಿ ಪಕ್ಷದ ಹಿರಿಯ ನಾಯಕರಾದ ಮಧುಲಿಮಯೆ ರಾತ್ರಿ ಹುಬ್ಬಳ್ಳಿಗೆ ಬಂದರು. ಅವರನ್ನು ಕರೆದು ತರಲು ನೀಲಗಂಗಯ್ಯ ಪೂಜಾರ್ ಅವರು ಮೊದಲೇ ಹೋಗಿ ಹುಬ್ಬಳ್ಳಿಯ ರೈಲು ನಿಲ್ದಾಣದಲ್ಲಿ ಮಲಗಿದ್ದರು. ರಾತ್ರಿ ಮೂರುಗಂಟೆಯ ಸುಮಾರಿಗೆ ಮಧುಲಿಮಯೆ ರೈಲಿನಲ್ಲಿ ಬಂದಿಳಿದರು. ಅವರೊಂದಿಗೆ ಯಾವುದೇ ಸಮಾಜವಾದಿ ಕಾರ್ಯಕರ್ತರಾಗಲಿ, ಗೆಳೆಯರಾಗಲಿ ಇರಲಿಲ್ಲ. ಮತ್ತು ಆ ರಾತ್ರಿ ನೀಲಗಂಗಯ್ಯ ಪೂಜಾರ್ ಅವರೊಂದಿಗೂ ಯಾವುದೇ ಕಾರ್ಯಕರ್ತರಾಗಲಿ, ಆಪ್ತರಾಗಲಿ ಇರಲಿಲ್ಲ. ಅಂದು ರಾತ್ರಿ ಮಧುಲಿಮೆಯವರನ್ನು ಕಾರಿನಲ್ಲಿ ಹುಬ್ಬಳ್ಳಿಯಿಂದ ಧಾರವಾಡಕ್ಕೆ ಕರೆತರಲಾಯಿತು. ಮತ್ತು ಪಕ್ಷದ ಕಚೇರಿಯಲ್ಲಿಯೇ ವಿಶ್ರಾಂತಿಗಾಗಿ ಉಳಿಸಲಾಯಿತು.

ಬೆಳಿಗ್ಗೆ ೧೦ ಗಂಟೆ ಸುಮಾರಿಗೆ ಹೆಬ್ಬಳ್ಳೀಯಲ್ಲಿ ಮಧುಲಿಮಯೆಗೆ ಭವ್ಯ ಮೆರವಣಿಗೆ ಮಾಡಲಾಯಿತು. ಅಂದು ಸುಮಾರು ನಾಲ್ಕರಿಂದ ಐದು ಸಾವಿರ ಜನರು ಸಭೆಯಲ್ಲಿ ಸೇರಿದ್ದರು. ಅಂದು ರೈತ ಕೂಲಿಕಾರ್ಮಿಕರನ್ನು, ಸಾರ್ವಜನಿಕರನ್ನು ಉದ್ದೇಶಿಸಿ ಮಧುಲಿಮಯೆ ಹಿಂದಿಯಲ್ಲಿ ಭಾಷಣ ಮಾಡಿದರು. ಈ ಹಿಂದಿ ಭಾಷಣವನ್ನು ಬಳಿಕ ನೀಲಗಂಗಯ್ಯ ಪೂಜಾರ್ ಅವರು ಕನ್ನಡಕ್ಕೆ ಭಾಷಾಂತರಿಸಿ ಹೇಳಿದರು. ಮಧುಲಿಮಯೆ ತಮ್ಮ ಭಾಷಣದಲ್ಲಿ ಸಮಾಜವಾದಿ ಚಳುವಳಿ, ಕರ್ನಾಟಕದಲ್ಲಿ ಪಕ್ಷದ ಬೆಳವಣಿಗೆ ಹಾಗೂ ರೈತರ ಸಮಸ್ಯಗಳ ಕುರಿತು ಪ್ರಸ್ತಾಪಿಸಿದರು. ಅಂದಿನ ಸಭೆಯ ಬಳಿಕ ರೈತರೇ ಸ್ವಯಂ ಸ್ಫೂರ್ತಿಯಿಂದ ಹಣಸಂಗ್ರಹಿಸಿ ಅಡುಗೆ ಮಾಡಿಸಿದ್ದರು. ನಾಲ್ಕರಿಂದ ಐದು ಸಾವಿರ ಜನ ಅಂದು ಸಿಹಿ ಊಟವನ್ನು (ಕರಿಗಡುಬು ಮತ್ತು ತುಪ್ಪ) ಊಟ ಮಾಡಿದರೆಂದು ಹೇಳಲಾಗುತ್ತದೆ. (ಮಾಹಿತಿ : ನೀಲಗಂಗಯ್ಯ ಪೂಜಾರ್) ಅಂದು ಕಾರ್ಯಕ್ರಮ ಮುಗಿಸಿದ ಮಧುಲಿಮಯೆ ಸಂಜೆಯೇ ಮುಂಬೈಗೆ ಪ್ರಯಾಣ ಬೆಳೆಸಿದರು.

ಇಡೀ ಹೋರಾಟದಲ್ಲಿ ಗಮನಿಸಬೇಕಾದ ಮತ್ತೊಂದು ಮುಖ್ಯ ಸಂಗತಿಯೆಂದರೆ ಕರ್ನಾಟಕದ ಇನ್ನಿತರ ಸಮಾಜವಾದಿ ಮುಖಂಡರ ವರ್ತನೆ. ಸಾವಿರಾರು ಎಕರೆ ಭೂಮಿಯ ಹಂಚಿಕೆ ಮತ್ತು ಅದಕ್ಕೆ ಅಧಿಕೃತ ಮಾನ್ಯತಾಪತ್ರ ಪಡೆಯುವ ಈ ಹೋರಾಟವನ್ನು ಇತರ ಸಮಾಜವಾದಿ ಮುಖಂಡರು ಗಮನಿಸಲೇ ಇಲ್ಲ. ಅಗಲೇ ತಮ್ಮ ವರ್ತನೆಗಳ ಮೂಲಕ ಸಮಾಜವಾದಿ ಮುಖಂಡರೆನಿಸಿಕೊಂಡವರು ಹಲವು ಮಂದಿ ಇದ್ದರು. ಅದರಲ್ಲೂ ಶಾಂತವೇರಿ ಗೌಪಾಲಗೌಡರು (ಶಿವಮೊಗ್ಗ), ಅಬ್ಬಿಗೇರಿ ವಿರೂಪಾಕ್ಷಪ್ಪ (ರೋಣ) ಅಮ್ಮೆಂಬಳ ಬಾಳಪ್ಪ (ಅಂಕೋಲ), ಸದಾಶಿವ ಕಾರಂತ (ಮುಂಬೈ), ಕೆ.ಜಿ.ಮಹೇಶ್ವರಪ್ಪ (ದಾವಣಗೆರೆ), ಕಾಶಿನಾಥ ಬೇಲೂರೆ (ಬೀದರ್), ಪೊನ್ನಮ್ಮಾಳ್(ಶಿವಮೊಗ್ಗ) ಮುಂತಾದವರು ಸಮಾಜವಾದಿ ಚಳುವಳಿಗಳಲ್ಲಿನ ಹೋರಾಟಗಳು ಅವರಿಗೆ ಜನಸಾಮಾನ್ಯರಲ್ಲಿ ವರ್ಚಸ್ಸನ್ನು ಬೆಳೆಸಿದ್ದವು. ಆದರೆ ಈ ನಾಯಕರು ಇಂತಹುದೇ ಜನಸಾಮಾನ್ಯರ ಹೋರಾಟವಾಗಿದ್ದ ಹೆಬ್ಬಳ್ಳಿ ರೈತ ಕೂಲಿಕಾರ್ಮಿಕರಹೋರಾಟದ ಕುರಿತು ಮೌನವಹಿಸಿದ್ದರೆಕೇ? ಹೋರಾಟದಲ್ಲಿ ಪಾಲ್ಗೊಳ್ಳದಿದ್ದರೂ ಅದಕ್ಕೊಂದು ಬೆಂಬಲ ವ್ಯಕ್ತಪಡಿಸಲಿಲ್ಲ ಏಕೆ? ಮಧುಮಲಿಮಯೆಂತಹ

ಸಮಾಜವಾದಿ ಪಕ್ಷದ ರಾಷ್ಟ್ರೀಯ ಮುಖಂಡರು ಹೆಬ್ಬಳ್ಳಿಯ ವಿಜೋಯೋತ್ಸವ ಕಾರ್ಯಕ್ರಮಕ್ಕೆ ಆಗಮಿಸಿದ್ದರೂ ರಾಜ್ಯದ ಇತರ ನಾಯಕರು ಪಾಲ್ಗೊಳ್ಳಲಿಲ್ಲ ಏಕೆ? ಇವರೆಲ್ಲರ ಮಧ್ಯೆ ಸಂಪರ್ಕದ ಕೊರತೆ ಇತ್ತೇ? ಸಮಾಜವಾದಿ ಸಿದ್ಧಾಂತ ಇವರಲ್ಲಿ ರೂಪಿಸಿದ ವ್ಯಕ್ತಿತ್ವ ಎಂತಹದು? ಈ ಪ್ರಶ್ನೆಗಳಿಗೆ ಉತ್ತರಗಳನ್ನು ಹುಡುಕುತ್ತಾ ಹೋದರೆ ಕೇವಲ ಹೆಬ್ಬಳ್ಳಿ ರೈತ ಕೂಲಿಕಾರ್ಮಿಕರ ಹೋರಾಟಕ್ಕೆ ಸಂಬಂಧಿಸಿದ ಸಮಾಜವಾದಿಗಳ ನಿಲುವು ಮಾತ್ರ ಬಹಿರಂಗವಾಗದೆ, ಒಟ್ಟು ಕರ್ನಾಟಕದ ಸಮಾಜವಾದಿಗಳು ಇದ್ದ ಪರಿಸ್ಥಿತಿ, ಆ ಪಕ್ಷ ರಾಜ್ಯದಲ್ಲಿ ಬೆಳವಣಿಗೆ ಹೊಂದಲು ಇರುವ ಅಡ್ಡಿ ಆತಂಕಗಳು ಏನೆಂಬುದು ತಿಳಿದುಬರುತ್ತದೆ.

ಕರ್ನಾಟಕದ ಸಮಾಜವಾದಿಗಳು ಸಾಮೂಹಿಕವಾಗಿ ಹೋರಾಟ ಕೈಗೊಂಡಿದ್ದೇ ಇಲ್ಲ. ಸಮಾಜವಾದಿಗಳ ಹೋರಾಟಗಳೇನಿದ್ದರೂ ವೈಯಕ್ತಿಕ ವರ್ಚಸ್ಸನ್ನು ಅಥವಾ ಪಕ್ಷಕಟ್ಟುವ ಭಾಗವಾಗಿರಲಿಲ್ಲ. ಸಮಾಜವಾದಿಗಳ ಪ್ರಮುಖ ಹೋರಾಟವೆನಿಸಿಕೊಂಡಿದ್ದ ಕಾಗೋಡು ಚಳುವಳಿಯಲ್ಲಾಗಲಿ ಶಿವಮೊಗ್ಗದ ಸಮಾಜವಾದಿಗಳೇ ಪ್ರಮುಖವಾಗಿದ್ದರು. ನೀಲಗಂಗಯ್ಯ ಪೂಜಾರ್, ಸದಾಶಿವ ಕಾರಂತ, ಕಾಶಿನಾಥ ಬೇಲೂರೆ, ವಿರೂಪಾಕ್ಷಪ್ಪ ಅಬ್ಬಿಗೇರಿ ಮುಂತಾದವರು ಈ ಹೋರಾಟದಲ್ಲಿ ಭಾಗವಹಿಸಲೇ ಇಲ್ಲ. ಹಾಗೆಯೇ ಕಾಶಿನಾಥ ಬೇಲೂರೆ ಅವರು ಬೀದರ್ ಭಾಗದಲ್ಲಿ ಸಾವಿರಾರು ಎಕರೆ ಜಮೀನ್ದಾರರಾದ ಗೇಣಿ ಮನೆತನದ ವಿರುದ್ಧ ಹೋರಾಟ ಮಾಡಿದ್ದರು. ಆದರೆ ಈ ಹೋರಾಟದಲ್ಲಿ ಪಾಲ್ಗೊಳ್ಳುವುದಾಗಲಿ ಬೆಂಬಲಿಸುವುದಾಗಲಿ ಯಾವ ಸಮಾಜವಾದಿಗಳೂ ಮಾಡಲಿಲ್ಲ. ಸಾರ್ವಜನಿಕ ತಿಳುವಳಿಕೆಯ ಭಾಗವಾಗಿರದ ಹಲವಾರು ಹೋರಾಟಗಳನ್ನು ಸಮಾಜವಾದಿಗಳು ಕೈಗೊಂಡಿದ್ದಾರೆ. ಆದರೆಈ ಹೋರಾಟಗಳು ದ್ವೀಪಗಳ ರೀತಿಯಲ್ಲಿ ಇನ್ನಿತರ ಸಂಬಂಧಗಳನ್ನು ಕತ್ತರಿಸಿಕೊಂಡಿದ್ದವು. ಇದಕ್ಕೆ ಕಾರಣ ಸಾಂಘಿಕ ಯತ್ನಕ್ಕಿಂತ ವೈಯಕ್ತಿಕ ಪ್ರಯತ್ನಗಳ ಮೂಲಕವೇ ಹೋರಾಟಗಳನ್ನು ರೂಪಿಸಲಾಗುತ್ತಿದ್ದುದು.

೧೯೫೦ರ ದಶಕದಲ್ಲಿ ಒಮ್ಮೆ ರಾಮಮನೋಹರ್ ಲೋಹಿಯಾ ರೋಣ ತಾಲೂಕಿಗೆ (ಆಗ ಅದು ಧಾರವಾಡ ಜಿಲ್ಲೆಯಲ್ಲಿತ್ತು. ಈಗ ಗದಗ ಜಿಲ್ಲೆಗೆ ಸೇರ್ಪಡೆಗೊಂಡಿದೆ) ಬಂದಿದ್ದರು. ಆ ಸಂದರ್ಭದಲ್ಲಿ ಅವರನ್ನು ಬರಮಾಡಿಕೊಂಡವರೆಂದರೆ ವಿರೂಪಾಕ್ಷಪ್ಪ ಅಬ್ಬಿಗೇರಿಯವರೊಬ್ಬರೇ. ಕರ್ನಾಟಕದ ಹಲವಾರು ಪ್ರಮುಖ ಸಮಾಜವಾದಿ ಮುಖಂಡರು ಲೋಹಿಯಾರನ್ನು ಭೇಟಿ ಮಾಡುವ ಪ್ರಯತ್ನ ಮಾಡಿಲ್ಲ. ಇದೇ ರೋಣ ಕ್ಷೇತ್ರದಿಂದ ನೀಲಗಂಗಯ್ಯ ಪೂಜಾರ್ ಅವರು ಒಮ್ಮೆ ಶಾಸಕರಾಗಿದ್ದರು. ಆದರೂ ರೋಣದಲ್ಲಿ ಜರುಗಿದ ಕಾರ್ಯಕ್ರಮಗಳಿಗೆ ಅವರು ಹಾಜರಾಗಿರಲಿಲ್ಲ. ಹಾಗೆಯೇ ಮಧುಲಿಮೆ ಹೆಬ್ಬಳ್ಳಿಗೆ ಬಂದು ಸಂದರ್ಭದಲ್ಲಿ ಯಾರೊಬ್ಬರೂ ಅವರನ್ನು ಭೇಟಿ ಮಾಡಿರಲಿಲ್ಲ. ಯಾಕೆ ಹೀಗೆ? ಪಕ್ಷದ ಮುಖಂಡರೊಂದಿಗಿನ ಚರ್ಚೆಯಿಂದ ರಾಜ್ಯದಲ್ಲಿ ಪಕ್ಷವನ್ನು ಇನ್ನಷ್ಟು ಸಂಘಟಿಸುವ, ಮುನ್ನೆಡೆಸುವ ಬಗ್ಗೆ ಹೆಚ್ಚಿನ ಸಲಹೆ ಸೂಚನೆಗಳನ್ನು ಪಡೆಯಲು ಸಾಧ್ಯವಿರಲಿಲ್ಲವೇ? ಕರ್ನಾಟದ ಸಮಾಜವಾದಿ ಮುಖಂಡರು ಲೋಹಿಯಾ ಅಥವಾ ಸಮಾಜವಾದಿ ಎಂಬ ಒಂದೇ ಬೀಜದಿಂದ ಶಕ್ತಿ ಪಡೆದು ಬೆಳೆದಿದ್ದರೂ ಕೂಡಿಕೊಳ್ಳಲಾಗದ ಎಷ್ಟೊಂದು ಕವಲೊಡೆದಿದ್ದವು. ಇಲ್ಲಿನ ಸಮಾಜವಾದಿಗಳು ವೈಯಕ್ತಿಕ ವರ್ಚಸ್ಸಿಗೆ ಮಹತ್ವ ನೀಡುತ್ತಿದ್ದರೆನಿಸುತ್ತದೆ. ಗೋಪಾಲಗೌಡರಂತೂ ೧೯೫೫ರಲ್ಲಿ ಹೈದರಾಬಾದಿನಲ್ಲಿ ನಡೆದ ಸಮಾಜವಾದಿ ಸಮ್ಮೇಳನದಲ್ಲಿ ಪಕ್ಷದ ರಾಷ್ಟ್ರೀಯ ಕಾರ್ಯಕಾರಣಿಗೆ ಆಯ್ಕೆಯಾಗಿದ್ದರು.'ಮುಂಬೈ, ಹೈದರಾಬಾದ್, ದಿಲ್ಲಿ, ಪಾಟ್ನಾ, ಲಖನೌಗಳ ಸಾಂದರ್ಭಿಕ ಭೇಟಿ, ಅದರ ಜೊತೆಗೆ ವಿವಿಧ ಪ್ರದೇಶ ಭಾಷೆಗಳನ್ನು ಪ್ರತಿನಿಧಿಸುವ ರಾಜಕೀಯ ನಾಯಕರ ಸಂಪರ್ಕ, ಸಹಚರ್ಯಗಳ ಮೂಲಕ ಹುಟ್ಟಿಕೊಂಡ ಅಗ್ಗಳಿಕೆಯ ಭಾವನೆಯು ಅವರನ್ನು ಸುತ್ತಿಕೊಂಡು, ಅವರು ನಿರಂತರ ಮುಖವಾಡದ ಮರೆಯಲ್ಲೇ ಮುಖಮರೆಸಿಕೊಂಡು ಇರುವಂತಾಯಿತು'. (ಶಾಂತವೇರಿ ಗೋಪಾಲಗೌಡರು : ಒಂದು ಚಿತ್ರ, ಸಂಕ್ರಮಣ, ಸೆಪ್ಟೆಂಬರ್ ೧೯೯೮, ಪು.೩೭) ಗೋಪಾಲಗೌಡರಿಗಂತೂ ಕಾಗೋಡು ಚಳುವಳಿಯ ನಂತರ ಮತ್ತೊಂದು ಹೋರಾಟ ಸಂಘಟಿಸುವುದು ಸಾಧ್ಯವೇ ಆಗಲಿಲ್ಲ ರಾಜ್ಯದ ಪ್ರಮುಖ ನಾಯಕರಾಗಿ ಇತರ ಸಮಾಜವಾದಿಗಳ ಹೋರಾಟಗಳನ್ನು ಬೆಂಬಲಿಸುವ ಪ್ರಯತ್ನವನ್ನು ಸಹ ಮಾಡಲಿಲ್ಲ.

ಇನ್ನು ಸದಾಶಿವ ಕಾರಂತರು ೧೯೪೯ರಲ್ಲಿ ಬಾಂಬೆಗೆ ಹೋಗಿ ನೆಲೆಸಿದವರು ರಾಜ್ಯದ ಸಮಾಜವಾದಿಗಳಬಗ್ಗೆ ಚಿಂತಿಸಲೇ ಇಲ್ಲ. ಲೋಹಿಯಾ ಅವರೊಂದಿಗೆ ಆತ್ಮೀಯಸಂಪರ್ಕ ಬೆಳೆಸಿಕೊಂಡ ಇವರು, ಕೆಲವು ದಿನ ಲೋಹಿಯಾರೊಂದಿಗೆ ದೆಹಲಿಯಲ್ಲಿ

ವಾಸಮಾಡುತ್ತಿದ್ದರು. ‘ಸದಾಶಿವಕಾರಂತರು ತಮ್ಮ ಸಮಾಜವಾದಿ ದೀಕ್ಷಾಗುರು’ ಎಂದು ನೀಲಗಂಗಯ್ಯ ಪೂಜಾರ್ ತಿಳಿದಿದ್ದರು. ಆದರೆ ತಮ್ಮ ಶಿಷ್ಯನ ಸಮಾಜವಾದಿ ಚಟುವಟಿಕೆಗಳ ಬಗೆಗೆ ಅವರಲ್ಲಿ ಆಸಕ್ತಿ ಇರಲಿಲ್ಲ.

ನೀಲಗಂಗಯ್ಯ ಮತ್ತು ಗಂಗಾಧರ ಪದಕಿಯವರು ಸಹಿತ ಇತರ ಸಮಾಜವಾದಿಗಳನ್ನು ತಮ್ಮ ಹೋರಾಟದಲ್ಲಿ ಸೇರ್ಪಡೆ ಮಾಡಿಕೊಳ್ಳಲಿಲ್ಲ. ಈ ಬಗ್ಗೆ ಯಾವುದೇ ನಾಯಕರ ಸಲಹೆ-ಸಹಕಾರ್ ಕೋರಲಿಲ್ಲ. ಇದರ ಬಗ್ಗೆ ಯಾರೊಂದಿಗೂ ಪತ್ರ ಸಂವಾದವನ್ನೂ ಮಾಡಲಿಲ್ಲ. ಈ ಕಾರಣಕ್ಕಾಗಿಯೇ ಹೆಬ್ಬಳ್ಳಿ ಭೂರಹಿತ ರೈತ ಕೂಲಿಕಾರ್ಮಿಕರ, ಹೋರಾಟ ತನ್ನ ತತ್ ಕ್ಷಣದ ಗುರಿಯಾದ ಭೂಮಿ ಹಂಚಿಕೆಯ ಕುರಿತು ಸರ್ಕಾರದಿಂದ ಸ್ಪಷ್ಟ ಭರವಸೆಯನ್ನು ಪಡೆಯುತ್ತಿದ್ದ. ಹಾಗೆ ಹೋರಾಟ ಆಗಿಯೇ ಇಲ್ಲವೇನೋ ಎನ್ನುವಷ್ಟು ಸ್ತಬ್ಧವಾಯಿತು.

ಹಾಗೆ ನೋಡಿದರೆ ಕಾಗೋಡು ಚಳುವಳಿಯಿಂದ ಸಮಾಜವಾದಿಗಳು ಹೋರಾಟದ ಪಾಠಗಳನ್ನೇ ಕಲಿಯಲಿಲ್ಲವೇನೋ? ಕಾಗೋಡಿನಲ್ಲಿ ಚಳುವಳಿ ನಂತರದಲ್ಲಿ ಅದನ್ನು ಪರಮರ್ಶಿಸುವ ಗುರಿ ಸಾಧಿಸುವಲ್ಲಿ ಅಥವಾ ಸಾಧಿಸುವಲ್ಲಿ ಅಥವಾ ಸಾಧಿಸಬೇಕಿರುವಲ್ಲಿ ಎದುರಾಗಿದ್ದ ಅಡ್ಡಿ ಆತಂಕಗಳ ಕುರಿತು ಮರು-ವಿಮರ್ಶೆಗೆ ಸಮಾಜವಾದಿಗಳು ತೊಡಗಿಕೊಳ್ಳಲಿಲ್ಲ. ಹೆಬ್ಬಳ್ಳಿ ಪ್ರಸಂಗದಲ್ಲಿಯೂ ಕೂಡ ರೈತ ಕೂಲಿಕಾರ್ಮಿಕರಿಗೆ ಭೂಮಿ ಸಿಕ್ಕಿತೋ ಇಲ್ಲವೋ ಎನ್ನುವ ಬಗ್ಗೆ ನಿಲಗಂಗಯ್ಯ ಪುಜಾರ್ ಆಗಲಿ, ಗಂಗಾಧರ್ ಪದಕಿಯವರಾಗಲಿ ನಂತರದ ದಿನಗಳಲ್ಲಿ ಗಮನಿಸುವ ಪ್ರಯತ್ನ ಮಾಡಲಿಲ್ಲ. ಹೋರಾಟದ ನಂತರ ಎಲ್ಲರಿಗೂ ಭೂಮಿ ದೊರೆಯಲಿಲ್ಲ. ಸ್ವತಃ ಸಾಗ್ವ್ಯಲಿ ಮಾಡುತ್ತಿದ್ದ ಕೂಲಿಕಾರರು ತಮ್ಮ ಹೆಸರಿಗೆ ಭೂಮಿ ಪಡೆದುಕೊಳ್ಳಲು ೨೦ ರಿಂದ ೩೦ ವರ್ಷ ಕೋರ್ಟಿಗೆ ಮತ್ತು ಧಾರವಾಡ ತಾಲೂಕು ಕಚೇರಿಗೆ ಅಲೆದರು. ಹೆಬ್ಬಳ್ಳಿ ಭೂ ಹೋರಾಟವಾಗಿ ಸುಮಾರು ೫೦ ವರ್ಷಗಳು ಸಂದಿವೆ. ಇಂದಿಗೂ ಆರು ಪ್ರಕರಣಗಳಲ್ಲಿ ಸಾಗುವಳಿ ಮಾಡುತ್ತಿರುವ ರೈತರ ಹೆಸರಿಗೆ ಭೂಮಿ ಸ್ವಂತದ್ದಾಗಿಲ್ಲ. ಈ ಪ್ರಕರಣಗಳ ಇತ್ಯರ್ಥಕ್ಕಾಗಿ ಅಧಿಕಾರಿಗಳಿಗೆ ವಕೀಲರಿಗೆ ಸಾವಿರಾರು ರೂಪಾಯಿಗಳನ್ನು ಬಡರೈತ ಕೂಲಿಕಾರ್ಮಿಕರು ಕಳೆದುಕೊಂಡಿದ್ದಾರೆ.

ಹೆಬ್ಬಳ್ಳಿ ಕ್ಷೇತ್ರದ ಸಾಗುವಳಿದಾರರಾದ ಮೊರಬದ ಗದಿಗಪ್ಪ (ಸರ್ವೇ ನಂ, ೬೭೪), ಮಳಾಪುರ ಪಕ್ಕೀರಪ್ಪ ಸಿದ್ಲಿಂಗಪ್ಪ, ಕಡೇಮನಿ ಸಿದ್ದಪ್ಪ ಭೀಮಪ್ಪ (ಸರ್ವೇ ನಂ.೬೭೮), ಮುಲ್ಲಾ ಅಬ್ದುಲ್ ಸಾಬ್ ಹಯಾತ್ ಸಾಬ್ (ಸರ್ವೇ ನಂ. ೬೭೫, ೬೭೭), ಕಡೇಮನಿ ವೀರಭದ್ರಪ್ಪ ನಾಗಪ್ಪ (ಸರ್ವೇ ನಂ.೬೭೭) ತೇಗೂರು ಅಡಿವೆಪ್ಪ ಗುರಪ್ಪ (ಸರ್ವೇ ನಂ.೩೫೬)ಕುಂದಗೊಳ್ ಹನುಮಂತಪ್ಪ (ಸರ್ವೇ ನಂ.೧೪೭) ಇವರಿಗೆ ಈ ಹೊತ್ತಿಗೂ ಕೂಡ ಅಧಿಕೃತ ಮಾನ್ಯತಾ ಪತ್ರವನ್ನು (ಪಹಣಿಪತ್ರ) ಸರ್ಕಾರ ನೀಡಿಲ್ಲ. ಈ ಸಮ್ಬಂಧವಾಗಿ ಕಾನೂನಿನ ಪ್ರಕಾರ ನಡೆದುಕೊಂಡಿದ್ದರೂ ಅಧಿಕಾರಿಗಳ ಬೇಜವಾಬ್ದಾರಿಯಿಂದ ಈ ರೈತರು ತಾಲೂಕು ಕಚೇರಿಗೂ, ಕೋರ್ಟಿಗೂ ಅಲೆದಾಡುತ್ತಿದ್ದಾರೆ.

೨೦೦೩ರಲ್ಲಿ ಸರ್ಕಾರದಿಂದ ಅಧಿಕೃತವಾಗಿ ಮಂಜೂರಾತಿ ಪಡೆಯದೇ ಇರುವ ೨೫ ಪ್ರಕರಣಗಳು ಇದ್ದವು. ಇವುಗಳಲ್ಲಿ ೧೯ ಪ್ರಕರಣಗಳು ಇತ್ಯರ್ಥವಾಗಿವೆ. ಇನ್ನು ಆರು ಪ್ರಕರಣಗಳು ಬಾಕಿ ಉಳಿದಿವೆ. ಈ ಯಾವ ಪ್ರಕರಣಗಳಲ್ಲಿಯೂ ಕೂಡ ಮತ್ತೆ ಸಮಾಜವಾದಿಗಳು ಸಹಾಯಕ್ಕೆ ಬಂದಿಲ್ಲ. ನೀಲಗಂಗಯ್ಯ ಪೂಜಾರ ಮತ್ತು ಗಂಗಾಧರ ಪದಕಿಯವರು ವಕೀಲರಾಗಿದ್ದೂ ಬಡ ರೈತ ಕೂಲಿಕಾರರಿಗೆ ಸಹಾಯ ಒದಗಿಸಲಿಲ್ಲವೆಂದರೆ, ಹೋರಾಟ ನಂತರದ ದಿನಗಳಲ್ಲಿ ಪಡೆದುಕೊಂಡ ರೂಪ ಎಂತಹುದು ಎಂದು ತಿಳಿದುಬರುತ್ತದೆ.ಈ ಬಡರೈತಕೂಲಿಕಾರರು ತಮ್ಮ ಪಾಲಿಗೆ ಬರಬಹುದಾದ ೬-೭ ಎಕರೆ ಭೂಮಿಗಾಗಿ ಕಳೆದ ೫೦ ವರ್ಷಗಳು ಹೋರಾಡುತ್ತಿದ್ದಾರೆಂದರೆ ನೀಲಗಂಗಯ್ಯ ಪೂಜಾರ ಮತ್ತು ಗಂಗಾಧರ ಪದಕಿಯವರಂತಹ ಸಮಾಜವಾದಿಗಳ ೧೧ ದಿನಗಳ ಹೋರಾಟ ಸಾಧಿಸಿದ್ದಾದರೂ ಏನು ಎಂಬ ಪ್ರಶ್ನೆ ಉಳಿಯುತ್ತದೆ.

ಈ ಕಾರಣಕ್ಕಾಗಿಯೇ ಗಂಗಾಧರ ಪದಕಿಯವರು ಮಾತಿನ ಮಧ್ಯದಲ್ಲಿ ‘ನಾವು ಹೋರಾಟದ ನಂತರದ ದಿನಗಳಲ್ಲಿ ಹೆಬ್ಬಳ್ಳಿಯ ಕಡೆಗಮನ ಹರಿಸಲಾಗಲಿಲ್ಲ. ಅಲ್ಲಿಯ ರೈತ ಕೂಲಿಕಾರರು ಹೇಗೆ ಬದುಕುತ್ತಿದ್ದಾರೆಂಬುದೂ ತಿಳಿಯಲಿಲ್ಲ. ಕಳೆದ ಮೂವತ್ತು ನಲವತ್ತು ವರ್ಷಗಳಲ್ಲಿ

ನಾನು ಹೆಬ್ಬಳ್ಳಿಗೆ ಹೋಗಿಲ್ಲ. ಹಾಗೆ ನೋಡಿದರೆ ಹೋರಾಟದ ಫಲ ಏನು ಎಂಬುದನ್ನು ಗಮನಿಸಬೇಕಿತ್ತು. ಈ ವಿಷಯದಲ್ಲಿ ನಾವು ಫೇಲ್ಯೂರ್ ಆಗಿದ್ದೀವಿ' ಎಂದಿದ್ದರು.

ನೀಲಗಂಗಯ್ಯ ಪೂಜಾರ್ ತಮ್ಮದೊಂದು ಲೇಖನದಲ್ಲಿ (ಶಾಂತವೇರಿ ಗೋಪಾಲಗೌಡರು ಒಂದು ಚಿತ್ರ, ಸಂಕ್ರಮಣ, ಸೆಪ್ಟೆಂಬರ್ ೧೯೯೮, ಪು.೪೯-೪೭) ಶಾಂತವೇರಿ ಗೋಪಾಲಗೌಡರ ಬಗ್ಗೆ ಹಾಗೂ ಕಾಗೋಡಿನ ಬಗ್ಗೆ ಬರೆಯುತ್ತಾ 'ಕಾಗೋಡು ಚಳುವಳಿಯನ್ನು ರಾವುಗನ್ನಡಿ ಹಾಕಿ ತೋರಿಸಿ ಅದರ ಬಗ್ಗೆ ಮಿಥ್ಯಗಳನ್ನು ಸೃಷ್ಟಿಸಲಾಗಿದೆ' ಎಂದು ಆಕ್ಷೇಪಿಸಿದ್ದರು. ಅಲ್ಲದೆ ಕಾಗೋಡು ಚಳುವಳಿಯ ನಂತರದ ಸ್ಥಿತಿಯನ್ನು, ಶಿವಮೊಗ್ಗ ಸೋಷಿಯಲಿಸ್ಟರ ಧೋರಣೆಯನ್ನು ಅವರು ಖಂಡಿಸಿದ್ದಾರೆ. ಆದರೆ ಸ್ವತಃ ಇವರೇ ರೈತ ಕೂಲಿಕಾರ್ಮಿಕರ ಹೋರಾಟದ ನಂತರ ಹೆನ್ನಳ್ಳಿಯನ್ನು ಮರೆತರು. ಆದರೂ ತಮ್ಮ ನೇತೃತ್ವದ ಹೆಬ್ಬಳ್ಳಿ ಹೋರಾಟದ ಇಂಥದ್ದೊಂದು ಅದ್ಭುತ ಫಲದಾಯಿಯಾಗಿ ಪರ್ಯಾವಸನಗೊಂಡಿಲ್ಲ. ಎದ್ದು ಕಾಣುವಂತೆ ನಮ್ಮ ಎಲ್ಲ ಸತ್ಯಾಗ್ರಹಿಗಳ ಮುಂದುಗಡೆಯಲ್ಲಿ ಹರಿಜನ, ಹುಲಸೇರ, ಬೋಯಿಗಳನ್ನು ನಿಲ್ಲಿಸಲು ನಾವು ಮರೆತಿರಲಿಲ್ಲ. ಮೊದಲು ಬಂಧಿತರಾಗುತ್ತಿದ್ದವರೂ ಅವರೇ. ಹತ್ತು ದಿನಗಳ ಸತ್ಯಾಗ್ರಹಕ್ಕೆ ಐನೂರು ಸತ್ಯಾಗ್ರಹವನ್ನು ಪ್ರಾರಂಬಿಸಿ ಹತ್ತನೇ ದಿನಕ್ಕೆ ಸತ್ಯಾಗ್ರಹ ಮುಕ್ತಾಯಗೊಳಿಸಿದ್ದೆವು. ವಿಜಯವನ್ನು ಅಂಗೈಯಲ್ಲಿಟ್ಟುಕೊಂಡು ಮುಕ್ತಾಯಗೊಳಿಸಿದೆವು.' (ಅದೇ, ಪು.೩೭) ಎಂದು ಅವರು ಹೇಳುತ್ತಾರೆ.

ಆದರೆ ಈ ವಿಜಯೋತ್ಸವ ಆಚರಿಸುವ ಸಂದರ್ಭದಲ್ಲಿಯೂ ಕೂಡ ಪ್ರತಿ ಜಾಗೀರದಾರ ಕುಟುಂಬಗಳು ೨೦೦ ಎಕರೆ ಭೂಮಿ ಹೊಂದಿದ್ದವು. ಶ್ರೀ ವೆಂಕಟೇಶ್ವರ ಹಾಗು ಪಾಂಡುರಂಗ ದೇವಲಾಯಗಳಿಗೆ ಒಟ್ಟಾಗಿ ೪೫೦ ಎಕರೆ ಭೂಮಿ ಇತ್ತು. ಜಾಗೀರದಾರ ಮನೆತನಕ್ಕೆ ಒಟ್ಟಾರೆಯಾಗಿ ಮರು ಹಂಚಿಕೆಯಾದ ಭೂಮಿಯೇ ಸುಮಾರು ೩ ಸಾವಿರ ಎಕರೆ ಇತ್ತು. (ಈ ಬಗ್ಗೆ '೬೪೦ ಡ' ಎಂಬ ದಾಖಲಾತಿಯಲ್ಲಿ ವಿವರ ಇದೆ) ಈ ಬಗ್ಗೆ ಸಮಾಜವಾದಿಗಳು ಗಮನಹರಿಸಲಿಲ್ಲ. ಅವರಿಗೆ ತಮ್ಮ ತತ್ ಕ್ಷಣದ ಬೇಡಿಕೆಯಾದ ರೈತ ಕೂಲಿಕಾರ್ಮಿಕರಿಗೆ ಭೂಮಿ ಹಂಚಿಕೆ ಹಾಗೂ ಅಧಿಕೃತ ಮಾನ್ಯತಾ ಪತ್ರ ಪಡೆಯುವ ಬಗ್ಗೆ ಮಾತ್ರ ಆಸಕ್ತಿ ಇದ್ದಂತೆ ತೋರುತ್ತದೆ. ಆ ಬಗ್ಗೆ ಸರ್ಕಾರದಿಂದ ಸ್ಪಷ್ಟ ಭರವಸೆ ದೊರಕುತ್ತಿದ್ದ ಹಾಗೆ ಅದನ್ನೇ ನಂಬಿ ಹೋರಾಟವನ್ನು ಹಿಂತೆಗೆದುಕೊಂಡಿದ್ದು ೧೯೭೪ರಲ್ಲಿ ದೇವರಾಜ್ ಅರಸು ಅವರು ಜಾರಿಗೆ ತಂದ ಭೂಸುಧಾರಣಾ ಕಾಯ್ದೆಯಿಂದ ಅಲ್ಲಿವರೆಗೆ ಜಾಗೀರ್ ದಾರ್ ಮನೆತನದವರೇ ಇ ಸುಮಾರು ೩ ಸಾವಿರ ಎಕರೆ ಭೂಮಿಯನ್ನು ಅನುಭೋಗಿಸುತ್ತಿದ್ದರು.

ಸಮಾಜವಾದಿಗಳ ಈ ಹೋರಾಟದಿಂದ ಹೆಚ್ಚಿನ ಲಾಭ ಪಡೆದವರೆಂದರೆ ಮಧ್ಯಮ ವರ್ಗದ ರೈತ ಕುಟುಂಬಗಳು. ಈ ಕುಟುಂಬಗಳು ಜಾಗೀರ್ ದಾರ್ ಭೂಮಿಯಲ್ಲಿ ಗರಿಷ್ಠ ೪೮ ಎಕರೆಯನ್ನು ಸಾಗುವಳಿ ಮಾಡುತ್ತಿದ್ದರು. ಹಾಗಾಗಿ ಆದಾಯವೂ ಹೆಚ್ಚಿತ್ತು. ಹೋರಾಟದ ನಂತರದಲ್ಲಿ ಸರ್ಕಾರವು ಅಧಿಕೃತ ಮಾನ್ಯತಾ ಪತ್ರ ನೀಡುವಾಗ ಅಧಿಕಾರಿಗಳಿಗೆ, ಒಂದಿಷ್ಟು ಹಣ ನೀಡಿ ತ್ವರಿತವಾಗಿ ತಮ್ಮ ಹೆಸರಿಗೆ ಭೂಮಿಯನ್ನು ನೊಂದಾಯಿಸಿಕೊಂಡರು. ಗರಿಷ್ಠ ೪೮ ಎಕರೆ ಹೊಂದಿದ ಸಾಗುವಳಿದಾರರೆಲ್ಲ ೧೯೬೦ರ ದಶಕದಲ್ಲಿಯೇ ತಮ್ಮ ಹೆಸರಿಗೆ ಭೂಮಿ ನೊಂದಾಯಿಸಿಕೊಂಡರು.

ಈಗ ಎತ್ತಿರುವ ಪ್ರಶ್ನೆಗಳು ಹಾಗೂ ಚರ್ಚಿಸಿರಬಹುದಾದ ಮಿತಿಗಳೇನೇ ಇರಲಿ, ಸಮಾಜವಾದಿಗಳು ಕರ್ನಾಟಕದಲ್ಲಿ ಕೈಗೊಂಡಿರಬಹುದಾದ ರೈತ ಭೂಹೋರಾಟಗಳಲ್ಲಿ 'ಹೆಬ್ಬಳ್ಳಿ ರೈತಕೂಲಿಕಾರರ ಹೋರಾಟಕ್ಕೆ ವಿಶಿಷ್ಟಸ್ಥಾನವಿದೆ. ಸಾಮಾನ್ಯವಾಗಿ ರೈತ ಹೋರಾಟವೊಂದು ಇಷ್ಟೊಂದು ಶಾಂತಿಯುಕವಾಗಿ ಮುಕ್ತಾಯಗೊಂಡಿದ್ದು ಇದೇ ಹೋರಾಟದಲ್ಲಿರಬೇಕು. ಮುಖ್ಯವಾಗಿ ಸರ್ಕಾರವನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಲು ಪ್ರಯತ್ನಿಸಿ ಹೋರಾಟಗಾರರು ಯಶಸ್ವಿಯಾಗಿದ್ದರು. ಸರ್ಕಾರದಿಂದಾಗಲಿ ಪೋಲೀಸ್ ಅಧಿಕಾರಿಗಳಿಂದಾಗಲಿ ಹೋರಾಟಕ್ಕೆ ವಿರೋಧ ವ್ಯಕ್ತವಾಗಿರಲಿಲ್ಲ . ಖುದ್ದು ಜಾಗೀರದಾರ ಮನೆತನದವರು ಹೋರಾಟದ ಕುರಿತು ತಟಸ್ಥರಾಗಿರುವಂತೆ ಮಾಡಲಾಗಿತ್ತು. ಹೋರಾಟದ ಸಂದರ್ಭದಲ್ಲಾಗಲಿ, ಬೇರಾವ ಸನ್ನಿವೇಶದಲ್ಲಾಗಲಿ ಜಾಗೀರ್ದಾರರನ್ನು ಕೆಣಕುವ ಪ್ರಯತ್ನವನ್ನು ಯಾರೂ ಮಾಡಿರಲಿಲ್ಲ. ಅಂತಹದ್ದೊಂದು ಶಿಸ್ತುಬದ್ಧವಾದ ರೀತಿಯಲ್ಲಿ ಹೋರಾಟವನ್ನು ಸಂಘಟಿಸಲಾಗಿತ್ತು. ಹೋರಾಟ ಬಹುದಿನಗಳವರೆಗೆ

ಮುಂದುವರೆದಿದ್ದರೂ ನಿರಾಸಕ್ತಿ ಹೊಂದದಂತೆ ರೈತ ಕೂಲಿಕಾರ್ಮಿಕರನ್ನು ಸರದಿಯ ಪ್ರಕಾರ ಪ್ರತಿಭಟನೆಗೆ ಕಳುಹಿಸಲಾಗುತ್ತಿತ್ತು. ಇದು ಹೋರಾಟದ ಸಂದರ್ಭದಲ್ಲಿಯೇ ರೈತ ಕೂಲಿಕಾರ್ಮಿಕರ ಕುಟುಂಬ ನಿರ್ವಹಣೆಗೆ ಸಹಾಯಕವಾಗಿತ್ತು. ಎಲ್ಲಕ್ಕಿಂತ ಹೆಚ್ಚಾಗಿ ಇಡೀ ಹೋರಾಟವು ಅತ್ಯಲ್ಪ ಹಣದಲ್ಲಿಯೇ ಮುಕ್ತಾಯಗೊಂಡಿತ್ತು. ಹೋರಾಟಕ್ಕಾಗಿ ಯಾವುದೇ ಕರಪತ್ರಗಳನ್ನು, ಗೋಡೆಬರಹಗಳನ್ನಾಗಲಿ ಮಾಡಿರಲಿಲ್ಲ. ಕೇವಲ ೮೦ ರೂಪಾಯಿಗಳ ಖರ್ಚಿನಲ್ಲಿ ಹೋರಾಟವನ್ನು ಮುಕ್ತಾಯಗೊಳಿಸಲಾಗಿತ್ತು. ಸುಮಾರು ೧೩ ಸಾವಿರ ಎಕರೆ ಭೂಮಿಯ ಹಂಚಿಕೆಗೆ ಸಂಬಂಧಿಸಿದಂತೆ ಕೈಗೊಂಡ ಹೋರಾಟ ೮೦ ರೂಪಾಯಿಗಳಲ್ಲಿ ಮುಕ್ತಾಯಗೊಂಡಿತೆನ್ನುವುದು ಸಮಾಜವಾದಿ ಮುಖಂಡರ ಸರಳತೆಗೆ ಸಾಕ್ಷಿಯಾಗಿತ್ತು. ಹೆಬ್ಬಳ್ಳಿಯ ರೈತಕೂಲಿಕಾರ್ಮಿಕರ ಹೋರಾಟ ಮುಕ್ತಾಯಗೊಂಡಿರಬಹುದು; ಆದರೆ ನೀಲಗಂಗಯ್ಯ ಪೂಜಾರರ ಹೋರಾಟದ ಜೀವನ ಮುಕ್ತಾಯಗೊಳ್ಳಲಿಲ್ಲ. ಮುಂದೆ ಅವರು 'ಹುಬ್ಬಳ್ಳಿ ನಿವೇಶನ ರಹಿತ ನಾಗರಿಕರ ಹೋರಾಟ' ಸಂಘಟಿಸಿ ೩ ಸಾವಿರಕ್ಕಿಂತ ಹೆಚ್ಚು ಬಡವರಿಗೆ ನಿವೇಶನವನ್ನು ಕೊಡಿಸುವಲ್ಲಿ ಯಶಸ್ವಿಯಾದರು.